**ಸಂಪುಟ:** 05 **ಸಂಚಿಕೆ:** 341 **ಪುಟಗಳು:** 08 **ಸೋಮವಾರ** 23 **ಫೆಬ್ರವರಿ** 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ವೃಕ್ಷಕ್ಕೆ ದುಃಖ ಬೇರು ಎನಿಸಿದರೆ ಸಂತೋಷ ಕೊಂಬೆಗಳು, ಬೇರು ಕೊಂಬೆಗಳೆರಡೂ ಮರದ ಲವಲವಿಕೆಗೆ ಅಗತ್ಯ. ಅಂತೆಯೇ ಜೀವನಕ್ಕೆ ದುಃಖ ಮತ್ತು ಸಂತೋಷಗಳು..!

ಹೊಸ ನ್ಯೂಸ್ ಪೇಪರ್ ಆರಂಭಿಸಲು

**ಸುವರ್ಣಾವಕಾಶ!**

ನಿಮ್ಮದೇ ನ್ಯೂಸ್ ಪೇಪರ್ ಆರಂಭಿಸುವ ಕನಸಾ

ಮಾಧ್ಯಮ ಕ್ಷೇತ್ರದಲ್ಲಿ ನಿಮ್ಮದೇ ಗುರುತು ಮೂಡಿಸಲು ಇದು ಸುವರ್ಣಾವಕಾಶ. ಸಂಪೂರ್ಣ ಕಾನೂನುಬದ್ಧ ಹಾಗೂ ಅಧಿಕೃತ ಪ್ರಕ್ರಿಯೆಯ ಮೂಲಕ ನಿಮ್ಮ ಪತ್ರಿಕೆ ಆರಂಭಿಸಲು ಎಲ್ಲಾ ರೀತಿಯ ಮಾರ್ಗದರ್ಶನ ಹಾಗೂ ಸೇವೆಗಳನ್ನು ಒದಗಿಸಲಾಗುತ್ತದೆ.

- ಹೊಸ ನ್ಯೂಸ್ ಪೇಪರ್ ಹಾಕಿಕೊಡಲಾಗುವುದು
- PRGI ರಿಜಿಸ್ಟ್ರೇಷನ್ ಮಾಡಿ ಕೊಡಲಾಗುವುದು
- ಹಳೆಯ ಹಾಗೂ ಹೊಸ ಪತ್ರಿಕೆಗಳಿಗೆ RNI ತರಿಸಿಕೊಡಲಾಗುವುದು
- ನ್ಯೂಸ್ ಪೇಪರ್‌ಗೆ ಪ್ರಿಂಟಿಂಗ್ ಪ್ರೆಸ್ ಅನುಮತಿ ನೀಡಲಾಗುವುದು
- ನಿಮ್ಮ ಸ್ವಂತ ಪತ್ರಿಕೆ ಆರಂಭಿಸಲು ಇಂದೇ ಮೊದಲ ಹೆಜ್ಜೆ ಇಡಿ!

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

7411699198

GODITECHNOLOGIES

IT and Media Solutions

New Newspaper Registration Apply

OUR SERVICES:
- PRGI REGISTRATION
- Digital Media News editing
- e-filling
- Youtube logo registration
- Trademark registration
- Website Designing
- Epaper software

Contact :- 7411699198

goditechnologies@gmail.com

ನಿಮ್ಮ ಕನಸಿನ ಪತ್ರಿಕೆಗೆ ನಾವು ನಿಮ್ಮ ಜೊತೆಗೆ



# ಸಿಎಂ ಕುರ್ಚಿ ಬಿಡಿ ಎಚ್‌ಡಿಕೆ ಕಿಡಿ



**ರಾಜಕೀಯವಾಗಿ ಅತಂತ್ರವಾದಾಗ ಆಶ್ರಯ ನೀಡಿದ್ದ ಕಾಂಗ್ರೆಸ್ ಹಿರಿಯರನ್ನೇ ಮೂಲೆಗುಂಪು ಮಾಡಿ ಪಕ್ಷದ ಮೇಲೆ ಹಿಡಿತ ಸಾಧಿಸಿದ್ದ ಸಿದ್ದರಾಮಯ್ಯ, ಈಗ ಮುಖ್ಯಮಂತ್ರಿ ಕುರ್ಚಿ ಬಿಡುವುದಿಲ್ಲ ಎನ್ನುವುದನ್ನು ಹೇಳಲು ಜಾತಿಯ ಅಸ್ತ್ರ ಬಳಸಿರಬಹುದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.ಕುರಿ ಕಾಯುತ್ತಿದ್ದವನು ಮುಖ್ಯಮಂತ್ರಿ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ.**

- ಸಿಎಂ ಬದಲಾವಣೆ ಚರ್ಚೆ ಜೋರಾಗಿದ್ದು, ಈ ಬೆನ್ನಲ್ಲೆ ಸಿಎಂ ಆಪ್ತ ಸಚಿವ ಸತೀಶ್ ಜಾರಕಿಹೊಳಿ ಮಹತ್ವದ ಹೇಳಿಕೆ.
- ಬಜೆಟ್ ಬಳಿಕ ಏನಾಗುತ್ತೋ ಗೊತ್ತಿಲ್ಲ ಎಂದ ಜಾರಕಿಹೊಳಿ.
- ಕೆಲಸದ ನಿಮಿತ್ತ ಹೊಸದಿಲ್ಲಿಗೆ ಹೋಗುತ್ತಿರುತ್ತೇನೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿ ಮಾಡುವೆ ಎಂದ ಲೋಕೋಪಯೋಗಿ ಸಚಿವ

### ಶೀಘ್ರದಲ್ಲಿಯೇ ಗೊಂದಲ ಪರಿಹಾರ



ಖರ್ಗೆ ಭೇಟಿಯ ವೇಳೆ ಸಹಜವಾಗಿ ರಾಜಕೀಯ ವಿಷಯ ಮಾತಾಡಿದ್ದೇನೆ. ರಾಜ್ಯದಲ್ಲಿ ಸಿಎಂ ಹುದ್ದೆ ಬಗ್ಗೆ ಇರುವ ಗೊಂದಲ ಪರಿಹರಿಸಬೇಕು. ಇಲ್ಲವಾದರೆ ಕಾರ್ಯಕರ್ತರಲ್ಲಿ ಗೊಂದಲವಾಗುತ್ತದೆ ಎಂದು ಹೇಳಿದ್ದೇನೆ. ಶೀಘ್ರವಾಗಿ ಗೊಂದಲ ಪರಿಹರಿಸುವ ಭರವಸೆ ನೀಡಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

### ದಲಿತ ಸಿಎಂ ಆದರೂ ಅದು ಕಾಂಗ್ರೆಸ್‌ನಿಂದ



ಜಾತಿಯಿಂದ ಮಾತ್ರವಲ್ಲ, ಅರ್ಹತೆಯ ಬಲದಿಂದಲೇ ಮುಖ್ಯಮಂತ್ರಿಯಾಗುವಂತಹ ದಲಿತ ಸಮುದಾಯದ ನಾಯಕರು ಕೂಡ ಕಾಂಗ್ರೆಸ್ ಪಕ್ಷದಲ್ಲಿಯೇ ಇರುವುದು. ಮುಂದೊಂದು ದಿನ ದಲಿತ ಸಮುದಾಯದಿಂದ ಯಾರಾದಾರೂ ರಾಜ್ಯದ ಮುಖ್ಯಮಂತ್ರಿಯಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎನ್ನುವುದನ್ನು ವಿಶ್ವಾಸಪೂರ್ವಕವಾಗಿ ಹೇಳಬಲ್ಲೆ. ಇಂತಹದ್ದೊಂದು ಆಶಯವನ್ನು ಕೂಡ ವ್ಯಕ್ತಪಡಿಸುವ ಸ್ಥಿತಿಯಲ್ಲಿ ರಾಜ್ಯದ ಜೆಡಿಎಸ್ ಇಲ್ಲವೇ, ಬಿಜೆಪಿ ಇದೆಯೇ? ಇದು ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ, ಜೆಡಿಎಸ್‌ಗಳಿಗೆ ಇರುವ ವ್ಯತ್ಯಾಸ. ಆದ್ದರಿಂದ ನನ್ನ ವಿರುದ್ಧ ಜಾತಿ ರಾಜಕೀಯದ ಆರೋಪ ಮಾಡುತ್ತಿರುವವರು

- **ಉದಯವಾಹಿನಿ,ಬೆಂಗಳೂರು**

ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆ-ಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ ಎಂಬ ಬರಹವನ್ನು ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಕುರಿತು ಅವರು ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯ ಅವರು ಸಮಾಜಕ್ಕಾಗಿ ಅಥವಾ ಅವರೇ ಹೇಳುವ 'ಅಹಿಂದ' ಉದ್ಧಾರಕ್ಕಾಗಿ ಮುಖ್ಯಮಂತ್ರಿಯಾಗಿಲ್ಲ. ಅವರಿಗೆ ಬೇಕಿರುವುದು ಕುರ್ಚಿ ಅಷ್ಟೆ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಬರಲು ಕುರುಬರಷ್ಟೇ ಕಾರಣ ಅಲ್ಲ, ಇತರೆ ಜಾತಿಗಳ ಸಹಕಾರವೂ ಇದೆ. ಒಂದೇ ಜಾತಿ ಹೆಸರಿನಲ್ಲಿ ರಾಜಕೀಯ ಮಾಡಲು ಆಗದು. ಈಗಾಗಲೇ ಎಂಟು ವರ್ಷ ಮುಖ್ಯಮಂತ್ರಿ ಆಗಿದ್ದಾರೆ. ದಾಖಲೆಯ ಬಜೆಟ್ ಮಂಡಿಸಿದ್ದಾರೆ. ಈಗ ಅಧಿಕಾರಕ್ಕೆ ಅಂಟಿಕೊಳ್ಳಲು ತಮ್ಮ ಜಾತಿ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು. ಮುಖ್ಯಮಂತ್ರಿ ಸ್ಥಾನದಿಂದ ತಮ್ಮನ್ನು ಕೆಳಗೆ ಇಳಿಸಲು ಹೊರಟಿರುವವರ ಕುರಿತು ಸಿದ್ದರಾಮಯ್ಯ ಅವರು ಅಂತಹ ಪೋಸ್ಟ್ ಮಾಡಿರಬಹುದು ಎಂದು ಅವರು ಪ್ರತಿಕ್ರಿಯಿಸಿದರು.

ಪಕ್ಷದೊಳಗಿನ ನಾಯಕತ್ವ ಸಮಸ್ಯೆ ಪರಿಹಾರವಾಗಲಿದೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭರವಸೆ ಸಂತಸ ತಂದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.ದೆಹಲಿಯಲ್ಲಿ ವರಿಷ್ಠರನ್ನು ಭೇಟಿಯಾದ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷರು ನಾಯಕತ್ವ ಗೊಂದಲ ಬಗೆಹರಿಸುವ ಭರವಸೆ ನೀಡಿದ್ದಾರೆ ಎಂಬ ಸತೀಶ್ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು. 'ಗೊಂದಲ ಬಗೆಹರಿಸುವುದಾದರೆ ಬಹಳ ಸಂತೋಷ'ಎಂದು ಹೇಳಿದರು. ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟಂತೆ ಸೋಷಿಯಲ್ ಮೀಡಿಯಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೋಸ್ಟ್ ಮಾಡಿರುವ ಕುರಿತ ಪ್ರಶ್ನೆಗೆ ಉತ್ತರಿಸಿ, 'ಈ ಬಗ್ಗೆ ನನಗೆ ಮಾಹಿತಿ ಇಲ್ಲಎಂದಷ್ಟೇ ಹೇಳಿದರು. ಬಾಗಲಕೋಟೆ ಗಲಭೆ ಬಗ್ಗೆ ಮಾಧ್ಯಮದವರು ಗಮನ ಸೆಳೆದಾಗ, ನಿರಂತರ ಸಭೆಗಳ ಬಳಿಕ ಅಸ್ವಾಸ್ಥ್ಯದಿಂದ ಶುಕ್ರವಾರ ತಡರಾತ್ರಿ ನಾನು ಬೆಂಗಳೂರಿಗೆ ಮರಳಿದ್ದೇನೆ. ಬಹಳ ಆಯಾಸವಾಗಿದೆ. ಈ ವಿಚಾರವಾಗಿ ನನಗೆ ಮಾಹಿತಿ ಇಲ್ಲ, ಈ ಬಗ್ಗೆ ಮಾಹಿತಿ ಪಡೆಯುತ್ತೇನೆ ಎಂದು ಸ್ಪಷ್ಟಪಡಿಸಿದರು. ಅಲ್ಲಿಗೆ ಕಾಂಗ್ರೆಸ್ ನಿಯೋಗ ಭೇಟಿ ನೀಡಿದ್ದು ಪರಿಹಾರ ನೀಡಲಾಗುವುದೇ ಎಂಬ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ಅಧಿಕಾರಿಗಳು ನಮಗೆ ವರದಿ ನೀಡಲಿದ್ದು, ನಂತರ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.



ಈ ನಡುವೆ ಶಿವಕುಮಾರ್ ಬೆಂಬಲಿಗ ಹಾಗೂ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರು, ಫೆಬ್ರವರಿ 26ರಂದು ಶಿವಕುಮಾರ್ ಅವರನ್ನು ನವದೆಹಲಿಗೆ ಕರೆಸಿ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಕುರಿತು ತೀರ್ಮಾನ ಕೈಗೊಳ್ಳಲು ಹೈಕಮಾಂಡ್ ಕರೆ ನೀಡಿದೆ ಎಂದು ಹೇಳಿದ್ದಾರೆ.ನಾನು ಸೇರಿದಂತೆ ಎಲ್ಲಾ 140 ಕಾಂಗ್ರೆಸ್ ಶಾಸಕರು ನಾಯಕತ್ವ ಬದಲಾವಣೆ ಬಯಸುತ್ತಾರೆ. ಇದರಲ್ಲಿ ಯಾವುದೇ ಗುಂಪು ರಾಜಕೀಯ ಅಥವಾ ವೈಯಕ್ತಿಕ ಹಿತಾಸಕ್ತಿಗಳಿಲ್ಲ ಎಂದು ಹೇಳಿದ್ದಾರೆ.ಇದೇ ವೇಳೆ, ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

**1** ಒಕ್ಕಲಿಗರ ಮೇಲೆ ನಿಮ್ಮ ಪ್ರೀತಿ ಪ್ರದರ್ಶನಕ್ಕಿದು ಸಕಾಲ: ಹೆಚ್‌ಡಿಕೆ

**2** ಮುಖ್ಯಮಂತ್ರಿ ಕುರ್ಚಿಗಾಗಿ ಜಾತಿ ಅಸ್ತ್ರ ಸಿದ್ದರಾಮಯ್ಯ ವಿರುದ್ಧ ಎಚ್‌ಡಿಕೆ ಕಿಡಿ

**3** ಬಜೆಟ್ ಬಳಿಕ ಏನಾಗುತ್ತೋ ಗೊತ್ತಿಲ್ಲ ಎಂದ ಸಿದ್ದರಾಮಯ್ಯ ಆಪ್ತ ಸತೀಶ್ ಜಾರಕಿಹೊಳಿ

**ಸಿಎಂಗೆ ಹೆಚ್‌ಡಿಕೆ ತಿರುಗೇಟು**

### ಕಲ್ಲು ಹೊಡೆಯುವ ಪ್ರಕರಣ ಹೆಚ್ಚಾಗಿದೆ

ಬಾಗಲಕೋಟೆ ಕಲ್ಲು ತೂರಾಟ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಕಲ್ಲು ಹೊಡೆಯುವ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಸರ್ಕಾರ ಬಂದ ಮೇಲೆ ಮದ್ದೂರು, ನಾಗಮಂಗಲ ಸೇರಿ ಅನೇಕ ಕಡೆ ಮೆರವಣಿಗೆ ಮಾಡುವಾಗಾ ಗಲಭೆಗಳು ನಡೆದವು.

ಈಗ ಬಾಗಲಕೋಟೆಯಲ್ಲಿ ಆಗಿದೆ. ಪೊಲೀಸರ ಮೇಲೆ ಕಲ್ಲು ಹೊಡೆದಿದ್ದಾರೆ. ಈ ಘಟನೆ ಖಂಡನೀಯ. ಕಠಿಣ ಕ್ರಮ ಕೈಗೊಳ್ಳುವ ಕೆಲಸ ಆಗಬೇಕು ಆಗ್ರಹಿಸಿದರು.

### ಮನರೇಗಾ ಬಚಾವ್ ಸಮಾವೇಶ

ಸೋಮವಾರ ಚಿಕ್ಕಬಳ್ಳಾಪುರದಲ್ಲಿ ಮನರೇಗಾ ಬಚಾವ್ ಸಮಾವೇಶ ಹಮ್ಮಿಕೊಂಡಿದ್ದೇವೆ. ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪಾಲ್ಗೊಳ್ಳಲಿದ್ದಾರೆ. ಮನರೇಗಾ ರಕ್ಷಣೆಗೆ ಆಗ್ರಹಿಸಿ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಪಾದಯಾತ್ರೆ ನಡೆಸಲಾಗಿದ್ದು, ಬಾಕಿ ಇರುವ ಕ್ಷೇತ್ರಗಳಲ್ಲೂಪಾದಯಾತ್ರೆ ನಡೆಸಲಾಗುವುದು ಎಂದು ಹೇಳಿದರು.

### ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ ರಚನೆ ಶೀಘ್ರ

ಸಮನ್ವಯ ಸಮಿತಿ ಆಗಬೇಕು ಅಂತ ಬಜೆಪಿ ಕಾರ್ಯಕಾರಣಿಯಲ್ಲಿ ಚರ್ಚೆ ಆಗಿದೆ. ಗೊಂದಲ ಸರಿಪಡಿಸಲು ಸಮಿತಿ ಅಗಬೇಕು ಅಂತ ನಾನು ಮೊದಲಿಂದ ಹೇಳಿದ್ದೇನೆ. ಅವರಲ್ಲಿ ಸಮಿತಿ ಮಾಡಬೇಕು ಅಂತ ಅವರ ಭಾವನೆ ಇದೆ. ನಮ್ಮ ಪಕ್ಷದಿಂದ ಮೈತ್ರಿಯ ಹೊಂದಾಣಿಕೆಗೆ ಚ್ಯುತಿ ಬಾರದಂತೆ ನಾವು ನಡೆದುಕೊಳ್ತೀವಿ. ಈ ಬಗ್ಗೆ ಯಾರಿಗೂ ಸಂಶಯ ಬೇಡ ಎಂದು ಕುಮಾರಸ್ವಾಮಿ ಹೇಳಿದರು.

## ಲೋಕಾಯುಕ್ತ ಸ್ವತಂತ್ರ ಸಂಸ್ಥೆ, ತನಿಖಾ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ

- **ಉದಯಯುವಾಹಿನಿ,ಬೆಂಗಳೂರು**

ಲೋಕಾಯುಕ್ತ ಒಂದು ಸ್ವತಂತ್ರ ಸಂಸ್ಥೆಯಾಗಿದ್ದು, ಅದರ ತನಿಖಾ ವಿಷಯಗಳಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ. ಈ ಪ್ರಕರಣದ ಬಗ್ಗೆ ಬಿಜೆಪಿಯವರೇ ಉತ್ತರಿಸಬೇಕು ಮತ್ತು ಅವರೇ ವ್ಯಾಖ್ಯಾನ ಮಾಡಿಕೊಳ್ಳಲಿ ಎಂದು ಡಿಸಿಎಂ ಡಿಕೆಶಿ ಹೇಳಿದರು. ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿರುವ ಶಾಸಕ ಇಕ್ಬಾಲ್ ಹುಸೇನ್, ರವಿ ಮತ್ತು ಶಿವಗಂಗಾ ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಡಿಸಿಎಂ, ಅವರೆಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರೆ ನನಗೆ ಮತ್ತು ಪಕ್ಷಕ್ಕೆ ಒಳ್ಳೆಯದು ಎಂದರು.

ವಿದೇಶ ಪ್ರವಾಸಕ್ಕೆ ತೆರಳಿರುವ ಶಾಸಕರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, ಹೋದವರೆಲ್ಲರೂ ನಮ್ಮವರೇ.

ಅವರು ಮರಳಿದ ನಂತರ ಯಾವ ಕಾರಣಕ್ಕೆ ಪ್ರವಾಸ ಹೋಗಿದ್ದರು ಎಂಬುದರ ಬಗ್ಗೆ ಮಾತನಾಡುತ್ತೇನೆ ಎಂದು ತಿಳಿಸಿದರು.

## ರಾಜ್ಯದಲ್ಲಿ ತಮಿಳುನಾಡು ಮಾದರಿ ಶಿಕ್ಷಕರ ನೇಮಕ ವ್ಯವಸ್ಥೆ ಬರಲಿ

- **ಉದಯವಾಹಿನಿ,ಹಾವೇರಿ**


ಒಬ್ಬ ಶಿಕ್ಷಕರು ನಿವೃತ್ತರಾಗುವ ಮುಂಚಿನ ವರ್ಷ ಇನ್ನೊಬ್ಬ ಶಿಕ್ಷಕರ ನೇಮಕ ಮಾಡುವ ತಮಿಳುನಾಡು ಮಾದರಿಯಲ್ಲಿ ರಾಜ್ಯದಲ್ಲಿಯೂ ಶಿಕ್ಷಕರ ನೇಮಕಾತಿ ವ್ಯವಸ್ಥೆ ಜಾರಿಗೆ ಬಂದರೆ ಶಿಕ್ಷಕರ ಹುದ್ದೆ ಖಾಲಿ ಇರುವುದನ್ನ ತಪ್ಪಿಸಲು ಸಾಧ್ಯ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹಿರಿಯ ಪ್ರಾಥಮಿಕ ಶಾಲೆಯ 21ನೇ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಸರಸ್ವತಿ ಪೂಜೆ , 7ನೇ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

## ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಕುಸಿತ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ!

- **ಉದಯಯುವಾಹಿನಿ,ಬೆಂಗಳೂರು**

ಕಳೆದ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿತ್ತು, ಹೀಗಾಗಿ ಮುಂಬರುವ ತಿಂಗಳುಗಳಲ್ಲಿ ನೀರಿಗೆ ಯಾವುದೇ ತೊಂದರೆಗಳಿಲ್ಲ ಎಂಬ ಭರವಸೆ ಮೂಡಿಸಿತ್ತು, ಆದರೆ ವಾಸ್ತವ ಬೇರೆಯೇ ಇದೆ.ರಾಜ್ಯದ 13 ಪ್ರಮುಖ ಅಣೆಕಟ್ಟುಗಳ ಪೈಕಿ ಹತ್ತು ಜಲಾಶಯಗಳಲ್ಲಿ ಈಗ ಹಿಂದಿನ ವರ್ಷಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ. ಹೆಚ್ಚುತ್ತಿರುವ ತಾಪಮಾನದಿಂದಾಗಿ ಅಣೆಕಟ್ಟುಗಳಿಂದ ನೀರು ಆವಿಯಾಗುವಿಕೆ ಇದಕ್ಕೆ ಪ್ರಮುಖ ಕಾರಣವಾಗಿದೆ, ಅತಿಯಾದ ಬಳಕೆ ಅಂತರ್ಜಲದ ಮೇಲೂ ಪರಿಣಾಮ ಬೀರಿದೆ.

ಈ ಬೇಸಿಗೆಯಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಕುಡಿಯುವ ನೀರು ಕಳವಳಕಾರಿಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಮಾಹಿತಿಯ ಪ್ರಕಾರ, 2025 ರಲ್ಲಿ ಎಲ್ಲಾ 13 ಅಣೆಕಟ್ಟುಗಳಲ್ಲಿ ನೀರಿನ ಸಂಗ್ರಹವು 535 ಸಾವಿರ ಮಿಲಿಯನ್ ಘನ ಅಡಿ (ಟಿಎಂಸಿಎಫ್‌ಟಿ) ಆಗಿತ್ತು, ಆದರೆ ಈಗ ಅದು 493 ಟಿಎಂಸಿಎಫ್‌ಟಿ ಆಗಿದೆ, 42 ಟಿಎಂಸಿಎಫ್‌ಟಿಯ ವ್ಯತ್ಯಾಸವಾಗಿದೆ. ಕಳೆದ ವರ್ಷ ತುಂಗಭದ್ರಾ ಅಣೆಕಟ್ಟೆಯಲ್ಲಿ ಸುಮಾರು 40 ಟಿಎಂಸಿಎಫ್‌ಟಿ ನೀರು ಇದ್ದು, ಈಗ ಅದು 24 ಟಿಎಂಸಿಎಫ್‌ಟಿಗೆ ಇಳಿದಿದೆ. ಅದೇ ರೀತಿ, ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಈಗ 87 ಟಿಎಂಸಿಎಫ್‌ಟಿ ಇದೆ, ಕಳೆದ ವರ್ಷ 78 ಟಿಎಂಸಿಎಫ್‌ಟಿ ಇದೆ. ಸೂಪಾ ಅಣೆಕಟ್ಟಿನ ನೀರಿನ ಮಟ್ಟ 82 ಟಿಎಂಸಿಎಫ್‌ಟಿಯಿಂದ 77 ಅಡಿಗೆ ಇಳಿದಿದೆ. ಕೃಷ್ಣರಾಜ ಜಲಾಶಯದಲ್ಲಿ ಸ್ವಲ್ಪ ಹೆಚ್ಚಳವಾಗಿದೆ. ಕಳೆದ ವರ್ಷ ಇದು 37.88 ಟಿಎಂಸಿಎಫ್‌ಟಿ ಇತ್ತು, ಈಗ ಅದು 38.64 ಟಿಎಂಸಿಎಫ್‌ಟಿ ಆಗಿದೆ. 13 ಅಣೆಕಟ್ಟುಗಳಲ್ಲಿ ಒಟ್ಟು



ಸಾಮರ್ಥ್ಯ 895.07 ಟಿಎಂಸಿ ಅಡಿಯಿದೆ. ಆದರೆ ಸದ್ಯ 493.91 ಟಿಎಂಸಿ ಅಡಿಯಿದೆ. ಸಾಮರ್ಥ್ಯದ ಶೇ. 45ರಷ್ಟು ಮಾತ್ರ ನೀರು ಸಂಗ್ರಹವಾಗಿದೆ. ಕಳೆದ ವರ್ಷ ಕ್ರೆಸ್ಟ್ ಗೇಟ್‌ಗಳು ಮುರಿದು ನೀರು ನಷ್ಟವಾದ ಕಾರಣ ತುಂಗಭದ್ರಾ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸಲು ಸಾಧ್ಯವಿಲ್ಲ ಎಂದು ಕೆಎಸ್‌ಎನ್‌ಡಿಎಂಸಿಯ ಮಾಜಿ ನಿರ್ದೇಶಕ ಶ್ರೀನಿವಾಸ್ ರೆಡ್ಡಿ ಹೇಳಿದ್ದಾರೆ. ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದ್ದರೂ, ಜಲಾಶಯವು ಅದರಲ್ಲಿ ಶೇ, 70 ರಷ್ಟು ಮಾತ್ರ ಸಂಗ್ರಹಿಸಲು ಸಾಧ್ಯವಾಯಿತು ಎಂದು ಹೇಳಿದ್ದಾರೆ. ಕುಡಿಯುವ ನೀರಿನ ಅಗತ್ಯಗಳೇ ಆದ್ಯತೆಯಾಗಿರುವುದರಿಂದ ರೈತರು ಕೃಷಿ ಜಮೀನುಗಳಿಗೆ ನೀರು ಸರಬರಾಜು ಮಾಡದೆ ತೀವ್ರ ಸಂಕಷ್ಟದಲ್ಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ನೀರಿನ ನಷ್ಟದ ಬಗ್ಗೆ ವಿವರಿಸಿದ ರೆಡ್ಡಿ, ಹೆಚ್ಚುತ್ತಿರುವ ತಾಪಮಾನವು ನೀರು

## ಸರ್ಕಾರಿ ಶಾಲೆಗಳ ಮಧ್ಯಾಹ್ನದ ಬಿಸಿಯೂಟದಲ್ಲಿ ಹುಳುಗಳು ಪತ್ತೆ: ಪೂರೈಕೆದಾರರ ವಿರುದ್ಧ ಕಠಿಣ ಕ್ರಮ!

- **ಉದಯಯುವಾಹಿನಿ, ಬೆಂಗಳೂರು**

ರಾಜ್ಯಾದ್ಯಂತ ಹಲವಾರು ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದಲ್ಲಿ ಹುಳುಗಳು ಪತ್ತೆ ಎಂಬ ಹಲವಾರು ಸುದ್ದಿ ವರದಿಗಳನ್ನು ಗಂಭೀರವಾಗಿ ಪರಿಗಣಿಸಿದ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ (ಕೆಎಫ್ ಸಿಎಸ್ ಸಿ) 20 ಜಿಲ್ಲೆಗಳ ಶಾಲೆಗಳು ಮತ್ತು ಆಹಾರ ಧಾನ್ಯಗಳನ್ನು ಸಂಗ್ರಹಿಸಿರುವ ಗೋದಾಮುಗಳಿಗೆ ಭೇಟಿ ನೀಡಿದೆ. ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸುವ ಧಾನ್ಯಗಳ ಗುಣಮಟ್ಟದ ಬಗ್ಗೆ ಆಯೋಗವು ಶೀಘ್ರದಲ್ಲೇ ಮಾಹಿತಿ ಸಂಗ್ರಹಿಸಿ, ಶಿಫಾರಸುಗಳೊಂದಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ನಾವು 20 ಜಿಲ್ಲೆಗಳಲ್ಲಿ ನಡೆಸಿದ ತಪಾಸಣೆಯ ಸಮಯದಲ್ಲಿ, ಕಲಬುರ್ಗಿ, ಮಂಡ್ಯ, ತುಮಕೂರು ಮತ್ತು ಮೈಸೂರು ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ಹುಳುಗಳಿಂದ ತುಂಬಿದ ಆಹಾರ ಧಾನ್ಯಗಳು ಕಂಡುಬಂದವು.

ಹುಳುಗಳಿಂದ ತುಂಬಿದ ಅಕ್ಕಿ ಮತ್ತು ದ್ವಿದಳ ಧಾನ್ಯಗಳನ್ನು ನಾನು ವಾಪಸ್ ಕಳುಹಿಸಿ ಬದಲಿ ತರುವಂತೆ ಆದೇಶಿಸಿದೆ.

ಶಾಲೆಗಳಿಗೆ ತಾಜಾ ಆಹಾರ ಧಾನ್ಯಗಳು ಬಂದಿವೆ. ಶಾಲೆಗಳಿಗೆ ಹುಳುಗಳಿಂದ ತುಂಬಿದ ಆಹಾರ ಧಾನ್ಯಗಳನ್ನು ಹೇಗೆ ಪೂರೈಸಲಾಗಿದೆ ಎಂದು ನಾವು ವಿಚಾರಿಸುತ್ತಿದ್ದೇವೆ ಎಂದು ಕೆಎಸ್‌ಎಫ್‌ಸಿ ಅಧ್ಯಕ್ಷ ಎಚ್ ಕೃಷ್ಣ ಟಿಎನ್ ಐಇಗೆ ತಿಳಿಸಿದ್ದಾರೆ. ಮಕ್ಕಳಿಗೆ ಅಡುಗೆ ಮಾಡಲು ಶಾಲೆಗಳಲ್ಲಿ



ಸಿಬ್ಬಂದಿ ಕೊರತೆ ಇದೆ ಎಂಬ ಬಗ್ಗೆ ಮಾಹಿತಿ ನೀಡಿದ ಅವರು ಅನೇಕ ಶಾಲೆಗಳಲ್ಲಿ, ವಿದ್ಯಾರ್ಥಿಗಳಿಗೆ ಅಡುಗೆ ಮಾಡುವ ಕೆಲಸದ ಹೊರೆ ಶಿಕ್ಷಕರ ಮೇಲಿದೆ. ಆಹಾರ ಧಾನ್ಯಗಳನ್ನು ನೋಡಿಕೊಳ್ಳುವುದು, ಮೊಟ್ಟೆ, ಬಾಳೆಹಣ್ಣು ಮತ್ತು ಆಹಾರವನ್ನು ಬೇಯಿಸಲು ಅಗತ್ಯವಿರುವ ಇತರ ದಿನಸಿ ವಸ್ತುಗಳನ್ನು ಖರೀದಿಸುವ ಜವಾಬ್ದಾರಿಗಳನ್ನು ಶಿಕ್ಷಕರು ಅಥವಾ ಪ್ರಾಂಶುಪಾಲರಿಗೆ ವಹಿಸಲಾಗಿದೆ. ಈ ಎಲ್ಲಾ ವಿವರಗಳನ್ನು ನಮೂದಿಸಬೇಕು. ಹುಳುಗಳನ್ನು ಹೊಂದಿರುವ ಧಾನ್ಯಗಳು ಗಮನಕ್ಕೆ ಬಾರದೇ ಇರುವುದು ಆಶ್ಚರ್ಯವೇನಿಲ್ಲ ಎಂದು ಅವರು ಹೇಳಿದರು. ಸರ್ಕಾರವು ಅಂತಹ ಪೂರೈಕೆದಾರರನ್ನು ತಕ್ಷಣವೇ ಕಪ್ಪುಪಟ್ಟಿಗೆ ಸೇರಿಸಬೇಕು.

ಆಹಾರ ಧಾನ್ಯಗಳ ಗುಣಮಟ್ಟವನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಶಾಲೆಗಳಲ್ಲಿನ ಬೋಧಕೇತರ ಸಿಬ್ಬಂದಿಗೆ ವಹಿಸಬೇಕು. ಮೇಲ್ವಿಚಾರಣೆಯನ್ನು ಮಾತ್ರ ಬೋಧಕ ಸಿಬ್ಬಂದಿಗೆ ವಹಿಸಬೇಕು.

## ಚಂದ್ರು ಲಮಾಣಿ ಷಡ್ಯಂತ್ರಕ್ಕೆ ಬಲಿಯಾದ್ರು: ಛಲವಾದಿ ನಾರಾಯಣಸ್ವಾಮಿ

- **ಉದಯಯುವಾಹಿನಿ,ಬೆಂಗಳೂರು**

ಭೈರತಿ ಬಸವರಾಜು, ಸಿ.ಕೆ.ರಾಮಮೂರ್ತಿ, ಆರ್.ಅಶೋಕ್ ಟಾರ್ಗೆಟ್ ಆಗಿದ್ದಾರೆ. ಚಂದ್ರು ಲಮಾಣಿ ಷಡ್ಯಂತ್ರದ ಭಾಗವಾಗಿ ಬಲಿಯಾದ್ರು ಎಂದು ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದರು.

ಚಂದ್ರು ಲಮಾಣಿ ಲೋಕಾಯುಕ್ತ ಟ್ರ್ಯಾಪ್ ವಿಚಾರವಾಗಿ ಪ್ರತಿಕ್ರಿಯಿಸಿ, ನಮ್ಮ ಪಕ್ಷ ಭ್ರಷ್ಟಾಚಾರವನ್ನು ಸಹಿಸಲ್ಲ. ಚಂದ್ರು ಲಮಾಣಿ ವಿರುದ್ಧದ ಷಡ್ಯಂತ್ರದ ಆಡಿಯೋ ನನಗೂ ಬಂತು. ಸ್ವಾಮೀಜಿಯೊಬ್ರು ಸಂಚು ಮಾಡಿದ್ದಾರೆ ಅಂದ್ರೆ ಅದು ಟಾರ್ಗೆಟ್ ಆಯ್ತಲ್ಲ. ಈ ಸರ್ಕಾರ ಟಾರ್ಗೆಟ್ ಮಾಡ್ತಿದೆ ನಮ್ಮನ್ನು. ಭೈರತಿ ಬಸವರಾಜು, ಸಿ.ಕೆ.ರಾಮಮೂರ್ತಿ, ಆರ್.ಅಶೋಕ್ ಟಾರ್ಗೆಟ್ ಆಗಿದ್ದಾರೆ. ಚಂದ್ರು ಲಮಾಣಿ ಷಡ್ಯಂತ್ರದ ಭಾಗವಾಗಿ ಬಲಿಯಾದ್ರು. ನನ್ನ ಹಿಂದೆ ಪಿಹೆಚ್‌ಡಿ ನಡೀತಿದೆ. ಅವರು ಏನೇ ಮಾಡಿದ್ರೂ ನಾನು ಸಿಕ್ಕಲ್ಲ ಎಂದರು.ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ, ಪ್ರಿಯಾಂಕ್ ಖರ್ಗೆಗೆ ಬೇರೇನೂ ಕೆಲಸವಿಲ್ಲ. ಕೊಟ್ಟ ಕುದುರೆ ಏರದವನು ಶೂರನೂ ಅಲ್ಲ, ವೀರನೂ ಅಲ್ಲ.

ಅವರು ಹೆಸರಿಗೆ ದಲಿತ ನಾಯಕ, ಅವರಲ್ಲಿ ದಲಿತತ್ವ ಉಳಿದಿಲ್ಲ. ಅವರು ಒಬ್ಬ ರಾಜಕಾರಣಿಯೇ ಅಲ್ಲ. ಪ್ರಿಯಾಂಕ್ ಖರ್ಗೆ ಒಳಮೀಸಲಾತಿ ಬಗ್ಗೆ ಒಂದು ದಿನವೂ ಮಾತಾಡಿಲ್ಲ. ಅಂಬೇಡ್ಕರ್ ಬಗ್ಗೆ ಮಾತಾಡೋಕೆ ಅವರಿಗೆ ನೈತಿಕತೆ ಇಲ್ಲ. ಅವರು ನನ್ನ ರಾಜೀನಾಮೆ ಕೇಳಿದ್ದಾರೆ. ನಾನ್ಯಾಕೆ ರಾಜೀನಾಮೆ ಕೊಡಲಿ ನಾನು ಅವರ ಸ್ವಯಾರ್ಜಿತದಲ್ಲಿ ಇಲ್ಲ. ಅವರು ಅಪ್ಪನ ನೆರಳಲ್ಲಿ ರಾಜಕಾರಣ ಮಾಡೋರು. ಪ್ರಿಯಾಂಕ್ ಖರ್ಗೆ ಒಬ್ಬ ಫೇಲ್ ಕ್ಯಾಂಡಿಡೇಟ್. ನಾನು ಕಾಂಗ್ರೆಸ್‌ನವ್ರನ್ನು ಬೈಯ್ತಿಲ್ಲ, ಅವರ ನ್ಯೂನತೆಗಳನ್ನು ಎತ್ತಿ ತೋರಿಸ್ತಿದ್ದೀನಿ ಅಷ್ಟೇ. ಕಾಂಗ್ರೆಸ್‌ನವರ ಫೋಟೋಗಳಿಗೆ ಚಪ್ಪಲಿಯಲ್ಲೇ ಹೊಡೀತಿದ್ದಾರೆ. ನನ್ನ ಬಗ್ಗೆ ಏನು ಬೇಕಾದರೂ ಹೇಳಲಿ.

ಅವಿವೇಕಿಗಳಿಗೆ ಉತ್ತರ ಕೊಡಲು ಹೋಗಬಾರದು ಎಂದು ತಿರುಗೇಟು ನೀಡಿದರು.ಸಾಮಾಜಿಕ ನ್ಯಾಯ ಯಾರ ಅಪ್ಪನ ಸ್ವತ್ತೂ ಅಲ್ಲ, ಕಾಂಗ್ರೆಸ್‌ನಲ್ಲಿ ಅದು ಇಲ್ವೇ ಇಲ್ಲ. ನಮ್ಮಲ್ಲಿ ಡಿಸಿಎಂ ಆಗಿ ದಲಿತರನ್ನು ಮಾಡಿದ್ವಿ. ಪರಮೇಶ್ವರ್ ಅವರನ್ನು, ಖರ್ಗೆ ಅವರನ್ನು ಸೋಲಿಸಿದ್ದು ಸಿದ್ದರಾಮಯ್ಯ ಮತ್ತು ಟೀಮ್. ಇಷ್ಟೆಲ್ಲ ಮಾಡಿ ಸಿದ್ದರಾಮಯ್ಯ ಹರಿಶ್ಚಂದ್ರ ಥರ ಮಾತಾಡೋದು ಬೇಡ ಎಂದು ತಿರುಗೇಟು ನೀಡಿದರು.



### ಖರ್ಗೆ, ಪರಮೇಶ್ವರ್ ಅವರನ್ನು ಸೋಲಿಸಿದ್ದೇ ಸಿಎಂ ಆಂಡ್ ಟೀಂ

ಸಿದ್ದರಾಮಯ್ಯ ಜೆಡಿಎಸ್ ನಾಯಕರ ಬಗ್ಗೆ ಪ್ರಶ್ನೆ ಮಾಡಿದ್ದಾರೆ, ನಾನು ಅದಕ್ಕೆ ಉತ್ತರ ಕೊಡಲ್ಲ. ಅವರು ಬಿಜೆಪಿಯನ್ನೂ ಪ್ರಶ್ನೆ ಮಾಡಿದ್ದಾರೆ. ಕಾಂಗ್ರೆಸ್‌ನಲ್ಲಿ ಸಾಮಾಜಿಕ ನ್ಯಾಯ ಇಲ್ಲ. 70ರ ದಶಕದಿಂದಲೂ ದಲಿತರಿಗೆ ಮೋಸ ಆಗ್ತಿದೆ. ಹೊರಗಡೆಯಿಂದ ಬಂದು ಆರೇ ವರ್ಷಕ್ಕೆ ಸಿಎಂ ಮಾಡಿದ್ದಾರೆ ಅವರನ್ನು. ಯಾಕೆ ಹಾಗಾದರೆ ದಲಿತರನ್ನು ಸಿಎಂ ಮಾಡಿಲ್ಲ ಕಾಂಗ್ರೆಸ್ ಪರಮೇಶ್ವರ ಕಣ್ಣಲ್ಲಿ ನೀರು ಹಾಕಿಕೊಂಡ್ರಲ್ಲ. ಷಡ್ಯಂತ್ರದಿಂದ ಅವರನ್ನು ಸೋಲಿಸಲಾಯ್ತು. ಕಳೆದ ಬಾರಿ ಕಾಂಗ್ರೆಸ್ ಸೋಲ್ತು ಅಂತ ಅನಿವಾರ್ಯವಾಗಿ ಪರಮೇಶ್ವರ್ ಅವರನ್ನು ಡಿಸಿಎಂ ಮಾಡಿದ್ರು. ಈಗ ನಿಮ್ಮದೇ ಸರ್ಕಾರ ಬಂತಲ್ಲ ಯಾಕೆ ಸಿಎಂ ಮಾಡಲಿಲ್ಲ ಎಂದು ಪ್ರಶ್ನಿಸಿದರು.

### ಡ್ರಗ್ಸ್‌ಗೆ ಬ್ರೇಕ್ ಹಾಕಲಿ

ಶಾಲಾ-ಕಾಲೇಜುಗಳಲ್ಲಿ ಮೊಬೈಲ್ ಬ್ಯಾನ್ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಮೊಬೈಲ್ ಬ್ಯಾನ್ ಸರಿ. ಆದರೆ, ಹೆಣ್ಣುಮಕ್ಕಳ ವಿಚಾರದಲ್ಲಿ ಪೋಷಕರು ಆತಂಕದಲ್ಲಿರ್ತಾರೆ.

ಮೊಬೈಲ್ ಇದ್ರೆ ಪೋಷಕರು ಮಕ್ಕಳ ಮೇಲೆ ನಿಗಾ ಇಡಬಹುದು. ನಾನು ಕಾಂಗ್ರೆಸ್‌ನವ್ರನ್ನು ಬೈಯ್ತಿಲ್ಲ, ಅವರ ನ್ಯೂನತೆಗಳನ್ನು ಎತ್ತಿ ತೋರಿಸ್ತಿದ್ದೀನಿ ಅಷ್ಟೇ ಬೇರೆ ರೀತಿಯಲ್ಲಿ ಸರ್ಕಾರ ಕ್ರಮ ತಗೋಬಹುದು. ಡ್ರಗ್ಸ್ ಮೂಲ ನಿರ್ಮೂಲನೆ ಮಾಡುವತ್ತ ಗಮನ ಕೊಡಲಿ. ಡ್ರಗ್ಸ್ ಸುಲಭ ಲಭ್ಯತೆಗೆ ಬ್ರೇಕ್ ಹಾಕಲಿ ಸರ್ಕಾರ. ಮಕ್ಕಳ ಜತೆ ಸಂಪರ್ಕದಲ್ಲಿರಲು ಪೋಷಕರಿಗೆ ಮೊಬೈಲ್ ಬೇಕಾಗುತ್ತದೆ. ಸಾಧಕ-ಬಾಧಕ ನೋಡಿ ಸರ್ಕಾರ ಕ್ರಮವಹಿಸಲಿ ಎಂದರು.

## ಒಂದೇ ವಾರದಲ್ಲಿ ಇಬ್ಬರನ್ನು ಬಲಿ ಪಡೆದಿದ್ದ ಕಾಡಾನೆ ಸೆರೆ: ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್

- **ಉದಯಯುವಾಹಿನಿ, ಚಿಕ್ಕಮಗಳೂರು**

ಒಂದೇ ವಾರದಲ್ಲಿ ಇಬ್ಬರನ್ನು ಬಲಿ ಪಡೆದಿದ್ದ ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಚಿಕ್ಕಮಗಳೂರು ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಕಳೆದ ಸೋಮವಾರ ಚಿಕ್ಕಮಗಳೂರು ತಾಲ್ಲೂಕಿನ ಹುಣಸೇಹಳ್ಳಿ ಸಮೀಪದ ಪುರ ಗ್ರಾಮದಲ್ಲಿ ಹಾವೇರಿ ಮೂಲದ ಕಾರ್ಮಿಕ ಯಲ್ಲಪ್ಪ ಎಂಬುವರನ್ನು ಕಾಡಾನೆ ಬಲಿ ಪಡೆದಿತ್ತು. ಅದೇ ಜಾಗದಲ್ಲಿ ಬಳ್ಳಾರಿ ಮೂಲದ ಬೋರಮ್ಮ ಎನ್ನುವರನ್ನು ಬಲಿ ಪಡೆದಿದೆ.

ಮಹಿಳೆಯನ್ನು ಬಲಿ ಪಡೆದ ದಿನವೇ ಕಾಡಾನೆಯನ್ನು ಸೆರೆ ಹಿಡಿಯಲಾಗಿದೆ. ಚಿಕ್ಕಮಗಳೂರು ತಾಲ್ಲೂಕಿನ ಬೆರಣಗೋಡು ಸಮೀಪದ ಕೆರೆಮನೆ ಬಳಿ ಅಧಿಕಾರಿಗಳು ಹಾಗೂ ವೈದ್ಯರ ತಂಡ ಕಾಡಾನೆಗೆ ಅರವಳಿಕೆ ಚುಚ್ಚುಮದ್ದು ನೀಡಿದ್ದು, ಎನ್‌ಆರ್ ಪುರ ತಾಲ್ಲೂಕಿನ ಬಾಳೆಹೊನ್ನೂರಿನ ಹುಣಸೆಹಳ್ಳಿಯ ಕೆರೆಮನೆ ಬಳಿ ಸಾಕಾನೆಗಳ ಸಹಾಯದಿಂದ ಒಂಟಿ ಸಲಗವನ್ನು ಸೆರೆಹಿಡಿಯಲಾಗಿದೆ. ಏಳು ಕುಮ್ಕಿ ಆನೆಗಳು ಹಾಗೂ ಸುಮಾರು 75 ಸಿಬ್ಬಂದಿಗಳ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಹಿಳೆ ಮೇಲೆ ದಾಳಿ ಮಾಡಿದ ಸ್ಥಳದಿಂದ ಅಲ್ಪ ದೂರದಲ್ಲಿರುವ ಕಾಫಿ ತೋಟದಲ್ಲಿ



ಕಾಡಾನೆಯನ್ನು ಪತ್ತೆ ಮಾಡಲಾಯಿತು. ಸೂಕ್ತ ಸಮಯದಲ್ಲಿ ಅರವಳಿಕೆ ಚುಚ್ಚುಮದ್ದು ನೀಡಿ ಆನೆಯನ್ನು ನಿತ್ರಾಣಗೊಳಿಸಿ, ಬಳಿಕ ಕುಮ್ಕಿ ಆನೆಗಳ ಸಹಾಯದಿಂದ ಕಾಡಾನೆಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ಪಡೆದು ಸೆರೆ ಹಿಡಿಯಲಾಯಿತು. ಕಾಡಾನೆ ದಾಳಿಯಿಂದ ಮೃತಪಟ್ಟ ಮಹಿಳೆಯ ಶವವನ್ನು ಮುಂದಿಟ್ಟುಕೊಂಡು ರೈತ ಪರ ಸಂಘಟನೆಗಳು ,ಸ್ಥಳೀಯರು, ಕಾಫಿ ತೋಟದ ಕಾರ್ಮಿಕರು, ಕಾಫಿ ತೋಟದ ಮಾಲೀಕರು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದರು.

ಈ ವೇಳೆ ಪೊಲೀಸರು ಮೃತದೇಹವನ್ನು ಒತ್ತಾಯ ಪೂರ್ವಕವಾಗಿ ತೆರವುಗೊಳಿಸಲು ಮುಂದಾಗಿದ್ದರಿಂದ ಪ್ರತಿಭಟನಾ ನಿರತರು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರು ವಶಕ್ಕೆ ಯತ್ನಿಸಿದಾಗ ಪ್ರತಿಭಟನಾಕಾರರು ಪೊಲೀಸ್ ವಾಹನವನ್ನೇ ಅಲುಗಾಡಿಸಿ ಕೆಳಗೆ ಬೀಳಿಸಲು ಯತ್ನಿಸಿದರು. ಇದರಿಂದ ಆಕ್ರೋಶ ಭರಿತರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಿದರು.

**ಈ ದಿನದ ದರ** ಪೆಟ್ರೋಲ್: 103.06 ₹/L | ಡೀಸೆಲ್ : 90.99 ₹/L | ಬಂಗಾರ: ₹15,928/Gram24ct ₹14,600/Gram22ct | ಬೆಳ್ಳಿ: ₹275.00/Gram

# ಕಿಡ್ನಿ ರೋಗಿಗಳಿಗೆ ಉಚಿತ ಡಯಾಲಿಸಿಸ್ ದಂತ, ಕಣ್ಣಿನ ಪರೀಕ್ಷೆ ಉಚಿತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

**ಕಡಿಮೆ ದರದ ಲ್ಯಾಬ್ ಉದ್ಘಾಟನೆ**

ಡಾ||ಬಿ.ಆರ್.ಅಂಬೇಡ್ಕರ್ ಮೆಡಿಕಲ್ ಡೇ ಕೇರ್ ಸೆಂಟರ್‌ನಲ್ಲಿ ನೆಫ್ರೋಪ್ಲಸ್ ಉಚಿತ ಡಯಾಲಿಸಿಸ್ ಕೇಂದ್ರ, ರಿಯಾಯಿತಿ ದರದಲ್ಲಿ ಭಾರತ್ ಜನಸೇವಾ ಲ್ಯಾಬ್ ಸಂಪೂರ್ಣ ದೇಹ ಪರೀಕ್ಷಾ ಕೇಂದ್ರ ಮತ್ತು ಲಯನ್ಸ್ ಕ್ಲಬ್ ಸಹಯೋಗದಲ್ಲಿ ಉಚಿತವಾಗಿ ದಂತ ಮತ್ತು ಕಣ್ಣಿನ ತಪಾಸಣಾ ಕೇಂದ್ರವನ್ನು ಶಾಸಕರಾದ ಎಸ್. ಸುರೇಶ್ ಕುಮಾರ್ ರವರು ಬಿಬಿಎಂಪಿ ಮಾಜಿ ಸದಸ್ಯರುಗಳಾದ ಎಂ.ಮುನಿರಾಜುರವರು, ಶ್ರೀಮತಿ ಶಕೀಲ ಮುನಿರಾಜುರವರು, ಮಂಡಲ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾದ ಎಂ.ಎಸ್. ಸಂಜಯ್ ಕುಮಾರ್ ರವರು ಉದ್ಘಾಟನೆ ಮಾಡಿದರು.

ಶಾಸಕರಾದ ಎಸ್.ಸುರೇಶ್ ಕುಮಾರ್ ರವರು ಮಾತನಾಡಿ ಸಂವಿಧಾನಶಿಲ್ಪಿ, ಭಾರತರತ್ನ ಡಾ||ಬಿ.ಆರ್.ಅಂಬೇಡ್ಕರ್ ರವರ ಹೆಸರಿನಲ್ಲಿ ದಯಾನಂದನಗರ ವಾರ್ಡ್‌ನಲ್ಲಿ 15ಕ್ಕೂ ಹೆಚ್ಚು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದಯಾನಂದನಗರ ವಾರ್ಡ್ ಆರ್ಥಿಕವಾಗಿ ಹಿಂದುಳಿದವರ ಜನಸಂಖ್ಯೆ ಹೆಚ್ಚಿದೆ. ಕಿಡ್ನಿ ಸಮಸ್ಯೆಯಿಂದ ಬಳಲುವವರು ಪ್ರತಿ ಡಯಾಲಿಸಿಸ್ 1800ರೂಪಾಯಿವರಗೆ ವೆಚ್ಚವಾಗುತ್ತದೆ ಆದ್ದರಿಂದ ಇಲ್ಲಿ ಸಂಪೂರ್ಣ ಉಚಿತವಾಗಿ ಮಾಡಲಾಗುತ್ತಿದೆ. ಹಾಗೂ ದಂತ, ಕಣ್ಣಿನ ತಪಾಸಣೆ ಉಚಿತ ದೃಷ್ಟಿ ದೋಷದವರಿಗೆಗೆ ಉಚಿತ ಕನ್ನಡಕ ನೀಡಲಾಗುತ್ತದೆ ಭಾರತ್ ಜನಸೇವಾ ಲ್ಯಾಬ್ಸ್ ಅತ್ಯಂತ ಕಡಿಮೆ ದರದಲ್ಲಿ 71 ಪರೀಕ್ಷೆಗಳು ಮಾಡಲಾಗುತ್ತದೆ ಎಂದು ಹೇಳಿದರು. ಉಪಮಹಾಪೌರರಾದ ರಂಗಣ್ಣ, ಬಿಜೆಪಿ ಮುಖಂಡರುಗಳಾದ ರಾಘವೇಂದ್ರರಾವ್, ಗಿರೀಶ್ ಗೌಡ, ಕಾಮಧೇನು ಸುರೇಶ್, ಸ್ಥಳೀಯ ಮುಖಂಡರು, ಸಾರ್ವಜನಿಕರು ಭಾಗವಹಿಸಿದ್ದರು.

## ಬೆಂಗಳೂರು ಉತ್ತರ ಪಾಲಿಕೆ: ಸ್ವಚ್ಛ ಸರ್ವೇಕ್ಷಣ ಉತ್ತಮ ರ್‍ಯಾಂಕಿಂಗ್‌ಗೆ ಪಣ

# ಮನೆಗಳಲ್ಲೇ ಕಸ ವಿಂಗಡಣೆ ಮಾಡುವುದು ಕಡ್ಡಾಯ

• ಉದಯವಾಹಿನಿ, ಬೆಂಗಳೂರು

ನಗರವನ್ನು ಸ್ವಚ್ಛವಾಗಿರಿಸಲು ಮತ್ತು ಭೂಭರ್ತಿ ಜಾಗಗಳ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು, ಮನೆಗಳಲ್ಲೇ ಕಸ ವಿಂಗಡಣೆ ಮಾಡುವುದನ್ನು ಕಡ್ಡಾಯಗೊಳಿಸಿ ಘನತ್ಯಾಜ್ಯ ಇಲಾಖೆಯ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್ ಅವರು ಖಡಕ್ ಸೂಚನೆ ನೀಡಿದ್ದಾರೆ.

**ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆ ಮತ್ತು ಸಂಸ್ಕರಣೆ :** ಇತ್ತೀಚಿನ ದಿನಗಳಲ್ಲಿ ಭೂಭರ್ತಿ ಜಾಗಗಳಲ್ಲಿ ಸ್ಥಳೀಯ ನಿವಾಸಿಗಳ ಹೋರಾಟದಿಂದಾಗಿ ತ್ಯಾಜ್ಯ ವಿಲೇವಾರಿಯಲ್ಲಿ ಉಂಟಾಗುತ್ತಿರುವ ಅಡೆತಡೆಗಳನ್ನು ನಿವಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ.

**ಒಣ ತ್ಯಾಜ್ಯ ಪುನರ್ಬಳಕೆ**

**ಹಸಿ ತ್ಯಾಜ್ಯ:** ಮನೆ-ಮನೆಗಳಿಂದ ಸಂಗ್ರಹಿಸಿದ ಹಸಿ ತ್ಯಾಜ್ಯವನ್ನು ಗೊಬ್ಬರ ತಯಾರಿಸಲು ಸಂಸ್ಕರಣಾ ಘಟಕಗಳಿಗೆ ಕಳುಹಿಸುವುದು.

**ಒಣ ತ್ಯಾಜ್ಯ:** ಒಣ ತ್ಯಾಜ್ಯವನ್ನು ಪುನರ್ಬಳಕೆ, ವಿದ್ಯುತ್ ತಯಾರಿಕಾ ಘಟಕಗಳಿಗೆ ರವಾನಿಸಲು ಆಯುಕ್ತರು ಸೂಚಿಸಿದ್ದಾರೆ.

**ಮಾರ್ಚ್-2026ಕ್ಕೆ ಮಹತ್ವದ ಗುರಿ:** ನಗರ ಪಾಲಿಕೆಯ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಉಪಪ್ರಧಾನ ವ್ಯವಸ್ಥಾಪಕರು ಕ್ರಮವಹಿಸಿ, ಮಾರ್ಚ್-2026ರ ಅಂತ್ಯಕ್ಕೆ ಶೇ. 65-70 ರಷ್ಟು ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸುವ ಗುರಿಯನ್ನು ತಲುಪಲು ಸೂಚಿಸಲಾಗಿದೆ. ಈ ಕಾರ್ಯದಲ್ಲಿ ಆರೋಗ್ಯ ಪರಿವೀಕ್ಷಕರು, ಲಿಂಕ್ ವರ್ಕರ್ಸ್, ಮಾರ್ಷಲ್ಸ್, ಪೌರಕಾರ್ಮಿಕರು ಶ್ರಮವಹಿಸಬೇಕೆಂದು ತಿಳಿಸಿದ್ದಾರೆ. ನಗರದ ಸೌಂದರ್ಯವನ್ನು ಕಾಪಾಡಲು, ನಾಗರಿಕರ ಪ್ರಶಂಸೆಗೆ ಪಾತ್ರವಾಗಲು ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲಿಯೂ ಬ್ಲ್ಯಾಕ್ ಸ್ಪಾಟ್‌ಗಳು ಕಾಣದಂತೆ ಸ್ವಚ್ಛಗೊಳಿಸಲು ಸಲಹೆ ನೀಡಲಾಗಿದೆ.






**ಅಧಿಕಾರಿಗಳಿಗೆ ಎಚ್ಚರಿಕೆ**

- ಸ್ವಚ್ಛ ಸರ್ವೇಕ್ಷಣಾ ಸಮೀಕ್ಷೆಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಕ್ರಿಯವಾಗಿ ಸಹಕರಿಸಬೇಕು ಪೊಮ್ಮಲ ಸುನೀಲ್ ಕುಮಾರ್
- ಪ್ರಥಮ ಹಂತದ ಸ್ವಚ್ಛತಾ ಕಾರ್ಯಕ್ರಮ 2025-26ರ ಸ್ವಚ್ಛ ಸರ್ವೇಕ್ಷಣೆಗೆ ಸಂಬಂಧಿಸಿದಂತೆ ಮಾರ್ಚ್ 1 ರಿಂದ 8 ರವರೆಗೆ ಮೊದಲ ಹಂತದ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆದೇಶಿಸಲಾಗಿದೆ.
- ಸಾರ್ವಜನಿಕರ ಸಹಭಾಗಿತ್ವ ಈ ಸ್ವಚ್ಛತಾ ಅಭಿಯಾನದಲ್ಲಿ ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ಜನಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ಜಾಗೃತಿ ಕಾರ್ಯಕ್ರಮ ಸಾರ್ವಜನಿಕರಲ್ಲಿ ಪರಿಸರ ಸ್ವಚ್ಛತೆ, ತ್ಯಾಜ್ಯ ವಿಂಗಡನೆಯ ಮಹತ್ವ ಮತ್ತು ಪ್ಲಾಸ್ಟಿಕ್ ಬಳಕೆ ನಿಷೇಧದ ಕುರಿತು ಅರಿವು ಮೂಡಿಸಲು ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
- ನಗರ ಪಾಲಿಕೆಯನ್ನು ಬ್ಲಾಕ್ ಸ್ಪಾಟ್ ಮುಕ್ತಗೊಳಿಸಿ

**ಗುರಿಯೊಂದಿಗೆ ಒಂದಷ್ಟು ಕ್ರಮಕ್ಕೆ ಮುಂದು**



ಬೆಂಗಳೂರು ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿಸಬೇಕು. ಸ್ವಚ್ಛ ಸರ್ವೇಕ್ಷಣ ಉತ್ತಮ ರ್‍ಯಾಂಕಿಂಗ್ ಪಡೆಯಬೇಕು ಎನ್ನುವ ಗುರಿಯೊಂದಿಗೆ ಒಂದಷ್ಟು ಕ್ರಮಕ್ಕೆ ಮುಂದಾಗಲಾಗಿದೆ. ಮನೆಗಳಲ್ಲೇ ಕಸ ವಿಂಗಡಣೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಘನತ್ಯಾಜ್ಯ ಇಲಾಖೆಯ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್ ಅವರು ಖಡಕ್ ಸೂಚನೆ ನೀಡಿದ್ದಾರೆ.

**ತ್ವರಿತ ಸ್ಪಂದನೆ:** ನಾಗರಿಕರು 'ಫೋನ್-ಇನ್' ಕಾರ್ಯಕ್ರಮದಲ್ಲಿ ನೀಡಿದ ಘನತ್ಯಾಜ್ಯ ನಿರ್ವಹಣೆ ದೂರುಗಳಿಗೆ ಆರೋಗ್ಯ ಪರಿವೀಕ್ಷಕರು, ಮಾರ್ಷಲ್‌ಗಳು ತಕ್ಷಣವೇ ಸ್ಪಂದಿಸಿ ಕ್ರಮ ಕೈಗೊಳ್ಳಬೇಕು. ಇಂತಹ ದೂರುಗಳು ಮರುಕಳಿಸದಂತೆ ನೋಡಿಕೊಳ್ಳಲು AGMಗಳಿಗೆ ಸೂಚಿಸಲಾಗಿದೆ.

**ಎಲ್ಲೋ, ರೆಡ್ ಸ್ಪಾಟ್‌ಗಳ ನಿಯಂತ್ರಣ:** ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ (ಎಲ್ಲೋ ಸ್ಪಾಟ್), ಉಗುಳುವಿಕೆ ಪ್ರಕರಣಗಳು ಸ್ಕೈ-ವಾಕ್‌ಗಳ ಬಳಿ ಹೆಚ್ಚಾಗಿ ಕಂಡುಬರುತ್ತಿದ್ದು, ಇದು ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿದೆ.

**ದಂಡ ವಿಧಿಸಲು ಸೂಚನೆ:** ಇಂತಹ ಜಾಗಗಳ ಮೇಲೆ ಮಾರ್ಷಲ್‌ಗಳು ಕಣ್ಗಾವಲು ಇಡಬೇಕು ಮತ್ತು ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ದಂಡ ವಿಧಿಸಬೇಕು ಎಂದು ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

# ಮಾಜಿ ಶಾಸಕ ಸುರೇಶ್‌ಗೌಡ ಕಾರು ಅಪಘಾತ

• ಉದಯವಾಹಿನಿ, ಬೆಂಗಳೂರು

ನಾಗಮಂಗಲ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಸುರೇಶ್ ಗೌಡ ಅವರು ಪ್ರಯಾಣಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಅವರು ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರ್ಯಕ್ರಮವೊಂದರ ನಿಮಿತ್ತ ಸುರೇಶ್ ಗೌಡ ಅವರು ಗನ್‌ಮ್ಯಾನ್ ಸೇರಿದಂತೆ ನಾಲ್ಕು ಮಂದಿಯೊಂದಿಗೆ ಕೊಪ್ಪಕ್ಕೆ ಹೋಗಿ ವಾಪಸಾಗುತ್ತಿದ್ದರು. ಮಧ್ಯರಾತ್ರಿ 12.15 ರ ಸುಮಾರಿನಲ್ಲಿ ನಾಗಮಂಗಲ -ಕೊಪ್ಪ ರಸ್ತೆಯಲ್ಲಿ ಬರುತ್ತಿದ್ದಂತೆ ಮಾಚೋಗೊಂಡನಹಳ್ಳಿ ಗೇಟ್ ಬಳಿ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಪರಿಣಾಮ ಸುರೇಶ್ ಗೌಡರ ಕೈಗೆ ಪೆಟ್ಟು ಬಿದ್ದಿದ್ದು, ಚಾಲಕನಿಗೂ ಗಂಭೀರ ಗಾಯಗಳಾಗಿವೆ. ಅಪಘಾತದ ರಭಸಕ್ಕೆ ಕಾರು ಭಾಗಶಃ ಜಖಂಗೊಂಡಿದೆ. ಕಾರು ಪಲ್ಟಿಯಾದ ತಕ್ಷಣ ಸುರೇಶ್ ಗೌಡ ಅವರ ಗನ್‌ವ್ಯಾನ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಸುರೇಶ್ ಗೌಡ ಹಾಗೂ ಚಾಲಕನನ್ನು ಮಂಡ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಿದ್ದಾರೆ.ಈ ಬಗ್ಗೆ ಬಸರಾಳು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

# 'ಕೈ' ಗೂಂಡಾಗಿರಿ ವಿರುದ್ಧ ಆರ್.ಅಶೋಕ್ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ಸಿನ ಗೂಂಡಾಗಿರಿ ರಾಜ್ಯದಲ್ಲೂ ಮಿತಿಮೀರಿದ್ದು, ಎಲ್ಲವನ್ನೂ ಕಾದು ನೋಡುತ್ತಿರುವ ಕನ್ನಡಿಗರು ಸುಮನೆ ಕೂರುವವರಲ್ಲ. ಕಾಂಗ್ರೆಸ್ ಪಕ್ಷವನ್ನು ರಾಜ್ಯದಿಂದ ಒದ್ದು ಓಡಿಸುವ ಕಾಲ ದೂರವಿಲ್ಲ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಎಚ್ಚರಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಎಐ ಸಮಿಟ್‌ನಲ್ಲಿ ಭಾರತದ ಮರ್ಯಾದೆಯನ್ನು ಹಾಳು ಮಾಡಲು ಬಂದ ಕಾಂಗ್ರೆಸ್ಸಿಗರಿಗೆ ಸಾರ್ವಜನಿಕರೇ ಬೂಟುಗಾಲಲ್ಲಿ ಒದ್ದು ಆಚೆ ಹಾಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೆಹಲಿಯಲ್ಲಿ ನಡೆದ ಎಐ ಶೃಂಗಸಭೆಯಲ್ಲಿ ಭಾರತ-ಅಮೆರಿಕ ವಾಣಿಜ್ಯ ಒಪ್ಪಂದದ ವಿರುದ್ಧವಾಗಿ ಶರ್ಟ್ ಬಿಚ್ಚಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಲಾಗಿದ್ದು, ದೆಹಲಿ ನ್ಯಾಯಾಲಯವು ಐದು ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡಿದೆ. ಆರೋಪಿಗಳನ್ನು ಐದು ದಿನಗಳ ಕಸ್ಟಡಿಗೆ ನೀಡುವಂತೆ ಕೋರಿದ ದೆಹಲಿ ಪೊಲೀಸರ ಮನವಿಗೆ ಮ್ಯಾಜಿಸ್ಟ್ರೇಟ್ ರವಿ ಅಸ್ತು ಎಂದಿದ್ದಾರೆ.



ಬಂಧಿತ ಪ್ರತಿಭಟನಾಕಾರರು ಬಿಹಾರದ ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಕೃಷ್ಣ ಹರಿ, ಬಿಹಾರದ ಐವೈಸಿ ರಾಜ್ಯ ಕಾರ್ಯದರ್ಶಿ ಕುಂದನ್ ಯಾದವ್, ಉತ್ತರ ಪ್ರದೇಶದ ಐವೈಸಿ ರಾಜ್ಯ ಅಧ್ಯಕ್ಷ ಅಜಯ್ ಕುಮಾರ್, ತೆಲಂಗಾಣದ ನರಸಿಂಹ ಯಾದವ್. ಕಾರ್ಯಕ್ರಮ ಸ್ಥಳದಲ್ಲಿ ದೇಶವಿರೋಧಿ ಘೋಷಣೆಗಳನ್ನು ಈ ಕಾಂಗ್ರೆಸ್ ಕಾರ್ಯಕರ್ತರು ಕೂಗಿದ್ದಾರೆ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಆಕ್ಷೇಪಾರ್ಹ ಚಿತ್ರಗಳಿರುವ ಟಿ-ಶರ್ಟ್‌ಗಳನ್ನು ಧರಿಸಿದ್ದಾರೆ ಎಂದು ಪೊಲೀಸರು ವಾದಿಸಿ ವಶಕ್ಕೆ ನೀಡುವಂತೆ ಮನವಿ ಮಾಡಿದ್ದರು. ಹಾಗೆಯೇ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಬೇಕಾಗಿದೆ. ಅವರು ವಿವಿಧ ರಾಜ್ಯಗಳಿಂದ ಬಂದವರಾಗಿರುವುದರಿಂದ ಕಸ್ಟಡಿ ವಿಚಾರಣೆ ಅಗತ್ಯ. ಇದು ಗಂಭೀರ ವಿಷಯ. ಪೊಲೀಸರು ತಡೆಯಲು ಪ್ರಯತ್ನಿಸಲಾಗಿದೆ. ಮೂವರು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರ ಪರ ವಕೀಲರು ವಾದಿಸಿದ್ದಾರೆ. ಇದಲ್ಲದೆ ಪ್ರತಿಭಟನೆಯನ್ನು ಆಯೋಜಿಸುವ ಹಿಂದಿನ ಪಿತೂರಿ, ಹಣಕಾಸಿನ ಮೂಲ ಮತ್ತು ಟಿ-ಶರ್ಟ್‌ಗಳನ್ನು ಎಲ್ಲಿ ಮುದ್ರಿಸಲಾಗಿದೆ ಎಂಬುದನ್ನು ಕಂಡುಹಿಡಿಯಬೇಕು ಎಂದು ವಕೀಲರು ಹೇಳಿದ್ದಾರೆ.

ಇನ್ನು ಎಐ ಶೃಂಗಸಭೆಯಲ್ಲಿ ಪ್ರತಿಭಟನೆ ನಡೆಸಿದ್ದನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ. ಮುಂಬೈನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದ್ದಾರೆ. ರಾಹುಲ್ ಗಾಂಧಿ ವಿರುದ್ಧ ಘೋಷಣೆಗಳನ್ನು ಕೂಗಿದೆ. ಇನ್ನೊಂದೆಡೆ ಪ್ರತಿಭಟಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸುವ ಮೂಲಕ ಪ್ರತಿಭಟಿಸುವ ಹಕ್ಕನ್ನು ಕಸಿಯಲಾಗುತ್ತಿದೆ ಎಂದು ವಿಪಕ್ಷಗಳು ಆರೋಪಿಸಿದೆ.

## ಬಜೆಟ್‌ನಲ್ಲಿ ದಲಿತರಿಗೆ ವಿಶೇಷ ಪ್ಯಾಕೇಜ್ ನೀಡಿ

# ದಲಿತ ಸಂಘರ್ಷ ಸಮಿತಿ

• ಉದಯವಾಹಿನಿ, ಹೊಸಕೋಟೆ



ಮಾರ್ಚ್ ತಿಂಗಳಲ್ಲಿ ಮಂಡನೆಯಾಗಲಿರುವ ರಾಜ್ಯ ಬಜೆಟ್‌ನಲ್ಲಿ ದಲಿತ ಸಮುದಾಯದ ಅಭ್ಯುದಯಕ್ಕೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ. ದಲಿತ ಚಳುವಳಿಯ ನಾಯಕರು ಆರ್ಥಿಕ ಸಂಕಷ್ಟ, ಅನಾರೋಗ್ಯದಿಂದ ಬಳತ್ತಿದ್ದು, ಅವರಿಗೆ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಉಚಿತ ವೈದ್ಯಕೀಯ ಚಿಕಿತ್ಸೆ ವೆಚ್ಚ ಭರಿಸಬೇಕು.

ಸರ್ಕಾರದ ವಿವಿಧ ಇಲಾಖೆಗಳ 2 ಕೋಟಿವರೆಗೂ ಕಾಮಗಾರಿಗಳಿಗೆ ಪರಿಶಿಷ್ಟ ಜಾತಿ, ಪಂಗಡದವರಿಗೆ ಪ್ರತ್ಯೇಕ ಆಗಿ ಮೀಸಲು, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉಚಿತ ನೀಟ್, ಕ್ಲಾಟ್ ತರಬೇತಿ ನೀಡಲು ತಗಲುವ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸಬೇಕು, ಎಸ್‌ಸಿಪಿ-ಟಿಎಸ್‌ಪಿ ಅನುಷ್ಠಾನ ಜಿಲ್ಲಾವಾರು ಸಮಿತಿ ರಚನೆ ಮಾಡಬೇಕು. ಪ್ರಸ್ತುತ ಶಿಕ್ಷಣ ಹಕ್ಕಿನ ಕಾಯ್ದೆಯಲ್ಲಿ ಶೇಕಡ 25 ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ದುರ್ಬಲ ವರ್ಗದ ಸಮುದಾಯಗಳ ಮಕ್ಕಳಿಗೆ ಅವಕಾಶ ಹಾಗೂ ದ್ವಿತೀಯ ಪಿಯುಸಿ ಯವರಿಗೆ ವಿಸ್ತರಣೆ ಮಾಡಬೇಕೆಂದು ದಸಂಸ ರಾಜ್ಯ ಬೆಂಗಳೂರು ವಲಯ ಸಂಚಾಲಕ ಮಂಜುನಾಥ್ ಅಣ್ಣಯ್ಯ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿನ ಖಾಸಗಿ ಶಾಲೆಗಳಲ್ಲಿ ಶುಲ್ಕ ಭರಿಸಲಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬಾಕಿ ಶುಲ್ಕವನ್ನು ಸರ್ಕಾರವೇ ಭರಿಸಬೇಕು. ದಲಿತ ಸಂಘರ್ಷ ಸಮಿತಿಯ 70, 80, 90ರ ಚಳುವಳಿಯ ನಾಯಕರಿಗೆ ಸ್ಮಾರಕಕ್ಕಾಗಿ 10 ಎಕರೆ ಜಮೀನು ಮಂಜೂರು ಮಾಡಬೇಕು.

ಕಳೆದ 15 ವರ್ಷದಿಂದ ಸಾಂಸ್ಕೃತಿಕವಾಗಿ, ಶೈಕ್ಷಣಿಕ ತರಬೇತಿ, ಕೌಶಲ್ಯ ತರಬೇತಿಗಳು, ಅಧ್ಯಯನ ಶಿಬಿರ, ಸಂವಿಧಾನಬದ್ಧವಾಗಿ ಕಾರ್ಯ ನಿರ್ವಹಿಸುತ್ತಿರುವ ಅಂಬೇಡ್ಕರ್ ಕಲ್ಚರಲ್ ಎಜುಕೇಷನ್ ಟ್ರಸ್ಟ್‌ಗಾಗಿ 2 ಎಕರೆ ಜಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಲಾಗಿದೆ.

# ರಂಗಭೂಮಿ ಶಿಕ್ಷಕರ ನೇಮಕಾತಿ ಪರಿಗಣನೆ: ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ರಂಗಭೂಮಿ ಶಿಕ್ಷಕರ ನೇಮಕಾತಿಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ನಟರಂಗ, ಬೆನಕ, ಸಮುದಾಯ, ಸ್ಪಂದನ, ಕಲಾಗಂಗೋತ್ರಿ ಹಾಗೂ ರಂಗಸಂಪದ ನಾಟಕ ತಂಡಗಳ ಸುವರ್ಣ ಮಹೋತ್ಸವದ ಅಂಗವಾಗಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹೊನ್ನಾರು ರಂಗೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉಮಾಶ್ರೀ, ಪ್ರಕಾಶ್ ರಾಜ್‌ಸೇರಿದಂತೆ ಬಹುತೇಕ ರಂಗಭೂಮಿ ಕಲಾವಿದರು ಚಲನಚಿತ್ರ ಕ್ಷೇತ್ರದಲ್ಲಿ ಬೆಳೆದಿದ್ದಾರೆ. ರಂಗಭೂಮಿಯಲ್ಲಿ ಕೆಲಸ ಮಾಡಿದವರೇ ಸಿನಿಮಾರಂಗದಲ್ಲಿಯೂ ಹೆಸರು ಮಾಡಿದ್ದಾರೆ ಎಂದು ಹೇಳಿದರು.

ಹಿಂದಿನ ಸಿನಿಮಾಗಳಲ್ಲಿ ಉತ್ತಮ ಸಂದೇಶಗಳಿರುತ್ತಿದ್ದವು. ಈಗ ಉತ್ತಮ ಸಂದೇಶಗಳ ಸಿನಿಮಾಗಳು ಇಲ್ಲವಾಗಿವೆ. ಕುಟುಂಬ ಸಮೇತ ನೋಡುವ ಸಿನಿಮಾಗಳೂ ಬರುತ್ತಿಲ್ಲ. ಅಲ್ಲದೇ ಮೊಬೈಲ್, ಟಿ.ವಿ.ಗಳಿಂದಾಗಿ ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುವ ಅಭಿರುಚಿ ಇಲ್ಲವಾಗಿದೆ ಎಂದರು.

# ಗುತ್ತಿಗೆದಾರರಿಂದ ಲಂಚ ಪಡೆದ ಪ್ರಕರಣ : ಶಾಸಕ ಚಂದ್ರು ಲಮಾಣಿ ವಿರುದ್ಧ ಶಿಸ್ತು ಕ್ರಮಕ್ಕೆ ಮುಂದಾದ ಬಿಜೆಪಿ

• ಉದಯವಾಹಿನಿ, ಬೆಂಗಳೂರು



ಗುತ್ತಿಗೆದಾರರೊಬ್ಬರಿಂದ ಲಂಚ ಪಡೆದ ಪ್ರಕರಣದಲ್ಲಿ ಲೋಕಾಯುಕ್ತ ಬಂಧನಕ್ಕೊಳಪಟ್ಟಿರುವ ಶಾಸಕ ಡಾ.ಚಂದ್ರು ಲಮಾಣಿ ವಿರುದ್ಧ ಬಿಜೆಪಿ ಶಿಸ್ತು ಕ್ರಮ ಜರುಗಿಸಲು ಗಂಭೀರ ಚಿಂತನೆ ನಡೆಸಿದೆ. ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ಸ್ವತಃ ಪಕ್ಷದ ಶಾಸಕರೇ ಲೋಕಾಯುಕ್ತ ಬಲೆಗೆ ಬಿದ್ದಿರುವುದು ಬಿಜೆಪಿಗೆ ಭಾರೀ ಇರಿಸುಮುರಿಸು ಉಂಟು ಮಾಡಿದೆ. ಪ್ರಕರಣ ಸಂಬಂಧ ಕೇಂದ್ರ ಬಿಜೆಪಿ ವರಿಷ್ಠರು ವರದಿಯನ್ನು ನೀಡುವಂತೆ ರಾಜ್ಯ ಘಟಕಕ್ಕೆ ಸೂಚನೆ ನೀಡಿದ್ದು, ಲೋಕಾಯುಕ್ತ ವರದಿ ಬಂದ ನಂತರ ಪಕ್ಷವು ಶಿಸ್ತು ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ. ಪಕ್ಷದಿಂದ ಅಮಾನತುಪಡಿಸುವುದು ಇಲ್ಲವೇ ಲಂಚ ಪ್ರಕರಣವು ಸತ್ಯಾಂಶದಿಂದ ಕೂಡಿದ್ದರೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟನೆ ಮಾಡುವ ಬಗ್ಗೆಯೂ ಚರ್ಚೆ ನಡೆಸಲಾಗಿದೆ.

ಭ್ರಷ್ಟಾಚಾರದ ವಿಷಯದಲ್ಲಿ ಶೂನ್ಯ ಸಹಿಷ್ಣುತೆ ಎಂದು ಹೇಳುತ್ತಿರುವ ಬಿಜೆಪಿಯು ಯಾರೇ ಇರಲಿ ಎಂದು ಪಕ್ಷಕ್ಕಿಂತ ದೊಡ್ಡವರಲ್ಲ ಎಂಬ ಸಂದೇಶವನ್ನು ರವಾನಿಸಲು ಮುಂದಾಗಿದೆ. ಈ ಹಿಂದೆ ಶಾಸಕರ ಭವನದಲ್ಲೇ ಗುತ್ತಿಗೆದಾರರೊಬ್ಬರಿಂದ ಲಂಚ ಪಡೆದು



ಬಂಧನಕ್ಕೊಳಪಟ್ಟಿದ್ದ ಕೆಜಿಎಫ್‌ನ ಮಾಜಿ ಶಾಸಕ ವೈ.ಸಂಪಂಗಿ, ಲಂಚ ಪ್ರಕರಣದಲ್ಲಿ ಬಂಧಕ್ಕೊಳಪಟ್ಟಿದ್ದ ಚನ್ನಗಿರಿ ಮಾಜಿ ಶಾಸಕ ಮಾಡಳ್ ವಿರೂಪಾಕ್ಷಪ್ಪ ಅವರಿಗೆ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ನೀಡಿರಲಿಲ್ಲ. ಕೊನೆಗೆ ನ್ಯಾಯಾಲಯದಲ್ಲಿ ಮಾಡಳ್ ವಿರೂಪಾಕ್ಷಪ್ಪಗೆ ಕ್ಲೀನ್‌ಚಿಟ್ ಸಿಕ್ಕಿತ್ತಾದರೂ ಆಗಾಗಲೇ ಕಾಲ ಮಿಂಚಿ ಹೋಗಿತ್ತು. ವಿಧಾನಸಭೆ ಚುನಾವಣೆಯಲ್ಲಿ ಅಂದಿನ ಪ್ರತಿಪಕ್ಷ ಕಾಂಗ್ರೆಸ್ ಇದೇ ಅಸ್ತ್ರವನ್ನು ಮುಂದಿಟ್ಟುಕೊಂಡು ಬಿಜೆಪಿಗೆ ಭಾರೀ ಮುಜುಗರ ಸೃಷ್ಟಿಸಿತ್ತು. ಈಗ ಶಾಸಕ ಚಂದ್ರು ಲಮಾಣಿ ಪ್ರಕರಣದಿಂದಲೂ ಬಿಜೆಪಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಕಾಂಗ್ರೆಸ್ ತನ್ನ ವೈಫಲ್ಯಗಳನ್ನು ಮರೆಮಾಚಲು ಶಾಸಕರ ಲಂಚ ಪ್ರಕರಣವನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ.

ಹೀಗಾಗಿ ವಿಧಿ ಇಲ್ಲದೆ ಶಿಸ್ತುಕ್ರಮ ಜರುಗಿಸುವ ಸಂಭವವಿದೆ. ಪ್ರಕರಣ ನಡೆದ ನಂತರ ಕೆಲವು ಸ್ಫೋಟಕ ಸತ್ಯಗಳು ಆಚೆ ಬರುತ್ತಿದ್ದು, ಶಾಸಕರನ್ನು ದುರುದ್ದೇಶಪೂರ್ವಕವಾಗಿ ಷಡ್ಯಂತ್ರ ನಡೆಸಿ ಸಿಲುಕಿಸಲಾಗಿದೆ ಎಂದು ಬಿಜೆಪಿ ಹೇಳುತ್ತಿದೆ.ಲೋಕಾಯುಕ್ತ ಬಲೆಗೆ ಬಿದ್ದ ನಂತರ ಬಿಜೆಪಿ ಬೆಂಬಲಿಗರು ಕೆಲವು ಆಡಿಯೋಗಳನ್ನು ಬಿಡುಗಡೆ ಮಾಡುತ್ತಿರುವುದು ಪ್ರಕರಣಕ್ಕೆ ಹೊಸ ಟ್ವಿಸ್ಟ್ ಕೊಟ್ಟಿದೆ. ಅಂತಿಮವಾಗಿ ಲೋಕಾಯುಕ್ತ ವರದಿ ಬಂದ ನಂತರ ಶಿಸ್ತು ಕ್ರಮದ ಬಗ್ಗೆ ನಿರ್ಧಾರವಾಗಲಿದೆ.

# ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ನೀಡಿ- ಆಗ್ರಹ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ 2026-27ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ, ಪರಿಶಿಷ್ಟ ಪಂಗಡಗಳ ಉಪ ಯೋಜನೆಯ ಅನುದಾನವನ್ನು ಗ್ಯಾರಂಟಿ ಯೋಜನೆ ಸೇರಿ ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗಿದೆ. ಅನ್ಯಾಯ ಸರಿಪಡಿಸಲು ಹೆಚ್ಚು ಅನುದಾನ ನೀಡಬೇಕು ಎಂದರು. ಡಾ.ಬಿ.ಆರ್. ಅಂಬೇಡ್ಕರ್ ನಿಗಮ, ಆದಿಜಾಂಬವ ನಿಗಮ, ಬಾಬು ಜಗಜೀವನ್ ರಾಮ್ ನಿಗಮ ಸೇರಿದಂತೆ ನಮ್ಮ ಸಮುದಾಯದ ಎಲ್ಲಾ ನಿಗಮಗಳಿಗೆ ತಲಾ 3 ಸಾವಿರ ಕೋಟಿ ಅನುದಾನ ನೀಡಬೇಕು. ನಾಗಮೋಹನದಾಸ್ ವರದಿಯಂತೆ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಿ, ಜಾರಿಗೊಳಿಸಬೇಕು ಎಂದರು.

# ಬಾಲಕಿಯರ ವಿದ್ಯಾರ್ಥಿನಿಲಯ ಉದ್ಘಾಟನೆ

• ಉದಯವಾಹಿನಿ, ದೇವನಹಳ್ಳಿ


ಉದಯವಾಹಿನಿ ಚಿತ್ರ

ಸಮಾಜ ಕಲ್ಯಾಣ ಇಲಾಖೆಯಡಿ ದೇವನಹಳ್ಳಿಯಲ್ಲಿ 7 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಡಾ. ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡವನ್ನು ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಮೂಲ ಸೌಕರ್ಯಗಳ ಜೊತೆಗೆ ಓದಲು ಒಳ್ಳೆಯ ವಾತಾವರಣ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಗುಣಮಟ್ಟದ ವಿದ್ಯಾಭ್ಯಾಸ ಪಡೆದುಕೊಳ್ಳಿ ಎಂದರು. ಈ ಹಿಂದೆ ನಮ್ಮ ಸರ್ಕಾರ ಹೋಬಳಿಗೊಂದು ವಸತಿ ಶಾಲೆ ಸ್ಥಾಪಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಈಗ ಎಲ್ಲಾ ಹೋಬಳಿಗಳಲ್ಲಿ ವಸತಿ ಶಾಲೆ ಜೊತೆಗೆ ಹಾಸ್ಟೆಲ್ ನಿರ್ಮಿಸಲಾಗುತ್ತಿದೆ. ಗುಣಮಟ್ಟದ ಊಟ ಒದಗಿಸಲಾಗುವುದು, ಜೊತೆಗೆ ಪರಿಣಿತ ಶಿಕ್ಷಕರು ಹಾಸ್ಟೆಲ್‌ಗೆ ಬಂದು ಭೋದನೆ ಮಾಡುತ್ತಾರೆ. ಹಾಗಾಗಿ ಇಲ್ಲಿ ಉತ್ತಮ ವಿದ್ಯಾಭ್ಯಾಸ ಪಡೆದುಕೊಳ್ಳುವ ಮೂಲಕ ಉನ್ನತ ಹುದ್ದೆಗಳನ್ನು ಅಲಂಕರಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

# ಸಿದ್ದರಾಮಯ್ಯರ ಹೇಳಿಕೆಯನ್ನು ಉಲ್ಲೇಖಿಸಿ ಸ್ನೇಹಮಯಿ ಕೃಷ್ಣ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಆಯುಕ್ತ ನಟೇಶ್‌ಬಡ್ತಿಗೆ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದ್ದಾರೆ. ನಾನು ಪ್ರಕರಣ ದಾಖಲು ಮಾಡುತ್ತಿದ್ದಂತೆಯೇ ತಮ್ಮ ತಪ್ಪನ್ನು ಒಪ್ಪಿಕೊಂಡು 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ನಿವೇಶನಗಳನ್ನು ವಾಪಸ್ ಕೊಟ್ಟದ್ದಕ್ಕಿಂತ ದೊಡ್ಡ ತಪ್ಪನ್ನು ನಾನು ಮಾಡಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರನ್ನು ಕುಟುಕಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘವಾಗಿ ಪೋಸ್ಟ್ ಹಾಕಿರುವ ಸ್ನೇಹಮಯಿ ಕೃಷ್ಣ, ಸ್ನೇಹಮಯಿ ಕೃಷ್ಣ ಮುಖ್ಯಮಂತ್ರಿ ಸಿದ್ದರಾಮಯ್ಯರ ಹೇಳಿಕೆಯನ್ನು ಉಲ್ಲೇಖಿಸಿ ವಿಮರ್ಶಿಸಿದ್ದಾರೆ. ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ 14 ನಿವೇಶನಗಳನ್ನು ಕಾನೂನುಬದ್ಧವಾಗಿಯೇ ಪಡೆದಿದ್ದೇವೆಂದು ಹೇಳಿದ್ದನ್ನು ಉಲ್ಲೇಖಿಸಿದ್ದರು. ಆದರೆ ನಾನು ಪ್ರಕರಣ ದಾಖಲಿಸಿದ ತಕ್ಷಣವೇ ನಿವೇಶನಗಳನ್ನು ವಾಪಸ್ ನೀಡಿದ್ದರೂ ಪುನಃ ಅವರ ವಿರುದ್ಧ ಮತ್ತೆ ಹರಿಹಾಯ್ದಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಹೆಸರನ್ನು ಉಲ್ಲೇಖ ಮಾಡಿದ್ದಕ್ಕೆ ಮಾತ್ರ ಕ್ಷಮೆ ಕೇಳಿದ್ದಾರೆ. ನಟೇಶ್ ಬಡ್ತಿ ಅವರಿಗೆ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಷಮೆ ಕೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸಿದ್ದೇನೆ. ತನಿಖೆ ನಡೆಸಿದಾಗ ಪ್ರಭಾವಿ ವ್ಯಕ್ತಿ ಯಾರು ಎಂಬ ಸತ್ಯ ಹೊರಬರುತ್ತದೆ ಎಂದು ಸ್ಫೋಟಕ ಮಾಹಿತಿ ನೀಡಿದರು. ಸ್ನೇಹಮಯಿ ಕೃಷ್ಣ ವಿನೋದ್ ಎಂಬವರು ಈ ವಿಚಾರದಲ್ಲಿ ಉಲ್ಟಾ ಹೊಡೆದಿದ್ದಾರೆ ಎಂದು ಆರೋಪಿಸಿದ್ದಾರೆ. ಸದ್ಯ ಪ್ರಭಾವಿಗೆ ಲಂಚ ಕೊಟ್ಟಿರುವುದು ಸತ್ಯ. ಲಂಚ ಪಡೆದ ಪ್ರಭಾವಿ ಯಾರು ಎಂಬುದನ್ನು ತನಿಖೆಯ ಬಳಿಕ ಬಹಿರಂಗಪಡಿಸಲಿ ಎಂದು ಸವಾಲು ಹಾಕಿದ್ದಾರೆ.

ಸಿಎಂ ಸಿದ್ದರಾಮಯ್ಯರ ಹೇಳಿಕೆಯನ್ನು ಉಲ್ಲೇಖಿಸಿ, ಮನುಷ್ಯ ನಡೆಯುವಾಗ ಎಡವುದು ಸಹಜ. ಆದರೆ ತಪ್ಪನ್ನು ಒಪ್ಪಿಕೊಂಡು ಸರಿಪಡಿಸುವುದು ಮುಖ್ಯ ಎಂದು ಹೇಳಿದ್ದಾರೆ. ಈ ಪೋಸ್ಟ್‌ನಿಂದ ಈಗಾಗಲೇ ರಾಜಕೀಯ ವಲಯದಲ್ಲಿ ಚರ್ಚೆ ಆರಂಭವಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮಾಜಿ ಆಯುಕ್ತ ನಟೇಶ್ ಬಡ್ತಿಗೆ ಲಂಚ ಪಡೆದ ಆರೋಪದಲ್ಲಿ ಭ್ರಷ್ಟಾಚಾರ ಪ್ರಕರಣ ದಾಖಲಾಗಿದ್ದು, ಈಗ ಈ ವಿಚಾರದಲ್ಲಿ ತೀವ್ರ ಚರ್ಚೆ ನಡೆಯುತ್ತಿದೆ. ಈ ಕುರಿತು ಕೃಷ್ಣ ಅವರು ವಿವರವಾದ ಸ್ಪಷ್ಟನೆ ನೀಡಿದ್ದಾರೆ.

# ಪರಂಪರೆ ಮಿಳಿತ ಸಾಹಿತ್ಯವೇ ಗಟ್ಟಿ

• ಉದಯವಾಹಿನಿ, ಬೆಂಗಳೂರು

ಪ್ರಯೋಗದ ಮೂಲಕ ರೋಮಾಂಚನದೊಂದಿಗೆ ತಾತ್ಕಾಲಿಕ ಅನುಭವ ನೀಡಿ ಮರೆಯಾಗುವುದಕ್ಕಿಂತ ಪರಂಪರೆ ಗಟ್ಟಿ ಮಿಳಿತದ, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುವ ಸಾಹಿತ್ಯ ರಚಿಸಿ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು. ಇತ್ತೀಚೆಗೆ ಇಲ್ಲಿ ಆಯೋಜಿಸಿದ್ದ, ಚಾಮರಾಜ ನಗರದ ಜೋಳಿಗೆ ಪ್ರಕಾಶನ ಹೊರ ತಂದಿರುವ ಹನೂರು ಚನ್ನಪ್ಪ ಅವರ 'ಕಬ್ಬಿಣದ ಕುದುರೆಗಳು' ಕಾದಂಬರಿಯ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರಯೋಗದಿಂದ ಹೊರ ಬಂದ ಕೃತಿಗಳು ತಾತ್ಕಾಲಿಕ ರೋಮಾಂಚನ ನೀಡಬಲ್ಲವು. ಆದರೆ, ಅವುಗಳು ಜನರ ನೆನಪಿನಲ್ಲಿ ಉಳಿಯುವುದಿಲ್ಲ. ಕನ್ನಡದಲ್ಲಿ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ಶಿವರಾಮ ಕಾರಂತರ ಮರಳಿ ಮಣ್ಣಿಗೆ, ರಾವ್ ಬಹದ್ದೂರ್ ಅವರ ಗ್ರಾಮಾಯಣ ಕಾದಂಬರಿಗಳು ಬದುಕಿನ ವಿವಿಧ ಸ್ಥಿತ್ಯಂತರಗಳನ್ನು ಕಟ್ಟಿಕೊಟ್ಟಿವೆ. ಈ ಕಾರಣದಿಂದಲೇ ಈಗಲೂ ಜನರ ನಡುವೆ ಸಾರ್ವತ್ರಿಕವಾಗಿ ಉಳಿದುಕೊಂಡಿವೆ ಎಂದರು.

# ಕಾನೂನು ಹೋರಾಟದಲ್ಲಿ ರೂಪಾ ಮೌದ್ಗಿಲ್‌ಗೆ ಮೇಲುಗೈ

## ರೋಹಿಣಿ ಸಿಂಧೂರಿಗೆ ಸಂಕಷ್ಟ – ಕೇಸ್ ರದ್ದತಿಗೆ ಹೈಕೋರ್ಟ್ ನಕಾರ, ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸಂಜ್ಞೇ ಪರಿಗಣಿಸಿ ನೋಟಿಸ್

• ಉದಯವಾಹಿನಿ, ಬೆಂಗಳೂರು

ತಮ್ಮ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಹೂಡಿರುವ ಮಾನಹಾನಿ ಪ್ರಕರಣವನ್ನು ರದ್ದುಗೊಳಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ. ಇದರಿಂದಾಗಿ ಇಬ್ಬರು ಐಎಎಸ್ ಮತ್ತು ಐಪಿಎಸ್ ಮಹಿಳಾ ಅಧಿಕಾರಿಗಳ ನಡುವೆ ನಡೆಯುತ್ತಿರುವ 'ವ್ಯಾಜ್ಯ'ಕ್ಕೆ ಹೊಸ ತಿರುವು ಸಿಕ್ಕಿದ್ದು, ಕಾನೂನು ಹೋರಾಟದಲ್ಲಿ ರೂಪಾ ಮೇಲುಗೈ ಸಾಧಿಸಿದಂತಾಗಿದೆ. ಜತೆಗೆ ರೂಪಾ ಹೂಡಿರುವ ಪ್ರಕರಣದ ವಿಚಾರಣೆ 7ನೇ ಎಸಿಎಂಎಂ ಕೋರ್ಟ್‌ನಲ್ಲಿ ಮುಂದುವರಿಯಲಿದೆ. ತಮ್ಮ ವಿರುದ್ಧ ರೂಪಾ ಹೂಡಿರುವ ಮಾನನಷ್ಟ ಮೊಕದ್ದಮೆ ಕುರಿತು ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣ ರದ್ದುಗೊಳಿಸಬೇಕೆಂದು ಕೋರಿ ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ರೂಪಾ ಹೂಡಿರುವ ಮಾನಹಾನಿ ಪ್ರಕರಣ ಸಂಬಂಧ ಜನವರಿ 13ರಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸಂಜ್ಞೇ ಪರಿಗಣಿಸಿರುವುದನ್ನು ಪ್ರಶ್ನಿಸಿ ರೋಹಿಣಿ ಸಿಂಧೂರಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಪ್ರಕಟಿಸಿದೆ.



**ವ್ಯಾಜ್ಯಕ್ಕೆ ಹೊಸ ತಿರುವು**

**ಪ್ರಕರಣದ ಹಿನ್ನೆಲೆ ಏನು?:** ಜವಾಬ್ದಾರಿಯುತ ಸ್ಥಾನದಲ್ಲಿರುವ ಐಪಿಎಸ್ ಅಧಿಕಾರಿ ರೂಪಾ ನನ್ನ ವಿರುದ್ಧ ವೈಯಕ್ತಿಕ ಹಗೆ ಸಾಧಿಸಲು ಮಾನಸಿಕ ಸ್ಥಿಮಿತ ಕಳೆದುಕೊಂಡಿರುವವರ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ರೂಪಾಗೆ ಇದೊಂದು ಅಭ್ಯಾಸವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ನಾನಾ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭಗಳಲ್ಲಿ ಇದೇ ರೀತಿ ಆಧಾರರಹಿತ ಆರೋಪ ಮಾಡುವ ಮೂಲಕ ಮಾಧ್ಯಮಗಳ ಗಮನ ಸೆಳೆಯಲು ಹಾಗೂ ತಾನು ದ್ವೇಷಿಸುವ ವ್ಯಕ್ತಿಗಳ ಮೇಲೆ ವೈಯಕ್ತಿಕ ಹಗೆ ಸಾಧಿಸಲು ಕೀಳುಮಟ್ಟದ ಪ್ರವೃತ್ತಿ ಪ್ರದರ್ಶಿಸುತ್ತಿದ್ದಾರೆ. ಸದಾ ಸುದ್ದಿಯಲ್ಲಿರಬೇಕೆಂದು ಬಯಸುವ ರೂಪಾ, ತಮ್ಮ ಸಾಮಾಜಿಕ ಮಾಧ್ಯಮ ಪುಟದಲ್ಲಿ ಅದಕ್ಕೆ ಬೇಕಾದ ಪೋಸ್ಟ್ ಹಾಕುವ ಮೂಲಕ ಸುದ್ದಿಯ ಕೇಂದ್ರ ಬಿಂದುವಾಗಲು ಯತ್ನಿಸುತ್ತಿದ್ದಾರೆ ಎಂದು ರೋಹಿಣಿ ಸಿಂಧೂರಿ 2023ರ ಫೆ.19 ರಂದು ಮಾಧ್ಯಮ ಪ್ರಕಟಣೆ ನೀಡಿದ್ದರು.

**ಅಧಿಕಾರಿಗಳ ಹೆಸರನ್ನು ಬಹಿರಂಗಪಡಿಸಬೇಕು**

ಉನ್ನತ ಸ್ಥಾನದಲ್ಲಿರುವ ರೂಪಾ ಒಳ್ಳೆಯ ಕೆಲಸಗಳತ್ತ ಗಮನಹರಿಸುವುದನ್ನು ಬಿಟ್ಟು, ಇನ್ನೊಬ್ಬರನ್ನು ಗುರಿಯಾಗಿಸಿಕೊಂಡು ಅವರ ತೇಜೋವಧೆ ಮಾಡುವುದೇ ಅವರ ಪ್ರಾಥಮಿಕ ಕೆಲಸವೆಂದು ತೋರುತ್ತದೆ. ಅದರಲ್ಲೂ ನನ್ನ ವಿರುದ್ಧ ಯಾವುದೋ ವೈಯಕ್ತಿಕ ಹಗೆ ಇಟ್ಟುಕೊಂಡು ಸುಳ್ಳು, ವೈಯಕ್ತಿಕ ನಿಂದನೆ ಅಭಿಯಾನ ನಡೆಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮ, ವಾಟ್ಸ್ ಆ್ಯಪ್ ಸ್ಟೇಟಸ್ ಸ್ಕ್ರೀನ್ ಶಾಟ್‌ಗಳ ಮೂಲಕ ಸಂಗ್ರಹಿಸಿರುವ ಫೋಟೋಗಳನ್ನು ನನ್ನ ತೇಜೋವಧೆ ಮಾಡಲು ರೂಪಾ ಬಳಸಿದ್ದಾರೆ. ಈ ಫೋಟೋಗಳನ್ನು ಕೆಲವು ಅಧಿಕಾರಿಗಳಿಗೆ ಕಳುಹಿಸಿದ್ದೇನೆನ್ನುವ ಸುಳ್ಳು ಆರೋಪ ಮಾಡಿದ್ದಾರೆ. ಹೀಗಾಗಿ, ಆ ಅಧಿಕಾರಿಗಳ ಹೆಸರನ್ನು ಬಹಿರಂಗಪಡಿಸಬೇಕು ಎಂದು ರೂಪಾ ಅವರನ್ನು ಆಗ್ರಹಿಸುತ್ತೇನೆ ಎಂದು ಸಿಂಧೂರಿ ವಿವರಿಸಿದ್ದರು.

**6 ತಿಂಗಳವರೆಗೆ ಸಂಬಳ ನೀಡದೆ, ಹುದ್ದೆ ಇಲ್ಲದೇ ವರ್ಗಾವಣೆ**

ಸಿಂಧೂರಿ ಅವರ ಹೇಳಿಕೆಯನ್ನು 1.8 ಲಕ್ಷ ಜನರು ವೀಕ್ಷಣೆ ಮಾಡಿದ್ದಾರೆ. ಅವರ ಅವಹೇಳನಕಾರಿ ಹೇಳಿಕೆ ನಂತರ ತಮ್ಮನ್ನು ವರ್ಗಾವಣೆ ಮಾಡಲಾಗಿದ್ದು, 6 ತಿಂಗಳವರೆಗೆ ಸಂಬಳ ನೀಡದೆ, ಹುದ್ದೆ ಇಲ್ಲದೇ ವರ್ಗಾಯಿಸಿದ್ದರು. ಅವರ ಹೇಳಿಕೆಯಿಂದ, ತಂಗಿ, ಪತಿ, ಮಕ್ಕಳಿಗೂ ಮಾನಸಿಕ ಯಾತನೆಯಾಗಿದೆ ಎಂದು ನಗರದ 7ನೇ ಎಸಿಎಂಎಂ ಕೋರ್ಟ್‌ನಲ್ಲಿ ಮಾನಹಾನಿ ಪ್ರಕರಣ ಹೂಡಿದ್ದು, ಸ್ವಯಂ ಹೇಳಿಕೆಯನ್ನೂ ದಾಖಲಿಸಿದ್ದರು. ಅದರ ಆಧಾರದಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸಂಜ್ಞೇ ಪರಿಗಣಿಸಿ, ಸಿಂಧೂರಿಗೆ ನೋಟಿಸ್ ನೀಡಿತ್ತು.

# ಕೊಡಗಿನಲ್ಲಿ ಒಮ್ಮೆಲೆ ತಾಪಮಾನ ಏರಿಕೆ; ಇರಲಿ ಆರೋಗ್ಯದ ಬಗ್ಗೆ ಎಚ್ಚರಿಕೆ

• ಉದಯವಾಹಿನಿ, ಮಡಿಕೇರಿ

ಇನ್ನೂ ಬೇಸಿಗೆಯ ಹೊಸ್ತಿಲಲ್ಲಿರುವಾಗಲೇ ಕೊಡಗು ಸೇರಿದಂತೆ ರಾಜ್ಯಾದ್ಯಂತ ಬಿಸಿಲು ಬೆವರಿಳಿಸುತ್ತಿದೆ. ಸದಾ ತಂಪಾಗಿರುವ ಮಡಿಕೇರಿ ನಗರ ಸೇರಿದಂತೆ ಜಿಲ್ಲೆಯಲ್ಲಿ ಈಗಾಗಲೇ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಬಿಸಿಲಿನಿಂದ ರಕ್ಷಣೆ ಹೇಗೆಂಬ ಚಿಂತೆ ಚಳಿನಾಡ ಜನರನ್ನು ಕಾಡಲಾರಂಭಿಸಿದೆ. ಸಾಮಾನ್ಯವಾಗಿ ತಂಪು ಹವಾಮಾನಕ್ಕೆ ಪ್ರಸಿದ್ಧವಾಗಿರುವ ಈ ಬೆಟ್ಟನಾಡಿನಲ್ಲಿ ಚಳಿಯಿಂದ ಒಮ್ಮೆಲೇ ಬಿಸಿಲಿನ ತೀವ್ರತೆ ಹೆಚ್ಚಾಗಿರುವುದು ಪರಿಸರ, ಆರೋಗ್ಯ ಎರಡಕ್ಕೂ ಎಚ್ಚರಿಕೆಯ ಗಂಟೆ ಮೊಳಗಿಸಿದೆ.

**ಚಳಿ ನೆಲೆದಲ್ಲೇ ಬಿಸಿಲಿನ ಕಾವು:** ಇನ್ನೂ ಫೆಬ್ರವರಿ ದ್ವಿತೀಯಾರ್ಧದಲ್ಲಿದ್ದೇವೆ ಆಗಲೇ ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ ಭಾಗಗಳಲ್ಲಿ



ಮಧ್ಯಾಹ್ನದ ತಾಪಮಾನ 31 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಬೆಳಗ್ಗೆ-ಸಂಜೆ ಸ್ವಲ್ಪ ತಂಪು ಉಳಿದಿದ್ದರೂ ಮಧ್ಯಾಹ್ನದ ಬಿಸಿಲು

### ಆರೋಗ್ಯದ ಮೇಲೆ ಬಿಸಿಲಿನ ಪರಿಣಾಮ

**ಇದ್ದಕ್ಕಿದ್ದಂತೆ ಉಷ್ಣತೆ ಏರಿಕೆ ಆಗಿರುವುದು ದೇಹಕ್ಕೆ ಹಲವು ರೀತಿಯಲ್ಲಿ ಪರಿಣಾಮ ಬೀರುತ್ತದೆ. ವಿಶೇಷವಾಗಿ ಮಕ್ಕಳು, ವೃದ್ಧರು, ಗರ್ಭಿಣಿಯರು ಹಾಗೂ ಹೊರಾಂಗಣದಲ್ಲಿ ಕೆಲಸ ಮಾಡುವವರು ಹೆಚ್ಚು ಎಚ್ಚರಿಕೆ ವಹಿಸಬೇಕು ಎನ್ನುತ್ತಾರೆ ವೈದ್ಯರು.**

ದೇಹಕ್ಕೆ ತೀವ್ರವಾಗಿ ತಟ್ಟುತ್ತಿದೆ. ಇತ್ತೀಚೆಗೆ ತೀವ್ರ ಚಳಿಯಿಂದ ಕೂಡಿದ್ದ ವಾತಾವರಣದಲ್ಲಿ ದಿಢೀರ್ ತಾಪಮಾನ ಏರಿಕೆ ಆತಂಕ ಸೃಷ್ಟಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಕೊಡಗಿನಂತೆ ಎತ್ತರ ಪ್ರದೇಶದಲ್ಲೇ ಈ ಮಟ್ಟದ ಉಷ್ಣತೆ ಕಂಡುಬರುವುದು ಮುಂದಿನ ತಿಂಗಳಲ್ಲಿ ಬಿಸಿಲು ಇನ್ನಷ್ಟು ಹೆಚ್ಚಾಗುವ ಸೂಚನೆ ಎಂದೂ ಹೇಳಲಾಗುತ್ತಿದೆ.

ಹವಾಮಾನ ತಜ್ಞರ ಪ್ರಕಾರ, ಕಳೆದ ಕೆಲವು ವಾರಗಳಲ್ಲಿ ಮಳೆ ಕೊರತೆ, ಮೋಡ ಕವಿದ ದಿನಗಳ ಸಂಖ್ಯೆ ಕಡಿಮೆಯಾಗಿರುವುದು ಹಾಗೂ ಗಾಳಿಯ ತೇವಾಂಶ ಕುಸಿತ ಇವೆಲ್ಲವೂ ತಾಪಮಾನ ಏರಿಕೆಗೆ ಕಾರಣವಾಗಿವೆ. ಅಲ್ಲದೇ ಈ ಪರಿಸ್ಥಿತಿ ಇನ್ನಷ್ಟು ದಿನಗಳ ಕಾಲ ಮುಂದುವರಿಯಲಿದ್ದು, ತಾಪಮಾನವೂ ಏರಿಕೆಯಾಗಲಿದೆ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಸಾಮಾನ್ಯವಾಗಿ ತಾಪಮಾನ ಇನ್ನೂ 2 – 3 ಡಿಗ್ರಿ ಏರಿಕೆಯಾಗುವ ಸಂಭವವಿದೆ. ಪ್ರೀ-ಮಾನ್ಸೂನ್ ಮಳೆ ವಿಳಂಬವಾದರೆ ಬಿಸಿಲಿನ ತೀವ್ರತೆ ಹೆಚ್ಚಾಗಬಹುದು.

# ರೇಷ್ಮೆ ಗೂಡಿಗೆ ಬಂಪರ್ ಬೆಲೆ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ರೇಷ್ಮೆ ಬೆಳೆಗಾರರಿಗೆ ಬಂಪರ್ ಬೆಲೆ ಸಿಗುತ್ತಿದೆ. ಚಳಿಗಾಲವಾಗಿದ್ದು ರೇಷ್ಮೆ ಹುಳು ಆಹಾರ ಹಿಪ್ಪುನೇರಳೆ ಸೊಪ್ಪು ಇಳುವರಿ ಕಡಿಮೆ ಆಗಿರುವುದು ಹಾಗೂ ಸುಣ್ಣಕಟ್ಟು ರೋಗ ಕಾಣಿಸಿಕೊಳ್ಳುವುದರಿಂದ ರೇಷ್ಮೆ ಗೂಡಿನ ಆವಕ ಕಡಿಮೆಯಾಗಿದ್ದು ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ರೇಷ್ಮೆ ಇಲಾಖೆ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ತಾಲ್ಲೂಕಿನಲ್ಲಿ ಬಹುತೇಕ ರೈತರು ರೇಷ್ಮೆ, ಹೈನುಗಾರಿಕೆಯಿಂದ ಬದುಕು ಕಟ್ಟಿಕೊಂಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಗೂಡಿನ ಬೆಲೆ ಕುಸಿತದಿಂತ ಸಂಕಷ್ಟಕ್ಕೆ ಈಡಾಗಿ ರೇಷ್ಮೆ ಕೃಷಿಯಿಂದಲೇ ಹಿಂದೆ ಸರಿಯುತ್ತಿದ್ದ ರೈತರ ಪಾಲಿಗೆ ಗೂಡಿನ ಬೆಲೆ ಏರಿಕೆಯಾಗುತ್ತಿರುವುದು ವರದಾನವಾಗಿದೆ. ನಗರದ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು ಕೆ.ಜಿಗೆ 752ಕ್ಕೆ



ಮಾರಾಟವಾಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ 4,845 ಸಾವಿರ ರೇಷ್ಮೆ ಬೆಳೆಗಾರರಿದ್ದಾರೆ. 6,498 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ತೋಟವಿದೆ. ಬೆಳೆಗಾರರು, ಕಾರ್ಮಿಕರು, ವ್ಯಾಪಾರಿಗಳು ಸೇರಿದಂತೆ ಸಾವಿರಾರು ಜನ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ರೇಷ್ಮೆ ಕೃಷಿಯಿಂದ ಸುಧಾರಿತ ಜೀವನ ರೂಪಿಸಿಕೊಂಡಿದ್ದಾರೆ. ಚಿಂತಾಮಣಿಯ ರೇಷ್ಮೆ ಗೂಡಿನ ಮಾರುಕಟ್ಟೆಗೆ ಇತ್ತೀಚಿನ ದಿನಗಳಲ್ಲಿ 15–20 ಲಾಟ್ ಗೂಡುಗಳು ಮಾತ್ರ ಆವಕವಾಗುತ್ತಿವೆ. ತಾಲ್ಲೂಕಿನ ನಾಗದೇನಹಳ್ಳಿ ರೈತ ಶಿವಾರೆಡ್ಡಿ ಅವರು ತಂದಿದ್ದ ರೇಷ್ಮೆ ಗೂಡು 752ಕ್ಕೆ ಹರಾಜಾಗಿದೆ. ಕೆ.ಜಿಗೆ ಕನಿಷ್ಠ 600, ಗರಿಷ್ಠ 800, ಸರಾಸರಿ 700ಕ್ಕೆ ಮಾರಾಟವಾಗಿದೆ ಎಂದು ಸ್ಥಳೀಯ ರೇಷ್ಮೆ ಗೂಡಿನ ಮಾರುಕಟ್ಟೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಾರುಕಟ್ಟೆಗೆ ಗೂಡು ತರುವವರ ಸಂಖ್ಯೆ ಕಡಿಮೆಯಾಗಿದ್ದು ಮಾರುಕಟ್ಟೆಯ ಆದಾಯವೂ ಕುಸಿಯುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ರೇಷ್ಮೆ ಮಾರುಕಟ್ಟೆ ಮುಚ್ಚಬೇಕಾಗುತ್ತದೆ. ರೀಲರುಗಳು ಖಾಸಗಿಯಾಗಿ ಗೂಡನ್ನು ಖರೀದಿಸುತ್ತಿರುವ ಪರಿಣಾಮ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಗೆ ಬರುವ ಗೂಡಿನ ಪ್ರಮಾಣ ಕಡಿಮೆ ಆಗುತ್ತಿದೆ. ಮಾರುಕಟ್ಟೆಯಲ್ಲಿ ಸಿಗುವ ದರಕ್ಕಿಂತಲೂ ಹೆಚ್ಚಿನ ದರ ನೀಡಿ ರೈತರಿಂದ ಗೂಡು ಖರೀದಿ ಮಾಡಲಾಗುತ್ತಿದೆ. ಈ ಕಾರಣದಿಂದಲೂ ಮಾರುಕಟ್ಟೆಗೆ ಗೂಡಿನ ಆವಕದ ಪ್ರಮಾಣ ತೀರಾ ಕಡಿಮೆಯಾಗುತ್ತಿದೆ ಎನ್ನುವ ಅಭಿಪ್ರಾಯ ಕೇಳಿ ಬರುತ್ತಿದೆ. ಶ್ರೀಮಂತ ರೀಲರುಗಳು ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಿರುವ ರೈತರ ಬಳಿಗೆ ತೆರಳುತ್ತಾರೆ. 4ನೇ ಜ್ವರ ಚೆನ್ನಾಗಿ ಯಶಸ್ವಿಯಾಗಿದ್ದರೆ ಮುಂಗಡ ಹಣ ನೀಡಿ, ಗೂಡು ಬೆಳೆದ ನಂತರ ನಮಗೆ ಮಾರಾಟ ಮಾಡಬೇಕು ಎಂದು ಬುಕ್ಕಿಂಗ್ ಮಾಡಿಕೊಳ್ಳುತ್ತಾರೆ. ರೈತರು ಚಂದ್ರಿಕೆಗಳಿಂದ ಗೂಡು ಬಿಡಿಸುತ್ತಿದ್ದಂತೆ ತಕ್ಕಡಿ ಸಮೇತವಾಗಿ ತೆರಳಿ ತೂಕ ಹಾಕಿಕೊಂಡು ಹಣ ನೀಡುತ್ತಿದ್ದಾರೆ. ಮನೆಯಲ್ಲೇ ಮಾರಾಟ ಮಾಡಿ ಹಣ ಪಡೆಯುವುದರಿಂದ ರೈತರಿಗೂ ಸಾಗಾಟದ ತೊಂದರೆ ಇಲ್ಲ ಎಂದು ಕೆಲ ರೈತರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

# ಪಠ್ಯ ಪುಸ್ತಕಗಳಲ್ಲಿ ರಕ್ತದಾನ ಪಠ್ಯ ವಿಷಯವಾಗಲಿ

## ಸಂಘಟನೆಯ ಆಶಯಕ್ಕೆ ಪೂರಕವಾಗಿ ರಾಜ್ಯ ಸರಕಾರದಿಂದ ಸಾಕಾರಾತ್ಮಕ ಸ್ಪಂದನೆ

• ಉದಯವಾಹಿನಿ, ಮಂಡ್ಯ

ಜಾತಿ-ಧರ್ಮಗಳ ಸಂಕೋಲೆ ಮೀರಿದ, ಕೃತಕ ಉತ್ಪಾದನೆ ಅಸಾಧ್ಯವಾದ, ಮಾನವೀಯತೆ, ಹೃದಯ ಮಿಡಿತಕ್ಕೆ ಸಾಕ್ಷಿ ಆದುದು ರಕ್ತದಾನ. ಇಂತಹ ರಕ್ತದಾನದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವ ದೃಷ್ಟಿಯಿಂದ ಶಾಲಾ-ಕಾಲೇಜು ಪಠ್ಯದಲ್ಲಿ ರಕ್ತದಾನದ ವಿಷಯ ಸೇರಿಸಬೇಕೆಂಬ ಒತ್ತಾಯದ ಅಭಿಯಾನವು ಮಂಡ್ಯದಲ್ಲಿ ಸದ್ದಿಲ್ಲದೆ ಆರಂಭಗೊಂಡಿದೆ. ಮಂಡ್ಯದ ಎನ್.ಕೆ.ಯುವ ಬ್ರಿಗೇಡ್ ಸಂಘಟನೆಯು ಶಾಲಾ-ಕಾಲೇಜು ಪಠ್ಯ ಪುಸ್ತಕಗಳಲ್ಲಿ ರಕ್ತದಾನ ಪಠ್ಯ ವಿಷಯವಾಗಲಿ ಘೋಷಣೆಯೊಂದಿಗೆ ಅಭಿಯಾನ ಆರಂಭಿಸಿದೆ. ಇದಕ್ಕೆ ಸ್ವತಃ ರಕ್ತದಾನಿಯೂ ಆದ ಬೆಂಗಳೂರಿನ ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಾಥ್ ನೀಡಿದ್ದಾರೆ.

ಎನ್.ಕೆ.ಯುವ ಬ್ರಿಗೇಡ್ ಸಂಘಟನೆಯ ಪದಾಧಿಕಾರಿಗಳು ರಕ್ತದಾನ ವಿಷಯವು ಶಾಲಾ-ಕಾಲೇಜು ಪಠ್ಯವಾಗಲಿ ಎಂಬ ಆಶಯದೊಂದಿಗೆ ಕೆಲವು ದಿನಗಳ ಹಿಂದೆ ರಕ್ತದಾನದ ಮಹತ್ವದ ಸಾರುವ ಪೋಸ್ಟರ್‌ವೊಂದನ್ನು ಸಿದ್ಧಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿತ್ತು. ಇದು ಸಾಕಷ್ಟು ಗ್ರೂಪ್‌ಗಳಲ್ಲಿ ಹಂಚಿಕೆಯಾಗಿ ಸಾರ್ವಜನಿಕ ವಲಯದಲ್ಲಿ ಜಾಗೃತಿಯೊಂದಿಗೆ ಚರ್ಚೆಯನ್ನೂ ಹುಟ್ಟುಹಾಕಿದೆ. 2024-25ರಲ್ಲಿ ದೇಶಾದ್ಯಂತ ಸಂಗ್ರಹಿಸಲಾದ ಒಟ್ಟು ರಕ್ತ ಪ್ರಮಾಣ 1.46 ಕೋಟಿ ಯೂನಿಟ್. ಅಷ್ಟು ರಕ್ತದಾನಿಗಳು ಅಮೂಲ್ಯ ಜೀವಗಳ ರಕ್ಷಣೆಗಾಗಿ ರಕ್ತದಾನ ಮಾಡಿದ್ದಾರೆ. ಒಟ್ಟು ಸಂಗ್ರಹಿಸಲಾದ ರಕ್ತದಲ್ಲಿ ಶೇ.80ರಷ್ಟು ಯೂನಿಟ್‌ಗಳು ಸ್ವಯಂಪ್ರೇರಿತ ರಕ್ತದಾನ ಶಿಬಿರಗಳಲ್ಲಿಯೇ ಎಂಬುದು ಗಮನಿಸಬೇಕಾದ ಸಂಗತಿ.

**ಪೋಸ್ಟರ್ ಅಭಿಯಾನ:** ರಕ್ತದಾನ ಮಹತ್ವ ಸಾರುವ, ರಕ್ತದಾನ ವಿಷಯವನ್ನು ಶಾಲಾಪಠ್ಯವಾಗಿಸುವಂತೆ ಸರಕಾರವನ್ನು ಒತ್ತಾಯಿಸುವ ನಿಟ್ಟಿನಲ್ಲಿ ಎನ್.ಕೆ.ಯುವ ಬ್ರಿಗೇಡ್‌ಸಂಘಟನೆಯು ಪೋಸ್ಟರ್ ಅಭಿಯಾನವನ್ನೂ ನಡೆಸುತ್ತಿದೆ. ಪಠ್ಯ, ರಕ್ತದಾನದ ಮಹತ್ವ ಮತ್ತು ಪ್ರಯೋಜನೆ, ಅಭಿಯಾನ, ರಕ್ತದಾನ-ಶ್ರೇಷ್ಠದಾನ, ಸಿಲಬಸ್, ಕನ್ನಡ ಹೀಗೆ ನಾನಾ ಪದಗಳನ್ನು ಹ್ಯಾಸ್ ಟ್ಯಾಗ್‌ನೊಂದಿಗೆ ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಮ್, ಲಿಂಕ್‌ಡ್ ಇನ್, ವಾಟ್ಸಪ್ ಸೇರಿದಂತೆ ನಾನಾ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟರ್‌ನ್ನು ಪೋಸ್ಟ್ ಮಾಡಿ ಪೋಸ್ಟರ್ ಅಭಿಯಾನಕ್ಕೆ ನಾಂದಿ ಹಾಡಿದೆ.




**ಅಮೂಲ್ಯ ಜೀವಗಳ ಉಳಿವು, ಜನರ ಉತ್ತಮ ಆರೋಗ್ಯಕ್ಕಾಗಿ ರಕ್ತದಾನ ಬಹಳ ಮುಖ್ಯ. ಆದರೆ, ರಕ್ತದಾನದ ವಿಚಾರವಾಗಿ ಇಂದಿಗೂ ಬಹುತೇಕ ಜನರ ಮನಸ್ಸಿನಲ್ಲಿ ತಪ್ಪು ಭಾವನೆಗಳು ಉಳಿದುಕೊಂಡಿವೆ. ಶಾಲಾ-ಕಾಲೇಜು ಪಠ್ಯದಲ್ಲಿ ರಕ್ತದಾನದ ವಿಷಯ ಅಳವಡಿಸುವ ಮೂಲಕ ಜನರಲ್ಲಿನ ತಪ್ಪು ಭಾವನೆಯನ್ನು ಬದಲಿಸಬೇಕಿದೆ. ಇದು ಆಡಳಿತ ನಡೆಸುವ ಸರ್ಕಾರಗಳ ಜವಾಬ್ದಾರಿಯಾಗಿದೆ.**
**-ಕೆ.ಎಂ.ಶಿವಪ್ರಸಾದ್, ಸಂಚಾಲಕ, ಎನ್.ಕೆ.ಯುವ ಬ್ರಿಗೇಡ್, ಮಂಡ್ಯ**



**ರಕ್ತದಾನದ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸುವ ನಿಟ್ಟಿನಲ್ಲಿ ಸರಕಾರ ಕ್ರಮ ವಹಿಸಬೇಕಿದೆ. ಇದಕ್ಕೆ ಉತ್ತಮ ಮಾರ್ಗವೆಂದರೆ ಶಾಲಾ-ಕಾಲೇಜು ಪಠ್ಯದಲ್ಲಿ ರಕ್ತದಾನದ ವಿಷಯ ಸೇರಿಸುವುದಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರ ಮಹತ್ವದ ಹೆಜ್ಜೆ ಇಡಬೇಕು.**
**-ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ**

**ಸರಕಾರದ ಸ್ಪಂದನೆ:** ಪೋಸ್ಟರ್ ಅಭಿಯಾನದ ಜತೆಗೆ ಎನ್.ಕೆ.ಯುವ ಬ್ರಿಗೇಡ್‌ನ ಸದಸ್ಯರು ಜ.13ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮೂರು ಪುಟಗಳ ಸುದೀರ್ಘ ಪತ್ರ ಬರೆದು ರಕ್ತದಾನದ ವಿಷಯವನ್ನು ಶಾಲಾ-ಕಾಲೇಜು ಪಠ್ಯದಲ್ಲಿ ಸೇರಿಸುವಂತೆ ಒತ್ತಾಯಿಸಿದ್ದರು.

ಸಂಘಟನೆಯ ಆಶಯಕ್ಕೆ ಪೂರಕವಾಗಿ ರಾಜ್ಯ ಸರಕಾರದಿಂದ ಸಾಕಾರಾತ್ಮಕ ಸ್ಪಂದನೆ ದೊರೆತಿದೆ. ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಎಂ.ಶಾಂತಪ್ಪ ಅವರು ಎನ್.ಕೆ.ಯುವ ಬ್ರಿಗೇಡ್‌ನ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಈ ಪತ್ರ ಸಂಖ್ಯೆಯನ್ನು ಉಲ್ಲೇಖಿಸಿ, ಈ ಸಂಬಂಧ ಕೈಗೊಂಡಿರುವ ಕ್ರಮದ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಯಿಂದ ಮಾಹಿತಿ ಪಡೆಯುವಂತೆ ಎನ್.ಕೆ.ಯುವ ಬ್ರಿಗೇಡ್ ಸಂಘಟನೆಗೆ ತಿಳಿಸಿ ಪತ್ರ ಬರೆದಿದ್ದಾರೆ.

**ರಕ್ತದಾನಿಗಳ ಸಂಘಟನೆ:** ಎನ್.ಕೆ.ಯುವ ಬ್ರಿಗೇಡ್ ಸಂಘಟನೆಯು ಸ್ವತಃ ನೂರಾರು ಮಂದಿ ರಕ್ತದಾನಿಗಳನ್ನು ಹೊಂದಿರುವ ಸಂಘಟನೆಯಾಗಿದೆ. ಮಂಡ್ಯದ ಮಿಮ್ಸ್ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ವರ್ಷಕ್ಕೆ ನಾಲ್ಕು ರಕ್ತದಾನ ಶಿಬಿರಗಳನ್ನು ನಿಯಮಿತವಾಗಿ ಸಂಘಟಿಸಿ, ಈವರೆಗೆ ಸಾವಿರಾರು ಯುನಿಟ್‌ಗಳ ರಕ್ತವನ್ನು ಸಂಗ್ರಹಿಸಿದೆ ಸ್ವಾತಂತ್ರ್ಯ ದಿನಾಚರಣೆ, ನಾಡಪ್ರಭು ಕೆಂಪೇಗೌಡ ಜಯಂತಿ, ಗಾಂಧಿಜಯಂತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಕುವೆಂಪು ಜನ್ಮದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರಗಳನ್ನು ಮಂಡ್ಯ, ಮದ್ದೂರು, ಮಳವಳ್ಳಿ, ಭಾರತಿನಗರದಲ್ಲಿ(ಕೆ.ಎಂ.ದೊಡ್ಡಿ) ಆಯೋಜಿಸುತ್ತಾ ಬಂದಿದೆ.

## ಮಿನಿ ನ್ಯೂಸ್

### ಥರ್ಮೋಪ್ಯಾಕ್ ಕಾರ್ಖಾನೆಯಲ್ಲಿ ಬೆಂಕಿ

• ಉದಯವಾಹಿನಿ, ಬಿಡದಿ

ಇಲ್ಲಿನ ಕೈಗಾರಿಕಾ ಪ್ರದೇಶದ ತಾಳಗುಪ್ಪದಲ್ಲಿರುವ ಕ್ವಾಲಿಟಿ ಥರ್ಮೋಪ್ಯಾಕ್ ಅಂಡ್ ಇನ್ಸುಲೇಷನ್ ಇಂಡಸ್ಟ್ರೀಸ್‌ನಲ್ಲಿ ಸಂಜೆ ಶಾರ್ಟ್ ಸರ್ಕೀಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡು, ಲಕ್ಷಾಂತರ ರೂಪಾಯಿ ಮೌಲ್ಯದ ಸಾಮಗ್ರಿಗಳು ಬೆಂಕಿಗೆ ಆಹುತಿಯಾದವು. ಫ್ಯಾಕ್ಟರಿಯಲ್ಲಿ ಸಂಜೆ 6.15ಕ್ಕೆ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿಯು ಕೆಲವೇ ಕ್ಷಣಗಳಲ್ಲಿ ಇತರೆಡೆಗೂ ವ್ಯಾಪಿಸಿತು. ಕೂಡಲೇ ಭದ್ರತಾ ಸಿಬ್ಬಂದಿ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ವಿಷಯ ತಿಳಿಸಿದರು. ಸ್ಥಳಕ್ಕೆ ಮೂರು ವಾಹನಗಳೊಂದಿಗೆ ಬಂದ ಅಗ್ನಿಶಾಮಕ ಅಧಿಕಾರಿ ಮೋಹನ ಮುದಿಗೌಡರ ನೇತೃತ್ವ ತಂಡವು ಸತತ 3 ತಾಸು ಕಾರ್ಯಾಚರಣೆ ನಡೆಸಿ ಅಗ್ನಿ ನಂದಿಸಿತು. ಘಟನೆ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ ಬಿಟ್ಟರೆ ಬೇರೆ ಕಾರ್ಮಿಕರು ಇರಲಿಲ್ಲ. ಫ್ಯಾಕ್ಟರಿ ಒಳಗಿರುವ ಕಚ್ಚಾ ಹಾಗೂ ಸಿದ್ಧ ಸಾಮಗ್ರಿಗಳು ಬೆಂಕಿಯ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿವೆ. ಬೆಂಕಿಯ ತೀವ್ರತೆಗೆ ಕಪ್ಪು ಹೊಗೆಯು ಮುಗಿಲೆತ್ತರಕ್ಕೆ ಕಾಣುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದರು.

### ಫಲಾನುಭವಿ ಪಟ್ಟಿ ಶೀಘ್ರ ಸಿದ್ಧಪಡಿಸಿ ಡಿಸಿ ಯಶವಂತ್ ವಿ. ಗುರುಕರ್ ಸೂಚನೆ

• ಉದಯವಾಹಿನಿ, ರಾಮನಗರ

ಮಾರ್ಚ್ ಮೊದಲ ವಾರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಫಲಾನುಭವಿಗಳ ಪಟ್ಟಿಯನ್ನು ಶೀಘ್ರ ಸಿದ್ಧಪಡಿಸಬೇಕು ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಅಂದಾಜು 75 ಸಾವಿರ ಫಲಾನುಭವಿಗಳು ಭಾಗವಹಿಸುವ ಸಾಧ್ಯತೆ ಇದೆ ಎಂದರು. ಕೃಷಿ, ತೋಟಗಾರಿಕೆ, ರೇಷ್ಮೆ, ಕಾರ್ಮಿಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ, ಪಶುಪಾಲನೆ, ಹಿರಿಯ ನಾಗರಿಕರು, ವಿಕಲಚೇತನರ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸೌಲಭ್ಯ ಪಡೆಯಲಿರುವ ಫಲಾನುಭವಿಗಳನ್ನು ಗುರುತಿಸಿ, ಪಟ್ಟಿ ಮಾಡಿ ಡಿಸಿ ಕಚೇರಿಗೆ ನೀಡಬೇಕು ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಬಿಂಬಿಸುವ ಮಳಿಗೆಗಳ ಪ್ರದರ್ಶನ ಏರ್ಪಡಿಸಲಾಗುವುದು. ಅದಕ್ಕೆ ಅಗತ್ಯ ಮಾಹಿತಿಯನ್ನು ಕ್ರೋಢೀಕರಿಸಬೇಕು ಎಂದರು.

### ಮಹಿಳೆಯರ ವಿಡಿಯೋ ಸೆರೆ: ಬಂಧನ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ದಾಸನಪುರದ ಗ್ರಾಮದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಮಹಿಳೆಯರ ಚಲನವಲನ, ಹಾವಭಾವದ ದೃಶ್ಯಗಳನ್ನು ಸೆರೆಹಿಡಿಯುತ್ತಿದ್ದ ಆರೋಪದ ಮೇರೆಗೆ ದಾಸನಪುರದ ವರದರಾಜು ಎಂಬುವರನ್ನು ಕುಣಿಗಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸಾರ್ವಜನಿಕ ಸ್ಥಳ, ಪ್ರಯಾಣಿಕರ ತಂಗುದಾಣ, ರಸ್ತೆ ಬದಿ ಸೇರಿ ಗ್ರಾಮದ ವಿವಿಧೆಡೆ ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಸಿ, ಮೊಬೈಲ್‌ಗೆ ಸಂಪರ್ಕ ಪಡೆದಿದ್ದಾರೆ. ಮಹಿಳೆಯರ ಚಲನವಲನ, ಹಾವಭಾವ, ಬಯಲಲ್ಲಿ ಶೌಚಕ್ಕೆ ತೆರಳುವಾಗ ವಿಡಿಯೋ ಮಾಡಿದ್ದಾರೆ. ಎಲ್ಲಾ ವಿಡಿಯೋಗಳನ್ನು ಸ್ನೇಹಿತರ ಜತೆಗೆ ಹಂಚಿಕೊಂಡಿದ್ದಾರೆ. ಇದರಿಂದ ಮಹಿಳೆಯರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ದಾಸನಪುರದ ಪವಿತ್ರಾ ರಾತ್ರಿ 40ಕ್ಕೂ ಹೆಚ್ಚು ಮಹಿಳೆಯರ ಜತೆಗೆ ಕುಣಿಗಲ್ ಠಾಣೆಗೆ ಭೇಟಿ ನೀಡಿ ದೂರು ಸಲ್ಲಿಸಿದ್ದರು. ವರದರಾಜು ಸಂಘಟನೆಯೊಂದರ ಹೆಸರು ಹೇಳಿ ಎಲ್ಲರಿಗೂ ಬೆದರಿಕೆ ಹಾಕುತ್ತಿದ್ದಾರೆ. ಮಾನ, ಮರ್ಯಾದೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಠಾಣೆಗೆ ದೂರು ನೀಡಿದ್ದೇವೆ. ಸಿ.ಸಿ ಟಿ.ವಿ ಕ್ಯಾಮೆರಾ ತೆರವುಗೊಳಿಸಬೇಕು. ಅದರಲ್ಲಿ ಸೆರೆಯಾಗಿರುವ ಎಲ್ಲಾ ದೃಶ್ಯಗಳನ್ನು ಡಿಲೀಟ್ ಮಾಡಬೇಕು. ಮಹಿಳೆಯರು ಮತ್ತು ಮಕ್ಕಳಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ಪವಿತ್ರಾ ಮನವಿ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ವರದರಾಜು ಅವರನ್ನು ಬಂಧಿಸಿದ್ದಾರೆ.

### ಸಚಿವ ಪರಮೇಶ್ವರ ಹೆಸರು ಬಳಸಿ 3.43 ಲಕ್ಷ ಪಡೆದು ವಂಚನೆ

• ಉದಯವಾಹಿನಿ, ತುಮಕೂರು

ಗೃಹ ಸಚಿವ ಜಿ.ಪರಮೇಶ್ವರ ನಮ್ಮ ಸಂಬಂಧಿಕರು, ಅವರ ಜತೆ ಮಾತನಾಡಿ ಗ್ರಾಮ ಆಡಳಿತಾಧಿಕಾರಿ ಹುದ್ದೆ ಕೊಡುಸುತ್ತೇನೆ ಎಂದು ನಂಬಿಸಿ 3.43 ಲಕ್ಷ ಹಣ ಪಡೆದು ವಂಚಿಸಿದ ಆರೋಪದ ಮೇರೆಗೆ ತಾಲ್ಲೂಕಿನ ಕೋಡಿತಿಮ್ಮನಹಳ್ಳಿ ಗ್ರಾಮದ ಪ್ರವೀಣ್ ಕುಮಾರ್, ಅವರ ತಂದೆ ರಂಗಪ್ಪ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಉದ್ಯೋಗ ಕೊಡಿಸಲು 4 ಲಕ್ಷದಿಂದ 5 ಲಕ್ಷ ಖರ್ಚಾಗುತ್ತದೆ. ಮೊದಲಿಗೆ 3.50 ಲಕ್ಷ ಕೊಡಿ. ಆದೇಶ ಪ್ರತಿ ಬಂದ ನಂತರ ಉಳಿಕೆ ಹಣ ಕೊಟ್ಟರೆ ಸಾಕು ಎಂದು ಹಣ ಪಡೆದಿದ್ದರು. ಈಗ ಕರೆ ಮಾಡಿದರೆ ಸ್ವೀಕರಿಸುತ್ತಿಲ್ಲ. ಹಣ ಪಡೆದು ಮೋಸ ಮಾಡಿದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಗುಬ್ಬಿ ಪಟ್ಟಣದ ಎಂ.ಆರ್.ಲಾವಣ್ಯಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. ಷೋರೂಮ್‌ನಲ್ಲಿ ಕೆಲಸ ಮಾಡುವಾಗ ಪ್ರವೀಣ್ ಕುಮಾರ್ ಪರಿಚಯವಾಗಿತ್ತು. ಆಗ ಕೆಲಸದ ಬಗ್ಗೆ ಹೇಳಿದ್ದರು.

# ನಮ್ಮ ಭೂಮಿ ನಮ್ಮ ಹಕ್ಕು, ಮೇಕೆದಾಟು ಯೋಜನೆ ಕುರಿತು ವಿಚಾರ ಮಂಡನೆ

• ಉದಯವಾಹಿನಿ, ರಾಮನಗರ

ಕರ್ನಾಟಕ ರಾಜ್ಯ ರೈತ ಸಂಘವು ರೈತ ನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ನೆನಪು, ವಿಚಾರಮಂಥನ ಗೋಷ್ಠಿ ಕಾರ್ಯಕ್ರಮವನ್ನು ಫೆ. 26ರಂದು ಕನಕಪುರದ ಕೋಟೆ ಗಣಪತಿ ದೇವಸ್ಥಾನದಲ್ಲಿ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿದೆ ಎಂದು ಸಂಘದ ಯುವ ರಾಜ್ಯ ಸಂಚಾಲಕ ಚೀಲೂರು ಮುನಿರಾಜು ಹೇಳಿದರು. ನಮ್ಮ ಭೂಮಿ ನಮ್ಮ ಹಕ್ಕು ಹಾಗೂ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ನಮ್ಮ ನೀರು ನಮ್ಮ ಹಕ್ಕು ವಿಷಯಗಳ ಕುರಿತು ವಿಚಾರ ಮಂಥನ ಹಾಗೂ ಸಂವಾದ ನಡೆಯಲಿದೆ. ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪಾಧ್ಯಕ್ಷ ಕೆ. ಮಲ್ಲಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಎಪಿಎಂಸಿಯಲ್ಲಿರುವ ರೈತ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಯ ಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಅಂದು ಸಂಘದ ಜಿಲ್ಲಾಧ್ಯಕ್ಷ ಎಚ್.ಸಿ. ಕೃಷ್ಣಯ್ಯ, ಯುವ ರಾಜ್ಯ ಸಂಚಾಲಕ ಚೀಲೂರು ಮುನಿರಾಜು ಸೇರಿದಂತೆ ಜಿಲ್ಲಾ, ತಾಲ್ಲೂಕು ಘಟಕದ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಲಿದ್ದಾರೆ ಎಂದರು.



ಉದಯವಾಹಿನಿ ಚಿತ್ರ

### ಭ್ರಷ್ಟಾಚಾರದ ವಿರುದ್ಧ ಬಾರುಕೋಲು ಚಳವಳಿ

**ಕಂದಾಯ ಇಲಾಖೆಯಲ್ಲಿ ಒಂದೇ ಕಡೆ ಹಲವು ವರ್ಷಗಳಿಂದ ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಬೀಡು ಬಿಟ್ಟಿದ್ದಾರೆ. ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಪ್ರಮುಖ ಕಾರಣವಾಗಿರುವ ಇವರನ್ನು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿ ಕಾರ್ಯಕ್ರಮದ ದಿನವೇ ಬಾರುಕೋಲು ಚಳವಳಿಗೆ ಚಾಲನೆ ನೀಡಲಾಗುವುದು. ಅಲ್ಲದೆ ಸಮಗ್ರ ನೀರಾವರಿ ಸೌಲಭ್ಯಕ್ಕೆ ಒತ್ತಾಯಿಸಿ ಹನೂರು ತಾಲ್ಲೂಕಿನ ರೈತರು ಹಮ್ಮಿಕೊಂಡಿರುವ ವಿಧಾನಸೌಧ ಚಲೋ ಪಾದಯಾತ್ರೆಗೆ ಸಂಘವು ಬೆಂಬಲ ನೀಡಲಿದೆ. ಜಾಥಾ ಜಿಲ್ಲೆ ಪ್ರವೇಶಿಸಿದಾಗ ಅವರೊಂದಿಗೆ ನಾವೂ ಸಹ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತೇವೆ.**
**-ಕೆ. ಮಲ್ಲಯ್ಯ , ರೈತ ಸಂಘದ ಉಪಾಧ್ಯಕ್ಷ**

ರೈತರು, ದುಡಿಯುವ ವರ್ಗದ ಪರವಾಗಿ ದಿಟ್ಟ ದನಿ ಎತ್ತಿದ ನಂಜುಂಡಸ್ವಾಮಿ ಅವರು, ಇವೆರಡೂ ವರ್ಗಗಳನ್ನು ದಾಸ್ಯದಿಂದ ಬಿಡುಗಡೆ ಮಾಡಲು ಹೋರಾಟದ ಕಿಚ್ಚು ಹತ್ತಿಸಿದರು. ತಮ್ಮ ಕೊನೆಯ ಉಸಿರು ಇರುವವರೆಗೆ ಹೋರಾಟ ನಡೆಸಿದರು. ಅವರ ನೆನಪಿನಾರ್ಥವಾಗಿ, ಜಿಲ್ಲೆಯ ಜ್ವಲಂತ ಸಮಸ್ಯೆಗಳ ಕುರಿತು ವಿಚಾರಗೋಷ್ಠಿ ಹಮ್ಮಿಕೊಂಡು ರೈತರಿಗೆ ಜಾಗೃತಿ ಮೂಡಿಸಲಾಗುವುದು ಎಂದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕ ಗಳಿಸಿದರೆ 1 ಲಕ್ಷ ಬಹುಮಾನ

• ಉದಯವಾಹಿನಿ, ಶಿಡ್ಲಘಟ್ಟ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ ಶಾಲಾ ಮಕ್ಕಳು 625ಕ್ಕೆ 625 ಅಂಕಗಳಿಸಿದರೆ ಅವರಿಗೆ 1 ಲಕ್ಷ, ಆ ಶಾಲಾ ಶಿಕ್ಷಕರಿಗೆ ಸೂಕ್ತ ಬಹುಮಾನ ನೀಡಲಾಗುವುದು ಎಂದು ಶಾಸಕ ಬಿ.ಎನ್.ರವಿಕುಮಾರ್ ಹೇಳಿದರು. ತಾಲ್ಲೂಕಿನ ಕೊಂಡಪ್ಪಗಾರಹಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಿದ್ದ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕಾರ್ಯಾಗಾರ ಮತ್ತು ಪೂರ್ವ ಸಿದ್ಧತಾ ಪರೀಕ್ಷೆ 1-2ರ ಫಲಿತಾಂಶ ವಿಶ್ಲೇಷಣೆ ಬಗ್ಗೆ ಮುಖ್ಯ ಶಿಕ್ಷಕರ ಸಭೆಯಲ್ಲಿ ಮಾತನಾಡಿದರು.

ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು 625 ಅಂಕ ಪಡೆಯುತ್ತಾರೋ ಅಷ್ಟು ವಿದ್ಯಾರ್ಥಿಗಳಿಗೂ ಬಹುಮಾನ ನೀಡುತ್ತೇನೆ. ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಶಿಡ್ಲಘಟ್ಟ ಮೂರನೇ ಸ್ಥಾನ ಹಾಗೂ ಕಳೆದ ಬಾರಿ ಎರಡನೇ ಸ್ಥಾನ ಪಡೆದಿತ್ತು. ಈ ಬಾರಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಬೇಕು ಎಂದರು. ನಾನು ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುತ್ತಿದ್ದೇನೆ. ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಸಚಿವ ಚಿಂತಾಮಣಿಯ ಡಾ.ಎಂ.ಸಿ ಸುಧಾಕರ್ ಉತ್ತಮ



ಉದಯವಾಹಿನಿ ಚಿತ್ರ

ವಿದ್ಯಾಭ್ಯಾಸ ಮಾಡಿದ್ದಾರೆ.ಜಿಲ್ಲೆಯ ಶಾಸಕರ ಪೈಕಿ ಕಡಿಮೆ ಓದಿರುವುದು ನಾನೇ. ನಾನು ಓದಿರುವುದು ಕೇವಲ 7ನೇ ತರಗತಿ. ನಾನು ಪಡೆಯದ ಶಿಕ್ಷಣವನ್ನು ಈ ಕ್ಷೇತ್ರದ ಎಲ್ಲಾ ಮಕ್ಕಳು ಪಡೆಯಬೇಕು ಎಂದು ಹೇಳಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಮೇಶ್ ಮಾತನಾಡಿ, ಜಿಲ್ಲೆಯು ಈ ಹಿಂದೆ ಮೊದಲನೇ ಸ್ಥಾನ ಗಳಿಸಿದೆ. ಕಳೆದ ಬಾರಿ 22ನೇ ಸ್ಥಾನ ಪಡೆದು ಹಿನ್ನಡೆ ಅನುಭವಿಸಿದೆ. ಹಾಗಾಗಿ ಈ ಬಾರಿ ಚಿಕ್ಕಬಳ್ಳಾಪುರ ಜಿಲ್ಲೆಯು ಕನಿಷ್ಠ 10 ಒಳಗೆ 8, 7, 6ನೇ ಸ್ಥಾನಗಳಿಗೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯು ಶೇಕಡಾ 95, 96 ರಷ್ಟು ಫಲಿತಾಂಶ ಬರಬೇಕು ಎನ್ನುವ ಗುರಿಯನ್ನು ಹೊಂದಿರಬೇಕು ಎಂದರು.

# ನರೇಗಾವಲ್ಲ, ಮುಖ್ಯಮಂತ್ರಿ ಕುರ್ಚಿ ಬಚಾವೊ ಆಂದೋಲನ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕಾಂಗ್ರೆಸ್ ಪಕ್ಷವು ಚಿಕ್ಕಬಳ್ಳಾಪುರದಲ್ಲಿ ಫೆ.23ರಂದು ಹಮ್ಮಿಕೊಂಡಿರುವುದು ನರೇಗಾ ಬಚಾವೊ ಆಂದೋಲನವಲ್ಲ, ಅದು ಮುಖ್ಯಮಂತ್ರಿ ಕುರ್ಚಿ ಬಚಾವೊ ಆಂದೋಲನ ಎಂದು ಸಂಸದ ಡಾ.ಕೆ.ಸುಧಾಕರ್ ವಾಗ್ದಾಳಿ ನಡೆಸಿದರು. ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಜಿಲ್ಲೆಯಿಂದ ನರೇಗಾ ಬಚಾವೊ ಆಂದೋಲನ ಪ್ರಾರಂಭಿಸುತ್ತೇವೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಸಿ.ಎಂ ಬದಲಾವಣೆ ವಿಚಾರದಲ್ಲಿ ಸಿದ್ದರಾಮಯ್ಯ ಅವರಿಗೆ ದುಗುಡ ಆರಂಭವಾಗಿದೆ. ಆದ್ದರಿಂದ ಜಾತಿ ತಂದಿದ್ದಾರೆ. ಬಿಜೆಪಿ ಮೇಲೆ ನಾನಾ



ಉದಯವಾಹಿನಿ ಚಿತ್ರ

ವಿಚಾರದಲ್ಲಿ ಗೂಬೆ ಕೂರಿಸುತ್ತಿದ್ದಾರೆ ಎಂದರು. ಸಿದ್ದರಾಮಯ್ಯ ಅವರು ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ್ದಾರೆ. ಜೊತೆಗೆ ಅತಿ ಹೆಚ್ಚು ಸಾಲ ಮಾಡಿದವರೂ ಮತ್ತು ಜನರ ಮೇಲೆ ಸಾಲದ ಹೊರೆ ಹೇರಿದ ಕೀರ್ತಿ ಸಹ ಇವರಿಗೆ ಸಲ್ಲುತ್ತದೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಬಯಲು ಸೀಮೆಯ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರಕ್ಕೆ ಕಾಂಗ್ರೆಸ್ ಕೊಡುಗೆ ಏನು? ಎತ್ತಿನಹೊಳೆ ನೀರು ಇಂದಿಗೂ ಈ ಜಿಲ್ಲೆಗಳಿಗೆ ಹರಿದಿಲ್ಲ. ಎಚ್‌ಎನ್‌ವ್ಯಾಲಿ, ಕೆಸಿವ್ಯಾಲಿ ಕೊಳಚೆ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸುವುದಾಗಿ ಬಿಜೆಪಿ ಸರ್ಕಾರ ಬಜೆಟ್ ನಲ್ಲಿ ಘೋಷಿಸಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಮೌನವಹಿಸಿದೆ. ಕಾಂಗ್ರೆಸ್ ಸಮಾವೇಶದಲ್ಲಿ ಈ ಬಗ್ಗೆ ಮುಖ್ಯಮಂತ್ರಿ ಉತ್ತರ ನೀಡಬೇಕು ಎಂದು ಆಗ್ರಹಿಸಿದರು.

ಇಂದಿರಾಗಾಂಧಿ, ರಾಜೀವ್ ಗಾಂಧಿ, ಸಂಜಯ್ ಗಾಂಧಿ ಹೆಸರನ್ನು ದೇಶದ 400 ಸಂಸ್ಥೆಗಳಿಗೆ ಇಟ್ಟಿದ್ದಾರೆ. ದೇಶಕ್ಕೆ ಸಂಜಯ್ ಗಾಂಧಿ ಕೊಡುಗೆ ಏನು? ಮದ್ಯಪಾನದ ವಿರುದ್ಧ ಗಾಂಧೀಜಿ ಅವರು ಹೋರಾಟ ನಡೆಸಿದರು. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗಲ್ಲಿ ಗಲ್ಲಿಗಳಲ್ಲಿ ಮದ್ಯದ ಅಂಗಡಿಗಳನ್ನು ಆರಂಭಿಸಲು ಪರವಾನಗಿ ಕೊಡುತ್ತಿದೆ. ಇದು ಕಾಂಗ್ರೆಸ್ ನವರು ಮಹಾತ್ಮ ಗಾಂಧೀಜಿ ಅವರಿಗೆ ನೀಡುವ ಗೌರವ ಎಂದು ವಾಗ್ದಾಳಿ ನಡೆಸಿದರು.

ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 15 ವಿಧಾನಸಭಾ ಕ್ಷೇತ್ರಗಳ ಪೈಕಿ 2028ರ ವಿಧಾನಸಭಾ ಚುನಾವಣೆಯಲ್ಲಿ ಎನ್ ಡಿಎ ಗೆಲುವು 12 ಕ್ಷೇತ್ರದಲ್ಲಿ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಒಳಮೀಸಲಾತಿ ಪದ್ಧತಿ ಬಲಗೈ ಸಮುದಾಯದ ಮರಣಶಾಸನ : ಸರ್ಕಾರದ ನಡೆಗೆ ಡಾ.ನವೀನ್ ಮೌರ್ಯ ಆಕ್ಷೇಪ

# ರೋಸ್ಟರ್ ಬಿಂದುವಿನಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯ

• ಉದಯವಾಹಿನಿ, ಗುಂಡ್ಲುಪೇಟೆ

ರೋಸ್ಟರ್ ಬಿಂದುವಿನಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಕೂಡಲೇ ಇದನ್ನು ಹಿಂಪಡೆಯಬೇಕು ಎಂದು ದಲಿತ ಮುಖಂಡ ಡಾ.ನವೀನ್ ಮೌರ್ಯ ಒತ್ತಾಯಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಲಗೈ ಸಮುದಾಯದ ಒಕ್ಕೂಟಗಳ ವತಿಯಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ಎಡಗೈ ಸಮುದಾಯವನ್ನು ಪ್ರವರ್ಗ ಎಗೆ ಸೇರಿಸಿ, ಬಲಗೈ ಅನ್ನು ಪ್ರವರ್ಗ ಬಿಗೆ ಸೇರ್ಪಡೆ ಮಾಡುವ ಮೂಲಕ ಸರ್ಕಾರ ಒಳ ಮೀಸಲಾತಿಯಲ್ಲಿ ಗೊಂದಲ ಸೃಷ್ಟಿಸಿದೆ ಎಂದು ಅಸಮಾಧಾನ ಹೊರ ಹಾಕಿದರು. ಬಲಗೈ ಸಂಬಂಧಿತ 19 ಜಾತಿಗಳಿದ್ದು, ರೋಸ್ಟರ್ ಬಿಂದು ಮೂಲಕ ಬಲಗೈ ಸಮಾಜದವರ ಹಕ್ಕನ್ನು ಕಸಿಯುವ ಹುನ್ನಾರವನ್ನು ಸರ್ಕಾರ ನಡೆಸುತ್ತಿದೆ.

ಇದರಿಂದ ಶೈಕ್ಷಣಿಕವಾಗಿ ಸಮಾಜ ಹಿಂದುಳಿಯಲಿದೆ ರಾಜ್ಯಪಾಲರ ಆದೇಶ ಉಲ್ಲಂಘಿಸಿ ರೋಸ್ಟರ್ ಬಿಂದು ಅಡಿಯಲ್ಲಿ ಮೀಸಲು ಜಾರಿಗೆ ಸರ್ಕಾರ ಮುಂಗಿರುವುದು ಖಂಡನೀಯ. ದಲಿತರ ಸಮುದಾಯ ಒಗ್ಗಟ್ಟು ಮುರಿಯುವ ಹುನ್ನಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಾತಿ ಪ್ರಮಾಣ ನೀಡುವ ವೇಳೆ ಸಮಾನ ನ್ಯಾಯ ಒದಗಿಸಲಾಗಿತ್ತು. ಆದರೆ ಪ್ರಸ್ತುತವಾಗಿ ಪ್ರಮಾಣ ಪತ್ರ ಪಡೆಯಲು ಗೊಂದಲ ಉಂಟಾಗಿದೆ. ಸಮಾಜ ಕಲ್ಯಾಣ ಇಲಾಖೆ 2025ರ ಆದೇಶದಂತೆ ಒಳ ಮೀಸಲಾತಿ ಹೋರಾಟದಲ್ಲಿ ಭಾಗಿಯಾಗಿದ್ದವರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯಲಾಗುವುದು ಎಂದು ತಿಳಿಸಿದ್ದರು. ಆದರೆ ಕೊಳ್ಳೇಗಾಲದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಸ್ವಪಕ್ಷ ಕಾರ್ಯಕರ್ತರ ವಿರುದ್ಧವೇ ಮೊಕದ್ದಮೆ ದಾಖಲಿಸಿರುವುದು ಖಂಡನೀಯ. ಕೇವಲ ಮತಕ್ಕಾಗಿ ಬಲಗೈ ಸಮುದಾಯವನ್ನ ಬಳಸಿಕೊಳ್ಳುವ ನಿಮ್ಮಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ. ಸಮುದಾಯದ ಪರವಾಗಿ ಹೋರಾಟಕ್ಕಿಳಿದವರ ಮೇಲೆ ಕೇಸ್ ದಾಖಲಿಸುವುದು ಎಷ್ಟರ ಮಟ್ಟಿಗೆ ಸರಿ. ಚಳುವಳಿಯಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುವುದು ಸರ್ವೇ ಸಾಮಾನ್ಯ. ಹಾಗಂತ ಎಲ್ಲರ ಮೇಲೂ ಪ್ರಕರಣ ದಾಖಲು ಮಾಡುವುದು ಸರಿಯಲ್ಲ. ಆದ್ದರಿಂದ ಈ ಕೂಡಲೇ ಪ್ರತಿಭಟನಾನಿರತರ ಮೇಲಿನ ಕೇಸ್‌ಗಳನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

### ಮಾ.2ರಂದು ಪ್ರತಿಭಟನೆ

**ದಲಿತ ಮುಖಂಡ ಸುಭಾಷ್ ಮಾಡ್ರಹಳ್ಳಿ ಮಾತನಾಡಿ, ರಾಜ್ಯ ಸರ್ಕಾರ ತಂದಿರುವ ಒಳಮೀಸಲಾತಿ ವರ್ಗೀಕರಣ ಬಲಗೈ ಸಮುದಾಯದ ಜಾತಿಗಳಿಗೆ ಮಾರಕವಾಗಿದೆ. ನಾವು ಎಡಗೈ ಸಮುದಾಯದ ವಿರೋಧಿಗಳಲ್ಲ. ಆದರೆ ಸಮಾನ ನ್ಯಾಯ ಕಲ್ಪಿಸಬೇಕಿರುವ ಸರ್ಕಾರವೇ ಒಡೆದಾಳುವ ನೀತಿಗೆ ಮುಂದಾಗಿರುವುದು ಅಕ್ಷಮ್ಯ. ಸಿದ್ದರಾಮಯ್ಯ ಸರ್ಕಾರದ ಬಲಗೈ ಸಮುದಾಯದ ಶಾಸಕ, ಸಚಿವರು ಇಂತಹ ಆದೇಶಗಳನ್ನು ವಿರೋಧಿಸದೆ ಮೌನ ವಹಿಸಿರುವುದು ಸಮುದಾಯಕ್ಕೆ ಮಾಡಿದ ಅಪಮಾನವಾಗಿದೆ. ಆದ್ದರಿಂದ ರೋಸ್ಟರ್ ಬಿಂದು ನಿಯಮ ವಿರೋಧಿಸಿ ಮಾ.2ರಂದು ರಾಜ್ಯ ಸರ್ಕಾರದ ವಿರುದ್ಧ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.**

### ಸಮಾಜ ಕಲ್ಯಾಣ ಇಲಾಖೆ ಸಚಿವರ ನಿರ್ಲಕ್ಷ್ಯ

**ವಿಶ್ವ ವಿದ್ಯಾಲಯವನ್ನು ಘಟಕವನ್ನಾಗಿ ಮಾಡಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈ ಕೋರ್ಟ್ ನಿರ್ದೇಶನ ನೀಡಿದ್ದರೂ ಸಹ ಸಮಾಜ ಕಲ್ಯಾಣ ಇಲಾಖೆ ಸಚಿವ ಮಹದೇವಪ್ಪ ಘಟಕ ಮಾಡಲು ಮುಂದಾಗಿ ಸಮುದಾಯದ ಜನರಿಗೆ ದ್ರೋಹ ಎಸಗುತ್ತಿದ್ದಾರೆ ಎಂದು ಗುಡುಗಿದರು. ಎಡಗೂ ಮತ್ತು ಬಲಗೈ ಎರಡು ಸಮುದಾಯದ ನಡುವೆ ತಿಕ್ಕಾಟ ತಂದಿರಿಸಿ ರಾಜಕೀಯ ಲಾಭ ಪಡೆಯಲು ಮುಂದಾಗಿರುವ ಸಿದ್ದರಾಮಯ್ಯ, ಮಹದೇವಪ್ಪ, ಪ್ರಿಯಾಂಕ ಖರ್ಗೆಗೆ ನಾಚಿಕೆಯಾಗಬೇಕು. ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದ್ದರು ಕೈಕಟ್ಟಿ ಕುಳಿತಿರುವ ನೀವು ಮುಖ್ಯಮಂತ್ರಿಗಳ ಕೈ ಗೊಂಬೆಗಳಾಗಿದ್ದೀರಿ ಎಂದು ಸಚಿವ ಮಹದೇವಪ್ಪರನ್ನು ಟೀಕಿಸಿದರು.**

**ಹೇಳಿಕೆ ಬಾಲಿಶ:** ರಾಜಕೀಯ ದುರುದ್ದೇಶದಿಂದ ಪ್ರತಿಭಟನೆ ಹಾಗೂ ಮೀಸಲಾತಿಯನ್ನ ವಿರೋಧ ಮಾಡುತ್ತಿದ್ದಾರೆ ಎಂದು ಹೇಳಿಕೆ ನೀಡಿರುವುದು ಬಾಲಿಶತನವನ್ನು ತೋರಿಸುತ್ತಿದೆ. ಪ್ರಸ್ತುತವಾಗಿ ಯಾವುದೇ ಚುನಾವಣೆಗಳಿಲ್ಲ. ಹಾಗಾಗಿ ನಮಗೆ ರಾಜಕೀಯ ದುರುದ್ದೇಶವಿಲ್ಲ. ಸಮುದಾಯ ಏಳಿಗೆ ಮುಖ್ಯ ಎಂದು ತಿರುಗೇಟು ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಅಗತಗೌಡನಹಳ್ಳಿ ಬಸವರಾಜು, ಬಸವಣ್ಣ ಕಿಲಗರೆ, ವಕೀಲರಾದ ಸಂಪತ್ತು, ಮಾಧು ಕೋಟೆಕೆರೆ, ಹರಿಶ್ಚಂದ್ರ, ಪುಟ್ಟು ಚನ್ನವಡೆಯನಪುರ, ಬಸವಯ್ಯ, ಸಾಗರ್, ಗೌತಮ್, ಶಿವು ವೀರನಪುರ, ನಾಗುಸ್ವಾಮಿ ಕಣ್ಣೇಗಾಲ, ಶಿವು ಕುನಗಳ್ಳಿ, ಜಯರಾಮು, ಶಿವಯ್ಯ, ಮಂಜುನಾಥ್ ಇತರರು ಹಾಜರಿದ್ದರು.

ಅಂತರಾಳದಿಂದ.. EDITORIAL

# ನಿರುದ್ಯೋಗಿ ಯುವ ಭಾರತದ ಗಾಯಗಳಿಗೆ ಎಐ ಬರೆ?

ದಿಲ್ಲಿಯಲ್ಲಿ ನಡೆಯುತ್ತಿರುವ ಎಐ ಶೃಂಗಸಭೆಯ ಸಂಭ್ರಮ ಮುಗಿಲು ಮುಟ್ಟಿದೆ. ಹತ್ತು ಹಲವು ಕೊರತೆಗಳ ನಡುವೆಯೂ ದೇಶ ವಿದೇಶಗಳ ಉದ್ಯಮಿಗಳು, ರಾಜಕೀಯ ನಾಯಕರ ಜೊತೆಗೆ ಪ್ರಧಾನಿ ಮೋದಿಯವರು ಮದುವೆ ಮನೆಯ ಬೀಗತಿಯಂತೆ ಸಂಭ್ರಮಿಸುತ್ತಿದ್ದಾರೆ. ಎಐ ಕ್ರಾಂತಿಯಲ್ಲಿ ಭಾರತ ಕೇವಲ ಪಾಲುದಾರ ಮಾತ್ರವಲ್ಲ, ಅದು ನಾಯಕತ್ವವನ್ನು ವಹಿಸಿಕೊಂಡಿದೆ ಎಂದು ಪ್ರಧಾನಿ ಮೋದಿಯವರು ಘೋಷಿಸಿದ್ದಾರೆ. ಇತ್ತೀಚೆಗೆ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಪ್ರಧಾನಿ ಮೋದಿಯವರು ಭಾರತದ ನಗರ-ಗ್ರಾಮೀಣ ಅಂತರವನ್ನು ಎಐ ಕಡಿಮೆ ಮಾಡಲಿದೆ' ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು. ಎಐ ಅಸಮಾನತೆಗಳನ್ನು ಆಳಗೊಳಿಸುತ್ತದೆ ಎಂದು ಜಗತ್ತು ಆತಂಕ ಪಡುತ್ತಿರುವ ಸಮಯದಲ್ಲಿ ಭಾರತವು ಅಂತರಗಳನ್ನು ಅಳಿಸಲು ಅದನ್ನು ಬಳಸುತ್ತಿದೆ. ನಾವು ಇದನ್ನು ಪ್ರತೀ ಹಳ್ಳಿಗೆ, ಪ್ರತೀ ಜಿಲ್ಲೆಗೆ ಮತ್ತು ಪ್ರತಿಯೊಬ್ಬ ನಾಗರಿಕನಿಗೆ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಆರ್ಥಿಕ ಅವಕಾಶಗಳನ್ನು ತಲುಪಿಸುವ ಸಮರ್ಥ ಸಾಧನವನ್ನಾಗಿ ಮಾಡುತ್ತಿದ್ದೇವೆ ಎಂದು ಅವರು ಹೇಳಿಕೊಂಡಿದ್ದಾರೆ. ಅವರದೇ ಮಾತುಗಳ ಪ್ರಕಾರ, ಜಾಗತಿಕವಾಗಿ ಉದ್ಯೋಗಗಳ ಮೇಲೆ ಎಐ ಪರಿಣಾಮ ಬೀರುತ್ತದೆ. ಕೆಲವು ಕೆಲಸಗಳನ್ನು ಸುಲಲಿತಗೊಳಿಸುವುದರ ಜೊತೆಗೇ ಹಲವು ಉದ್ಯೋಗಗಳನ್ನು ಕಸಿದುಕೊಳ್ಳುತ್ತದೆ. ಈಗಾಗಲೇ ಕಸಿದುಕೊಳ್ಳುವ ಕೆಲಸ ಶುರುವಾಗಿದೆ. ಅಭಿವೃದ್ಧಿ ದೇಶಗಳಲ್ಲಿ ಶೇ. 40ರಷ್ಟು ಉದ್ಯೋಗಗಳು ನಾಶವಾಗಲಿದ್ದರೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಶೇ. 60 ಉದ್ಯೋಗಗಳು ನಾಶವಾಗಲಿವೆ ಉದ್ಯೋಗಗಳು ನಾಶವಾದಾಗ ಅದರ ಲಾಭವನ್ನು ಪಡೆದುಕೊಳ್ಳುವುದು ಉದ್ಯಮಿಗಳು, ಅಂದರೆ ಕಡಿಮೆ ಉದ್ಯೋಗಿಗಳಿಂದ ಹೆಚ್ಚು ಸಂಪಾದಿಸುವ ಅವಕಾಶ ಅವರಿಗೆ ಭಾರತ ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ತೀವ್ರವಾಗಿ ಅನುಭವಿಸುತ್ತಿದೆ. ವಿಪರ್ಯಾಸವೆಂದರೆ, ವಿದ್ಯಾವಂತ ಯುವ ಸಮೂಹದಲ್ಲೇ ನಿರುದ್ಯೋಗ ಏರುಗತಿಯಲ್ಲಿದೆ ಎನ್ನುವುದನ್ನು ಅಂಕಿಅಂಶಗಳು ಹೇಳುತ್ತವೆ. ನಿರುದ್ಯೋಗ ಪ್ರಮಾಣದಲ್ಲಿ ಯುವಜನತೆಯ ಪಾಲು ಶೇ. 83ರಷ್ಟಿದೆ ಎಂದು ಅಂತರ್ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಭಾರತದ ಮಾನವಾಭಿವೃದ್ಧಿ ಸಂಸ್ಥೆ ಬಿಡುಗಡೆ ಮಾಡಿದ 2024ರ ವರದಿ ವಿವರಿಸುತ್ತದೆ. 2000ದಿಂದ 2019ರ ಅವಧಿಯಲ್ಲಿ ಭಾರತದ ಯುವ ಸಮೂಹದಲ್ಲಿನ ಉದ್ಯೋಗ ಮತ್ತು ಅರೆ ಉದ್ಯೋಗ ಪ್ರಮಾಣ ಏರುಗತಿಯಲ್ಲೇ ಇತ್ತು. ಆದರೆ ಕೋವಿಡ್ ಅವಧಿಯಲ್ಲಿ ಅದು ಇಳಿಮುಖವಾಯಿತು. 2000ನೇ ಇಸವಿಯಲ್ಲಿ ದೇಶದಲ್ಲಿನ ಒಟ್ಟು ವಿದ್ಯಾವಂತ ಯುವ ಸಮೂಹ ಉದ್ಯೋಗಿಗಳ ಪೈಕಿ ಶೇ. 50ರಷ್ಟು ಜನರು ಸ್ವಯಂ ಉದ್ಯೋಗ ಮಾಡುತ್ತಿದ್ದರು. ಶೇ. 13ರಷ್ಟು ಜನರು ನಿಯಮಿತ ಉದ್ಯೋಗವನ್ನು ಹೊಂದಿದ್ದರು. ಶೇ. 37ರಷ್ಟು ಜನರು ತಾತ್ಕಾಲಿಕ ಉದ್ಯೋಗ ಹೊಂದಿದ್ದರು. 2022ರಲ್ಲಿ ಅದು ತೀವ್ರ ಇಳಿಕೆ ಕಂಡಿದೆ. ಭಾರತವು ಮುಂದಿನ ಒಂದು ದಶಕದಲ್ಲಿ 80 ಲಕ್ಷ ಜನರು ಉದ್ಯೋಗ ಪಡೆದುಕೊಳ್ಳಲಿದ್ದಾರೆ ಎಂದು ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಅಭಿಪ್ರಾಯ ಪಟ್ಟಿತ್ತು. ಆದರೆ ಎಐ ಕ್ರಾಂತಿಯು ಆ ಅಂದಾಜುಗಳನ್ನು ಬುಡಮೇಲು ಮಾಡಲಿದೆ.

ಎಐ ಗ್ರಾಮೀಣ ಮತ್ತು ನಗರದ ನಡುವಿನ ಅಸಮಾನತೆಯನ್ನು ಅಳಿಸುತ್ತದೆ ಎನ್ನುವುದು ಪ್ರಧಾನಿಯ ಬುರುಡೆ ಮಾತು. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳು ಮೂಲಭೂತ ಸೌಲಭ್ಯಗಳಿಂದಲೇ ವಂಚಿತವಾಗಿವೆ. ಆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರಕಾರ ವಿಶೇಷ ಆಸಕ್ತಿಯನ್ನೇ ಹೊಂದಿಲ್ಲ. ಹೀಗಿರುವಾಗ ಎಐ ಗ್ರಾಮೀಣ ಪ್ರದೇಶಗಳಿಗೆ ಹೇಗೆ ಪೂರಕವಾಗಿ ಕೆಲಸ ಮಾಡಬಹುದು? ಕೆಲಸ ಕಳೆದುಕೊಳ್ಳುವ ವಿದ್ಯಾವಂತ ಸಮುದಾಯಗಳಿಗೆ ನೀಡುವುದಕ್ಕೆ ಸರಕಾರದ ಬಳಿ ಏನಿದೆ? ಉದ್ಯೋಗಿಗಳ ಸಂಖ್ಯೆಗಳನ್ನು ಇಳಿಸಿ ಬೃಹತ್ ಕಾರ್ಪೊರೇಟ್ ಸಂಸ್ಥೆಗಳನ್ನು ಇನ್ನಷ್ಟು ಲಾಭದಾಯಕವನ್ನಾಗಿಸುವುದರಿಂದ ಗ್ರಾಮೀಣ ಪ್ರದೇಶಗಳಿಗೆ ಹೇಗೆ ಲಾಭವಾಗಲಿದೆ? ಈಗಾಗಲೇ ಗ್ರಾಮೀಣ ಪ್ರದೇಶದ ತಳಸ್ತರದ ಜನರ ಬದುಕಿಗೆ ಆಸರೆಯಾಗಿರುವ ಮನರೇಗಾ ಯೋಜನೆಯನ್ನು ಕೂಡ ಹಂತಹಂತವಾಗಿ ಇಲ್ಲವಾಗಿಸಲು ಸರಕಾರ ಹೊರಟಿದೆ. ಎಐ ತಂತ್ರಜ್ಞಾನ ವಿದ್ಯಾವಂತ ಯುವಕರು ಅದರಲ್ಲೂ ಐಟಿ ಕ್ಷೇತ್ರದಲ್ಲಿರುವ ಯುವಕರ ಕೆಲಸಗಳನ್ನೇ ಮೊದಲಿಗೆ ನುಂಗಿ ಹಾಕಲಿದೆ. ಆ ಬಳಿಕ ಹಂತಹಂತವಾಗಿ ಇತರ ಉದ್ಯೋಗಗಳನ್ನು ಆಪೋಷನ ತೆಗೆದುಕೊಳ್ಳಲಿದೆ. ಇವೆಲ್ಲವೂ ಅಂತಿಮವಾಗಿ ದೇಶದ ಆರ್ಥಿಕತೆಯ ಮೇಲೆ ಬೀರುವ ಪರಿಣಾಮಗಳನ್ನು ಸರಕಾರ ಶೃಂಗಸಭೆಯಲ್ಲಿ ಗಂಭೀರವಾಗಿ ಚರ್ಚಿಸಬೇಕಾಗಿತ್ತು.

ಆಧುನಿಕ ಸಂಶೋಧನೆಗಳನ್ನು, ಅದರ ಮೂಲಕ ನಡೆಯುವ ವಿಕಾಸವನ್ನು ತಡೆಯಲು ಸಾಧ್ಯವಿಲ್ಲ ನಿಜ. ಆದರೆ ಇಂದು ನಮ್ಮ ನೆಲ, ಜಲವನ್ನು ಒತ್ತೆಯಿಟ್ಟು ವಿದೇಶಿ ಕಂಪೆನಿಗಳನ್ನು ಭಾರತಕ್ಕೆ ಆಹ್ವಾನಿಸುವ ಸಂದರ್ಭದಲ್ಲಿ ಅದು ಒಟ್ಟು ದೇಶದ ಅಭಿವೃದ್ಧಿಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚರ್ಚೆ ನಡೆಸುವುದು ಅತ್ಯಗತ್ಯವಾಗಿದೆ. ಕೃತಕ ಬುದ್ಧಿ ಮತ್ತೆಯ ಮಾನವ್ ನೋಟವನ್ನು ಅನಾವರಣಗೊಳಿಸುವ ಸಂದರ್ಭದಲ್ಲಿ ನರೇಂದ್ರ ಮೋದಿ, ಮಾನವ್ ಅಂದರೆ ನೈತಿಕತೆ, ಉತ್ತರದಾಯಿತ್ವವುಳ್ಳ ಆಡಳಿತ, ಪಾರದರ್ಶಕ ನಿಯಮಗಳು ಮತ್ತು ಸದೃಢ ಮೇಲುಸ್ತುವಾರಿ, ರಾಷ್ಟ್ರೀಯ ಸಾರ್ವಭೌಮತೆ, ಎಲ್ಲರನ್ನೂ ಒಳಗೊಳ್ಳುವುದು ಎಂದು ವಿವರಿಸಿದ್ದಾರೆ. ನಮ್ಮ ನೆಲ ಜಲವನ್ನು ಬಲಿಕೊಟ್ಟು ಕಾರ್ಪೊರೇಟ್ ಸಂಸ್ಥೆಯನ್ನು ಬೆಳೆಸುವುದು ನೈತಿಕತೆಯೆ? ನಮ್ಮ ದತ್ತಾಂಶಗಳನ್ನು ಅಮೆರಿಕದಂತಹ ದೇಶಗಳಿಗೆ ಒತ್ತೆಯಿಡುವುದು ಸಾರ್ವಭೌಮತೆಯ ರಕ್ಷಣೆಯೆ? ಉತ್ತರದಾಯಿತ್ವವುಳ್ಳ ಆಡಳಿತ ರೀತಿಯೆ? ಲಕ್ಷಾಂತರ ವಿದ್ಯಾವಂತ ಯುವಕರು ಉದ್ಯೋಗಗಳನ್ನು ಕಳೆದುಕೊಳ್ಳುವುದು ಎಲ್ಲರನ್ನು ಒಳಗೊಳ್ಳುವ ಬಗೆಯೆ? ಭಾರತವು ವಿದೇಶಿ ಕಂಪೆನಿಗಳ ಜೊತೆಗೆ ನಡೆಸಿದ ಒಪ್ಪಂದಗಳು ನಿಜಕ್ಕೂ ಪಾರದರ್ಶಕವಾಗಿವೆ ಎಂದು ಪ್ರಧಾನಿ ಎದೆ ಮುಟ್ಟಿ ಹೇಳಿಕೊಳ್ಳಬಲ್ಲರೆ?

## ರಾಮಾಯಣ



### ಲಕ್ಷ್ಮಣನು ಸುಗ್ರೀವನ ಬಳಿಗೆ ಹೋದದ್ದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ದೇಹವುಳ್ಳವನಾಗಿ ಪರಾಕ್ರಮವೆಂಬ ವೇಷವುಳ್ಳವನಾಗಿ ಐದುಹೆಡೆಯ ಸರ್ಪದಂತಾದನು. ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸುತ್ತ ಕೋಪಕೆರಳಿದ ಮದ್ದಾನೆಯಂತಿದ್ದ ಲಕ್ಷ್ಮಣನನ್ನು ಅಂಗದಕುಮಾರನು ಬಂದು ಕಾಣಿಸಿಕೊಂಡನು. ಅವನು ಲಕ್ಷ್ಮಣನ ಕೋಪಾಟೋಪವನ್ನು ಕಂಡು ಭಯಪಟ್ಟು ಕಂಗೆಟ್ಟು ನಿಂತನು. ಆಗ ಲಕ್ಷ್ಮಣನು ಅಂಗದ ನಿನ್ನ ಚಿಕ್ಕಪ್ಪನಾದ ಸುಗ್ರೀವನೊಡನೆ ಶ್ರೀರಾಮನ ತಮ್ಮನಾದ ಲಕ್ಷ್ಮಣನು, ವಿರಹಶೋಕದಿಂದ ಕಂಗೆಟ್ಟಿರುವ ಶ್ರೀರಾಮನ ದುಃಖವನ್ನು ಕಂಡು ತಾಳಲಾರದೆ ಬಂದು ಹೊರಬಾಗಿಲಲ್ಲಿರುವನು. ಆತನ ಮಾತು ನಿನಗೆ ಪ್ರಿಯವಾದ ಪಕ್ಷದಲ್ಲಿ ಶೀಘ್ರವಾಗಿ ಹೊರಟು ಬಾ ಎಂದು ತಿಳಿಸು ಎಂಬುದಾಗಿ ಹೇಳಿದನು. ಅಂಗದನು ಅತ್ಯಂತ ಭಯಪಟ್ಟು ಅಂತಃಪುರದಲ್ಲಿದ್ದ ಸುಗ್ರೀವನ ಸಮೀಪಕ್ಕೆ ಹೋಗಿ ಲಕ್ಷ್ಮಣನು ಬಂದ ವೃತ್ತಾಂತವನ್ನು ಹೇಳಿದನು. ಅದನ್ನು ಕೇಳಿಯೂ ಸುಗ್ರೀವನು ನಿದ್ರಾಂಗನೆಯ ತೋಳ್ತಕ್ಕೆಯನ್ನು ಬಿಡದೆ ಕಾಮಮೋಹಿತನಾಗಿ ಮೈಮರೆತಿದ್ದನು. ಇತ್ತ ಲಕ್ಷ್ಮಣನ ಕೋಪಾಟೋಪವನ್ನು ಕಂಡು ಕಪಿಗಳು ಕಿಲಕಿಲ ಶಬ್ದಮಾಡುತ್ತ ಭಯಪಟ್ಟು ಲಕ್ಷ್ಮಣನನ್ನು ಸಂತವಿಡುತ್ತಿದ್ದವು. ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಬಲವುಳ್ಳ ಧನುರ್ಧಾರಿಯಾದ ಲಕ್ಷ್ಮಣನನ್ನು ಕಂಡು ಸಮಸ್ತ ಕಪಿಗಳೂ ಕೂಗಿಕೊಂಡವು. ಆ ಮಹತ್ತಾದ ಧ್ವನಿಯನ್ನು ಕೇಳಿ ಸುಗ್ರೀವನು ಎಚ್ಚತ್ತರೂ ಕಾಮೋನ್ಮಾದದಿಂದ ಕಣ್ಣು ಬಿಡಲಾರದವನಾಗಿದ್ದನು. ಅಂಗದನು ಲಕ್ಷ್ಮಣನು ಬಂದ ವೃತ್ತಾಂತವನ್ನು ಹೇಳಲು ಅದನ್ನು ಗ್ರಹಿಸುವುದಕ್ಕೆ ಶಕ್ತನಾಗಲಿಲ್ಲ. ಆಗ ಸುಗ್ರೀವನ ಪ್ರಾಣಸಖರಾದ ಪ್ಲಕ್ಷ ಪ್ರಭಾಸ ಎಂಬ ಇಬ್ಬರು ಪ್ರಧಾನರೂ ಸುಗ್ರೀವನನ್ನು ಕುರಿತು '' ಸುಗ್ರೀವ, ಲಕ್ಷ್ಮಣನು ಬಹು ನಿಷ್ಠುರವಚನಗಳನ್ನು ನುಡಿಯುತ್ತ ಕೋಪದಿಂದ ಬಂದಿದ್ದಾನೆ. ಅವನಿಂದ ಹಾನಿಬರುವುದಕ್ಕೆ ಮೊದಲೇ ಆತನನ್ನು ಸಂತವಿಟ್ಟು ಆತನ ಕೋಪವನ್ನು ತಗ್ಗಿಸು.

ಶ್ರೀರಾಮಲಕ್ಷ್ಮಣರಿಬ್ಬರೂ ಸತ್ಯಸಂಧರು ಮಹಾತ್ಮರು. ಆ ಪುಣ್ಯವಂತರು ನಿನಗೆ ಸ್ನೇಹಿತರಾಗಿ ಕೈಬಿಟ್ಟುಹೋಗಿದ್ದ ರಾಜ್ಯವನ್ನು ತಿರುಗಿಸಿಕೊಟ್ಟರು. ಶ್ರೀರಾಮನ ತಮ್ಮನಾದ ಲಕ್ಷ್ಮಣನು ಬಿಲುಬಾಣಗಳನ್ನು ಧರಿಸಿಕೊಂಡು ಹೊರಬಾಗಿಲಲ್ಲಿ ನಿಂತಿದ್ದಾನೆ. ಆತನನ್ನು ಕಂಡು ಕಪಿಗಳು ನಡುಗುತ್ತ ಮೊರೆಯಿಟ್ಟು ಕೂಗುತ್ತಿವೆ. ಲಕ್ಷ್ಮಣನು ನುಡಿಜಾಣ್ಮೆಯುಳ್ಳವನು. ಕಾರ್ಯಾರ್ಥಿಯಾದ ಶ್ರೀರಾಮನ ಅಪ್ಪಣೆಯಿಂದ ಬಂದು ತಾನು ಬಂದ ವೃತ್ತಾಂತವನ್ನು ನಿನ್ನ ಮಗನಾದ ಅಂಗದನೊಡನೆ ಹೇಳಿ ಕಳುಹಿಸಿರುವನು. ಸುಗ್ರೀವ, ಲಕ್ಷ್ಮಣನು ಅತ್ಯಂತ ಕೋಪದೃಷ್ಟಿಯಿಂದ ಕಪಿಗಳನ್ನು ನೋಡುತ್ತಲಿದ್ದಾನೆ. ನೀನು ನಿನ್ನ ಕೋಪವನ್ನು ತಳಹರಿಸಿಕೊಂಡು ನಿನ್ನ ಸ್ತ್ರೀಯರು ಮಕ್ಕಳು ಬಂಧುಬಳಗ ಸಮೇತನಾಗಿ ಆತನಿಗೆ ಕಾಣಿಸಿಕೊಂಡು ಸಾಷ್ಟಾಂಗವೆರಗಿ ಸಂತವಿಡು. ಶ್ರೀರಾಮನು ಹೇಳಿ ಕಳುಹಿಸಿದ ಮಾತನ್ನು ಕೇಳಿ ಸತ್ಯವನ್ನು ಬಿಡದೆ ಶ್ರೀರಾಮನ ಸಮಯವನ್ನು ಕಾದು ಆತನು ಹೇಳುವಂತೆ ಮಾಡುವುದೇ ಯುಕ್ತವಾದದ್ದು '' ಎಂದು ಹೇಳಿದರು.

### ಹನುಮಂತನು ಸುಗ್ರೀವನಿಗೆ ಹೇಳಿದ ನೀತಿ

ಆಮೇಲೆ ಸುಗ್ರೀವನಂ ಅಂಗದನ ಮೂಲಕ ಲಕ್ಷ್ಮಣನು ಮಹಾಕೋಪಯುಕ್ತನಾಗಿ ಬಂದಿದ್ದ ವೃತ್ತಾಂತವನ್ನು ಕೇಳಿ ಹೆದರಿ ತನ್ನ ಶಯ್ಯಾಗೃಹದಿಂದ ಹೊರಟನು. ಲಕ್ಷ್ಮಣನು ಬಂದ ಕಾರ್ಯದ ಗುರುಲಘುತ್ವಗಳನ್ನು ವಿಚಾರಿಸಲು ಮಂತ್ರಾಲೋಚನೆಯಲ್ಲಿ ನಿಪುಣರಾದ ಮಂತ್ರಿಗಳನ್ನು ಕರೆಯಿಸಿ ಅವರನ್ನು ಕುರಿತು ಎಲೈ ಮಂತ್ರಿಗಳಿರಾ, ನಾನು ಶ್ರೀರಾಮನನ್ನು ನಿಷ್ಠುರವಾಗಿ ನುಡಿದವನಲ್ಲ.

ಮುಂದುವರಿಯುವುದು...

**ಗಿಡಗಳು ಚೆನ್ನಾಗಿ ಬೆಳೆಯಬೇಕಾದ್ರೆ, ಅದಕ್ಕೆ ಗೊಬ್ಬರಗಳನ್ನು ಹಾಕಬೇಕು ಎನ್ನುವುದನ್ನು ನೀವು ಕೇಳಿರುವಿರಿ. ಆದರೆ ಬರೀ ಅಕ್ಕಿ ತೊಳೆದ ನೀರನ್ನು ಗಿಡಗಳಿಗೆ ಹಾಕುವುದು ಗೊಬ್ಬರದಷ್ಟೇ ಪ್ರಯೋಜನಕಾರಿಯಾಗಿದೆ ಅನ್ನೋದು ನಿಮಗೆ ಗೊತ್ತಾ?. ಇದನ್ನು ಯಾವರೀತಿ ಬಳಸಬಹುದು ಎನ್ನುವುದನ್ನು ತಿಳಿಯೋಣ.**

## ಗಿಡಗಳಿಗೆ ಅಕ್ಕಿ ತೊಳೆದ ನೀರು ಹಾಕೋದ್ರಿಂದ ಗಿಡ ತುಂಬಾ ಚೆನ್ನಾಗಿ ಬೆಳೆಯುತ್ತೆ!

ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ಗಿಡ ಮರಗಳನ್ನು ನೆಡುತ್ತಾರೆ. ಇದು ಮನೆಯ ಸೌಂದರ್ಯವನ್ನು ದ್ವಿಗುಣಗೊಳಿಸುವುದಲ್ಲದೆ ತಾಜಾ ಹಣ್ಣುಗಳು, ಹೂವುಗಳನ್ನು ನೀಡುತ್ತದೆ. ಕೆಲವೊಮ್ಮೆ ನೀವು ಎಷ್ಟೇ ಗಿಡಗಳ ಆರೈಕೆ ಮಾಡಿದರೂ ಅವು ಒಣಗಲಾರಂಭಿಸುತ್ತದೆ. ಮಾರುಕಟ್ಟೆಯಿಂದ ತಂದ ರಸಗೊಬ್ಬರವನ್ನು ಗಿಡಗಳಿಗೆ ಹಾಕುತ್ತಾರೆ. ಅದರ ಬದಲು ನೀವು ಮನೆಯಲ್ಲೇ ತಯಾರಿಸಲಾಗುವ ಕೆಲವೊಂದು ಪದಾರ್ಥಗಳಿಂದ ಸಸ್ಯಗಳನ್ನು ಬೆಳವಣಿಗೆಯನ್ನು ಉತ್ತಮ ಆಗಿಸಬಹುದು.



**ಸಸ್ಯಗಳಿಗೆ ಅಕ್ಕಿ ನೀರು:** ಅಕ್ಕಿ ನೀರು ಸಸ್ಯಗಳಿಗೆ ಜೀವರಕ್ಷಕವಾಗಿದೆ. ಇದನ್ನು ಬಳಸುವುದರಿಂದ ಸಸ್ಯಗಳ ಬೆಳವಣಿಗೆಯನ್ನು ವೇಗಗೊಳಿಸುತ್ತದೆ ಮತ್ತು ಮಣ್ಣಿನ ಫಲವತ್ತತೆ ಸುಧಾರಿಸುತ್ತದೆ. ನಿಮ್ಮ ಮನೆಯಲ್ಲಿರುವ ಗಿಡಗಳೂ ಸಹ ಸೊಂಪಾಗಿ ಬೆಳೆಯಬೇಕು, ಹೆಚ್ಚು ಹೂ ಬಿಡಬೇಕೆಂದು ನೀವು ಬಯಸಿದರೆ ಅಕ್ಕಿ ನೀರನ್ನು ಗಿಡಗಳಿಗೆ ಬಳಸುವುದು ಉತ್ತಮ. ಇದನ್ನು ಯಾವ ರೀತಿ ಬಳಸಬಹುದು ಎನ್ನುವುದನ್ನು ನಾವಿಲ್ಲಿ ತಿಳಿಯೋಣ.



**ಅಕ್ಕಿ ನೀರು ಸಸ್ಯಗಳಿಗೆ ಏಕೆ ಪ್ರಯೋಜನಕಾರಿ?:** ಅಕ್ಕಿ ತೊಳೆದ ನೀರಿನಲ್ಲಿ ಪಿಷ್ಟ, ಪೊಟ್ಯಾಸಿಯಮ್, ರಂಜಕ, ಸಾರಜನಕ, ಇತರ ಅನೇಕ ಪೋಷಕಾಂಶಗಳಿವೆ ಇವೆಲ್ಲವೂ ಸಸ್ಯಗಳನ್ನು ಪುನರುಜ್ಜೀವನಗೊಳಿಸುತ್ತವೆ.ಅವು ಮಣ್ಣು, ಸಸ್ಯದ ಬೇರುಗಳಿಗೆ ಪ್ರಯೋಜನವನ್ನು ನೀಡುತ್ತವೆ ಸಾರಜನಕವು ಎಲೆಗಳನ್ನು ಹಸಿರಾಗಿಡಲು ಸಹಾಯ ಮಾಡುತ್ತದೆ, ರಂಜಕವು ಬೇರುಗಳನ್ನು ಬಲಪಡಿಸುತ್ತದೆ, ಪೊಟ್ಯಾಸಿಯಮ್ ಹೂವಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

**ಯಾವೆಲ್ಲಾ ಸಸ್ಯಗಳಿಗೆ ಅಕ್ಕಿ ನೀರು ಹೆಚ್ಚು ಪರಿಣಾಮ ಬೀರುತ್ತವೆ?:** ಮನಿ ಪ್ಲಾಂಟ್‌ಗಳು, ಟೊಮ್ಯಾಟೊ, ಮೆಣಸಿನಕಾಯಿಗಳು, ತುಳಸಿ, ಪುದೀನ, ಗುಲಾಬಿಗಳು, ಅಲೋವೆರಾ ಮುಂತಾದ ಅನೇಕ ಸಸ್ಯಗಳಿಗೆ ಅಕ್ಕಿ ನೀರು ಪ್ರಯೋಜನಕಾರಿಯಾಗಿದೆ. ಈ ಸಸ್ಯಗಳ ಮೇಲೆ ಅಕ್ಕಿ ನೀರನ್ನು ಬಳಸುವುದರಿಂದ ಹಸಿರು ಎಲೆಗಳು ಹೊಸ ಚಿಗುರುಗಳ ತ್ವರಿತ ಬೆಳವಣಿಗೆಗೆ ಕಾರಣವಾಗುತ್ತದೆ.

**ಅದನ್ನು ಹೇಗೆ ಬಳಸುವುದು?:** ನೀವು ಅಕ್ಕಿ ತೊಳೆದ ಮೊದಲ ನೀರನ್ನು ಬಳಸಬೇಡಿ, ಎರಡನೇ ಬಾರಿಗೆ ಅಕ್ಕಿಯನ್ನು ತೊಳೆದಾಗ ಸಿಗುವ ನೀರನ್ನು ತೆಗೆದುಕೊಳ್ಳಿ. ನೀವು ದೊಡ್ಡ ಸಸ್ಯಕ್ಕಾದರೆ ಒಂದು ಮಗ್ ವರೆಗೆ ನೀರು ಹಾಕಬಹುದು. ನೀರನ್ನು ನೇರವಾಗಿ ಬೇರುಗಳ ಬಳಿ ಮಣ್ಣಿನಲ್ಲಿ ಸುರಿಯಿರಿ. ಎಲೆಗಳ ಮೇಲೆ ನೀರನ್ನು ಸಿಂಪಡಿಸಬೇಡಿ.

**ಹುದುಗಿಸಿದ ನಂತರ ಅದನ್ನು ಹೇಗೆ ಬಳಸುವುದು?:** ಕೆಲವು ಜನರು ಉತ್ತಮ ಫಲಿತಾಂಶಗಳಿಗಾಗಿ ಅಕ್ಕಿ ನೀರನ್ನು 2 ರಿಂದ 3 ದಿನಗಳವರೆಗೆ ಮುಚ್ಚಿ ನೆರಳಿನಲ್ಲಿ ಬಿಡುತ್ತಾರೆ. ಇದು ಸೌಮ್ಯವಾದ, ಯೀಸ್ಟ್ ತರಹದ ಪರಿಮಳವನ್ನು ಬೆಳೆಸಿಕೊಂಡಾಗ, ಅದು ಹೆಚ್ಚು ಪ್ರಯೋಜನಕಾರಿಯಾಗುತ್ತದೆ. ಬಳಸುವ ಮೊದಲು, ಅದನ್ನು ಸಮಾನ ಪ್ರಮಾಣದ ಸರಳ ನೀರಿನೊಂದಿಗೆ ಬೆರೆಸಿ ಹಾಕಿ. ಇನ್ನು ಮುಂದೆ ಅಕ್ಕಿ ತೊಳೆಯುವಾಗ ಅದರ ನೀರನ್ನು ಚೆಲ್ಲುವ ಬದಲು ಗಿಡಗಳಿಗೆ ಹಾಕಿ ಸಸ್ಯಗಳನ್ನು ಹಚ್ಚಹಸಿರಾಗಿರಿಸಿ.

## ದಿನಕ್ಕೊಂದು ಮುಕ್ತಕ -100



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

• ಉದಯವಾಹಿನಿ, ವಿಶೇಷ

ಗಜಲ್ ಗಳ ಬರೆಯುತಲಿ ಓದುವರ ಮನಗೆಲ್ಲೆ
ಗಜರಿಪುವ (ಸಿಂಹ) ರೀತಿಯಲಿ ಗರ್ಜಿಸುತಲಿಯೆ
ಗಜಮುಖನ ನೆನೆಯುತಲಿ ಶಾಂತಿಯಲಿ ನಡೆಯುತ್ತ
ಗಜಗಲಿಸು (ಪ್ರಕಾಶಿಸು) ಲೇಖನಿಯ ಲಕ್ಷ್ಮಿ ದೇವಿ...

ಗಜಲ್‌ಗಳನ್ನು ಬರೆಯುತ್ತಾ ಓದುಗರ ಮನಸೆಳೆಯುವುದು ಕಷ್ಟ ಅದು ಸಿಂಹನ ಘರ್ಜನೆ ಎಂತಿರುತ್ತದೆ. ಏಕೆಂದರೆ ಕವನ, ಚುಟುಕು, ಹನಿಗವನದಷ್ಟು ಸುಲಭವಾಗಿ ಗಜಲ್ ರಚಿಸಲು ಸಾಧ್ಯವಿಲ್ಲ. ಗಜಮುಖನನ್ನು ನೆನೆಯುತ್ತಾ ಶಾಂತಿಯನ್ನು ಬೇಡುತ್ತಾ ಬರಬಣಿಗೆಯಲ್ಲಿ ಪ್ರಜ್ವಲಿಸಬೇಕು ಲೇಖನಿಯೂ ಆಗ ಮಾತ್ರ ಲೇಖನಿಯಿಂದ ಬಂದಂತಹ ಬರಹಕ್ಕೆ ಗಟ್ಟಿತನ ಸಿಗುತ್ತದೆ. ನಾನು ತಿಳಿದಂತೆ ಗಜಲ್‌ನಲ್ಲಿ ಕೆಲವು ನಿಯಮಗಳಿವೆ. ಅದರಲ್ಲಿ ಕೆಲವು ಹೀಗಿದೆ. ಆದಿ ಪ್ರಾಸ,ಸಮಾನ ಕಾಫಿಯ, ಸಮಾನ ಪದಗಳು ಪ್ರತಿ ಸಾಲಿನಲ್ಲೂ ಕೊನೆ ಪದ ರದೀಫ್,ಎರಡನೇ ಶೇರ್ ಮೊದಲ ಸಾಲು ಪ್ರಶ್ನಾರ್ಥಕ ಸರ್ವೇ ಸಾಮಾನ್ಯವಾಗಿ ಐದು ಪದಗಳು ಅರ್ಥಪೂರ್ಣ ಬಳಕೆ ಕೊನೆ ಶೇರ್ ಕಾವ್ಯನಾಮ ಇಷ್ಟು ಗಜಲ್ ನಲ್ಲಿ ಇರುವುದು ಅವಶ್ಯಕತೆ ಇದೆ. ನಿಯಮಗಳ ಪಾಲನೆ ಇಲ್ಲದಿದ್ದರೆ ಗಜಲ್‌ಗಳು ರಚಿಸಿದ ಅದರ ಅರ್ಥ ಕಳೆದುಕೊಳ್ಳುತ್ತದೆ.



## ಅರಿಶಿನ ಕಾಮಾಲೆ, ಯಕೃತ್ತು ದೋಷಕ್ಕೆ ಮನೆಮದ್ದು

- ಅರಿಶಿನದ ಕೊಂಬನ್ನು ಮಜ್ಜಿಗೆಯಲ್ಲಿ ತೇಯ್ದು ಕುಡಿಯುತ್ತಾ ಬಂದರೆ ಅರಿಶಿನ ಕಾಮಾಲೆ, ಮೂಲವ್ಯಾಧಿ ಹಾಗೂ ಆಮಶಂಕೆಗೆ ಉತ್ತಮ ಪರಿಹಾರ.
- ಮಾಗಿದ ಬಾಳೆಹಣ್ಣು, ಜೇನುತುಪ್ಪ, ನಿಂಬೆರಸ ಇವನ್ನು ಚೆನ್ನಾಗಿ ಮಸೆದು ಸೇವಿಸಿದರೆ ಅರಿಶಿನ ಕಾಮಾಲೆಗೆ ಒಳ್ಳೆಯದು. (ಕೆಲವು ದಿನಗಳ ಕಾಲ)
- ಅರಿಶಿನ ಕಾಮಾಲೆಗೆ ಶುಂಠಿಯನ್ನು ಯಥೇಚ್ಛವಾಗಿ ಬಳಸುವುದರಿಂದ ಲಾಭವಿದೆ. ಶುಂಠಿ ಜಜ್ಜಿ ರಸ ತೆಗೆದು ಮಜ್ಜಿಗೆಯಲ್ಲಿ ಬೆರೆಸಿ ಕುಡಿಯುವುದರಿಂದ ಅರಿಶಿನ ಕಾಮಾಲೆ ರೋಗಗುಣಮುಖವಾಗುತ್ತದೆ.
- ಶುಂಠಿ, ಪುದಿನಾ ಚೆನ್ನಾಗಿ ಕುದಿಸಿ ಕಷಾಯ ಮಾಡಿ ಕುಡಿಯುವುದರಿಂದ ಅರಿಶಿನ ಕಾಮಾಲೆಗೆ ಉತ್ತಮ ಪರಿಹಾರ.
- ಯಕೃತ್ತು ದೋಷಕ್ಕೆ ಅರಳೀಕಾಯಿ ಕಷಾಯ ಮಾಡಿ ಆ ಕಷಾಯಕ್ಕೆ ಹಿಪ್ಪಲಿ ಚೂರ್ಣ ಬೆರೆಸಿ ಕುಡಿದರೆ ಯಕೃತ್ತು ಚೆನ್ನಾಗಿ ಕೆಲಸ ಮಾಡುತ್ತದೆ.
- ಶುದ್ಧ ಅರಿಶಿನಪುಡಿ, ತ್ರಿಫಲ ಚೂರ್ಣ ಎರಡನ್ನೂ ಸಮಪ್ರಮಾಣದಲ್ಲಿ ಬೆರೆಸಿ ತುಪ್ಪ ಅರ್ಧ ಚಮಚ, ಜೇನುತುಪ್ಪ 1 ಚಮಚ ಹಾಕಿ ಚೆನ್ನಾಗಿ ಕಲಸಿ ತಿನ್ನಬೇಕು.
- ಸೇಬುಹಣ್ಣನ್ನು ಸಿಪ್ಪೆ ಸಹಿತವಾಗಿ ಪ್ರತಿನಿತ್ಯ ಸೇವಿಸುತ್ತಿದ್ದರೆ ಯಕೃತ್ತು ಚೆನ್ನಾಗಿ ಕೆಲಸ ಮಾಡುತ್ತದೆ.
- ಅನಾನಸ್ ಹಣ್ಣು ಯಕೃತ್ತಿನ ವಿಕಾರಗಳನ್ನು ಚೆನ್ನಾಗಿ ಸರಿಪಡಿಸುತ್ತದೆ.
- ಹಾಗಲಕಾಯಿ ರಸ ಅಥವಾ ಹಾಗಲಕಾಯಿ ಎಲೆಯ ರಸಕ್ಕೆ ಜೇನುತುಪ್ಪ ಸೇರಿಸಿ ಸೇವಿಸುತ್ತಾ ಬಂದರೆ, ಲಿವರ್ ಚೆನ್ನಾಗಿ ಕೆಲಸ ಮಾಡುತ್ತದೆ.
- ಪರಂಗಿಕಾಯಿಯ ಪಲ್ಯವನ್ನು ಮೇಲಿಂದ ಮೇಲೆ ಸೇವಿಸುವುದರಿಂದ ಲಿವರ್‌ಗೆ ಸಂಬಂಧಪಟ್ಟ ಸಮಸ್ಯೆಗಳು ಕಡಿಮೆ ಆಗುತ್ತವೆ.
- ಕಹಿ ಸೋರೆಯ ಚಿಗುರನ್ನು ನೀರಿಗೆ ಹಾಕಿ ಕಷಾಯ ಮಾಡಿ ಸಕ್ಕರೆ ಹಾಕಿ 12 ದಿನ ಕುಡಿದರೆ ಕಾಮಾಲೆ ರೋಗವು ಕಡಿಮೆ ಆಗುತ್ತದೆ.
- ನೆಲನೆಲ್ಲಿ ಸೊಪ್ಪನ್ನು ನುಣ್ಣಗೆ ಅರೆದು ಅದನ್ನು ಎಮ್ಮೆಯ ಮಜ್ಜಿಗೆಯಲ್ಲಿ ಕದಡಿ ಕುಡಿದರೆ ಕಾಮಾಲೆ ರೋಗವು ಹತೋಟಿಗೆ ಬರುತ್ತದೆ.
- ಅಮೃತಬಳ್ಳಿಯ ಕಷಾಯ ಮಾಡಿ ಕಲ್ಲುಸಕ್ಕರೆ ಹಾಕಿ ಏಳು ದಿನ ಬರೀಹೊಟ್ಟೆಯಲ್ಲಿ ಕುಡಿಯಬೇಕು.
- ಎಕ್ಕದ ಗಿಡದ ಬೇರನ್ನು ನೀರಿನಲ್ಲಿ ತೇಯ್ದು ಮೂಗಿನ 2 ಹೊಳ್ಳೆಗಳಿಗೆ ಎರಡು ಎರಡು ಹನಿ ಹಾಕಬೇಕು.
- ಸಿಹಿಮೂಲಂಗಿ ರಸಕ್ಕೆ ಸ್ವಲ್ಪ ನಿಂಬೆರಸ ಹಾಗೂ ಜೇನುತುಪ್ಪ ಸೇರಿಸಿ (ಸತತವಾಗಿ 7 ದಿನಗಳ ಕಾಲ) ಸೇವಿಸುವುದರಿಂದ ಕಾಮಾಲೆ ರೋಗವು ಗುಣವಾಗುತ್ತದೆ.



## ಸಾಂಬಾರ್ ಪುಡಿ ಮಾಡುವ ವಿಧಾನ

**ಬೇಕಾಗುವ ಸಾಮಗ್ರಿಗಳು:** ಕಡಲೇಬೇಳೆ 2 ಚಮಚ, ಕೊತ್ತಂಬರಿ ಬೀಜ 50 ಗ್ರಾಂ, ಬ್ಯಾಡಗಿ ಮೆಣಸಿನಕಾಯಿ 75 ಗ್ರಾಂ, ಮೆಂತ್ಯ 1 ಚಮಚ, ಜೀರಿಗೆ 2 ಚಮಚ, ಗಸಗಸೆ 2 ಚಮಚ, ಕೊಬ್ಬರಿ ತುರಿ -2 ಚಮಚ, ಎಣ್ಣೆ 3 ಚಮಚ

**ಮಾಡುವ ವಿಧಾನ:** ಪ್ಯಾನ್‌ಗೆ ಎಣ್ಣೆ ಹಾಕಿ ಕಾಯಿಸಿ. ಕಡಲೇಬೇಳೆ, ಮೆಂತ್ಯ, ಜೀರಿಗೆ, ಕೊತ್ತಂಬರಿ ಬೀಜ ಹಾಕಿ ಚೆನ್ನಾಗಿ ಹುರಿಯಿರಿ. ಇದಕ್ಕೆ ಗಸಗಸೆ, ಕೊಬ್ಬರಿ ತುರಿ ಹಾಕಿ ಇನ್ನಷ್ಟು ಹುರಿದುಕೊಳ್ಳಿ. ತಣ್ಣಗಾದ ನಂತರ ನುಣ್ಣಗೆ ರುಬ್ಬಿಕೊಂಡರೆ ಸಾಂಬಾರ್ ಪುಡಿ ರೆಡಿ.




## ಮೊಟ್ಟೆಯ ಹಳದಿ ಭಾಗದಿಂದ ಕೊಲೆಸ್ಟ್ರಾಲ್ ಏರುತ್ತದೆ ಎನ್ನುವುದು ನಿಜವೇ?

ಮೊಟ್ಟೆಗಳು ಬಹಳ ಪೌಷ್ಟಿಕ ಆಹಾರ. ಉತ್ತಮ ಗುಣಮಟ್ಟದ ಪ್ರೊಟೀನ್, ಆರೋಗ್ಯಕರ ಕೊಬ್ಬುಗಳು, ಅಗತ್ಯ ವಿಟಮಿನ್‌ಗಳು ಮತ್ತು ಖನಿಜಗಳ ಅತ್ಯುತ್ತಮ ಮೂಲವಾಗಿದೆ. ಆದರೆ ಬಹಳಷ್ಟು ಮಂದಿ ಇಡೀ ಮೊಟ್ಟೆಯನ್ನು ಸೇವಿಸದೆ, ಬಿಳಿ ಭಾಗವನ್ನು ಮಾತ್ರ ಸೇವಿಸುತ್ತಾರೆ. ಕೊಲೆಸ್ಟ್ರಾಲ್‌ಸಮೃದ್ಧ ಆಗಿರುವ ಹಳದಿ ಲೋಳೆ ತಮ್ಮ ಕೊಲೆಸ್ಟ್ರಾಲ್ ಮಟ್ಟಗಳನ್ನು ಏರಿಸಬಹುದು ಮತ್ತು ಅದರಿಂದ ಹೃದಯದ ಸಮಸ್ಯೆಗಳಿಗೆ ಕಾರಣವಾಗಬಹುದು ಎನ್ನುವ ಭಾವನೆ ಹಲವರಲ್ಲಿದೆ.

ಆದರೆ ಈ ದೃಷ್ಟಿಕೋನವು ಆಹಾರದ ಕೊಲೆಸ್ಟ್ರಾಲ್ ಬಗ್ಗೆ ಹಳೇ ಮಾಹಿತಿ, ತಪ್ಪು ಗ್ರಹಿಕೆಯನ್ನು ಆಧರಿಸಿದೆ. ಇತ್ತೀಚೆಗೆ ಖ್ಯಾತ ಹೃದಯರೋಗ ತಜ್ಞರಾದ ಡಾ ಅಲೋಕ್ ಚೋಪ್ರಾ ಮೊಟ್ಟೆಯ ಕುರಿತ ಈ ಮೂಢ ನಂಬಿಕೆಯ ಬಗ್ಗೆ ಇನ್‌ಸ್ಟಾಗ್ರಾಂ ಪುಟದಲ್ಲಿ ಜನರನ್ನು ಎಚ್ಚರಿಸಿದ್ದಾರೆ. ಮೊಟ್ಟೆ ಪೌಷ್ಠಿಕ ಆಹಾರ ಇಡೀ ಮೊಟ್ಟೆಯನ್ನು ಸೇವಿಸಿ. ಮೊಟ್ಟೆ ಬಹಳ ಪೌಷ್ಠಿಕ ಆಹಾರ. ನೀವು ಸೇವಿಸಬಹುದಾದ ಬಹುಮುಖಿ ಆಹಾರದಲ್ಲಿ ಸೇರಿದೆ. ಹಾಗಿದ್ದರೂ ಮೊಟ್ಟೆಯ ಬಗ್ಗೆ ಅನಗತ್ಯ ಮೌಢ್ಯ ಜನರಲ್ಲಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಮೊಟ್ಟೆಯ ಹಳದಿ ಲೋಳೆಯಲ್ಲಿ ಕೊಲೆಸ್ಟ್ರಾಲ್ ಇದೆ ಎಂದು ಹೇಳಲಾಗುತ್ತಿದೆ.

ವಾಸ್ತವದಲ್ಲಿ ಮೊಟ್ಟೆಯ ಬಹಳಷ್ಟು ಪೋಷಕಾಂಶಗಳು ಹಳದಿ ಭಾಗದಲ್ಲೇ ಇರುತ್ತದೆ. ಬಿಳಿಭಾಗವನ್ನು ಹೋಲಿಸಿದರೆ ಹಳದಿ ಭಾಗದಲ್ಲಿ ವಿಟಮಿನ್ ಎ, ವಿಟಮಿನ್ ಇ ಮತ್ತು ಒಮೆಗಾ-3 ಫ್ಯಾಟಿ ಆಸಿಡ್‌ಗಳು ಇರುತ್ತವೆ ಎಂದು ಅಲೋಕ್ ಚೋಪ್ರಾ ಹೇಳಿದ್ದಾರೆ. ಆಧುನಿಕ ಸಂಶೋಧನೆಗಳು ಹೇಳಿರುವ ಪ್ರಕಾರ ಮೊಟ್ಟೆಯ ಆಹಾರದಲ್ಲಿರುವ ಕೊಲೆಸ್ಟ್ರಾಲ್‌ನಿಂದ ರಕ್ತದ ಕೊಲೆಸ್ಟ್ರಾಲ್ ಮಟ್ಟದ ಮೇಲೆ ಅತಿ ಕಡಿಮೆ ಪರಿಣಾಮ ಬೀರುತ್ತದೆ. ಕೊಲೆಸ್ಟರಾಲ್ ಮಟ್ಟ ಏರಿದರೂ, ಅದು ಉತ್ತಮ ಕೊಲೆಸ್ಟ್ರಾಲ್ ಆಗಿರುತ್ತದೆ. ಅವು ಕೆಟ್ಟ ಕೊಲೆಸ್ಟ್ರಾಲ್‌ನ ನಕಾರಾತ್ಮಕ ಅಂಶದ ಮೇಲೂ ಪರಿಣಾಮ ಬೀರಿ ಆರೋಗ್ಯವನ್ನು ರಕ್ಷಿಸುತ್ತದೆ. ಇತ್ತೀಚೆಗಿನ ಸಂಶೋಧನೆ ತೋರಿಸಿರುವ ಪ್ರಕಾರ, ಬಹಳಷ್ಟು ಮಂದಿ ಅತಿ ಕಡಿಮೆ ಪ್ರಮಾಣದಲ್ಲಿ ಸೇವಿಸುವ ಮೊಟ್ಟೆಯ



ಹಳದಿ ಭಾಗದಿಂದ ರಕ್ತದ ಕೊಲೆಸ್ಟ್ರಾಲ್ ಮಟ್ಟಗಳ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ. ದೇಹವು ಕೊಲೆಸ್ಟ್ರಾಲ್ ಉತ್ಪಾದನೆಯನ್ನು ನಿಯಂತ್ರಿಸುತ್ತದೆ ಮತ್ತು ಆಹಾರದ ಕೊಲೆಸ್ಟ್ರಾಲ್ ಸೇವಿಸಿದಾಗ ದೇಹದಲ್ಲಿ ಉತ್ಪತ್ತಿಯಾಗಿರುವ ಕೊಲೆಸ್ಟ್ರಾಲ್ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಮೊಟ್ಟೆಯ ಹಳದಿ ಭಾಗದಲ್ಲಿರುವ ಕೊಲೆಸ್ಟ್ರಾಲ್ ಆರೋಗ್ಯಕ್ಕೆ ಮಾರಕವಲ್ಲ.

**ಕೊಲೆಸ್ಟ್ರಾಲ್ ಆರೋಗ್ಯಕ್ಕೆ ಮಾರಕವಲ್ಲ:** ಕೊಲೆಸ್ಟ್ರಾಲ್‌ಅನ್ನೇ ಬಹಳ ತಪ್ಪು ಅಂದಾಜಿಸಲಾಗಿದೆ. ಕೊಲೆಸ್ಟ್ರಾಲ್ ಸ್ವತ ಜೀವಕೋಶದ ರಚನೆಗೆ, ಹಾರ್ಮೋನ್ ಉತ್ಪಾದನೆಗೆ, ಮೆದುಳಿನ ಕಾರ್ಯಕ್ಕೆ ಆರೋಗ್ಯಕರ ರೋಗನಿರೋಧಕ ವ್ಯವಸ್ಥೆಗೆ ಅವಶ್ಯಕ. ನೀವು ಏನು ಸೇವಿಸುತ್ತೀರಿ ಎನ್ನುವ ಹೊರತಾಗಿ, ದೇಹದಲ್ಲಿರುವ ಶೇ 85ರಷ್ಟು ಕೊಲೆಸ್ಟರಾಲ್ ಅನ್ನು ನಿಮ್ಮದೇ ಲಿವರ್ ಉತ್ಪಾದಿಸುತ್ತದೆ. ದೇಹ ಸ್ವತಃ ಕೊಲೆಸ್ಟ್ರಾಲ್‌ಗಳನ್ನು ಉತ್ಪಾದಿಸುವಾಗ ಅದು ದೇಹಕ್ಕೆ ಹೇಗೆ ಅಪಾಯಕಾರಿಯಾಗಿರುತ್ತದೆ? ಎಂದು ಅವರು ಪ್ರಶ್ನಿಸಿದ್ದಾರೆ.

### ಯಾರು ತಿನ್ನಬಾರದು?

**ಈಗಾಗಲೇ ಹೃದಯ ರೋಗ ಇರುವವರು, ಮಧುಮೇಹಿ ರೋಗಿಗಳು, ಕೊಲೆಸ್ಟ್ರಾಲ್ ಆಹಾರ ಸೇವಿದ ತಕ್ಷಣ ರಕ್ತದ ಕೊಲೆಸ್ಟ್ರಾಲ್ ಮಟ್ಟ ಏರುವ ಮಂದಿ, ಜಠರದ ಸಮಸ್ಯೆ ಇದ್ದವರು ಹಳದಿ ಭಾಗವನ್ನು ತಿನ್ನಬಾರದು. ಮುಖ್ಯವಾಗಿ ಸಾಧಾರಣ ಪ್ರಮಾಣದಲ್ಲಿ ಸೇವಿಸಿದಲ್ಲಿ ಮೊಟ್ಟೆ ಆರೋಗ್ಯಕರ ಆಹಾರ. ಬಹುತೇಕ ಮಂದಿಗೆ ಮೊಟ್ಟೆಯಲ್ಲಿರುವ ಕೊಲೆಸ್ಟ್ರಾಲ್ ಅಂಶ ಹಾನಿಕರವಲ್ಲ.**

## FriendFlation ಕಾರಣದಿಂದ ಜನರು ಒಂಟಿಯಾಗುತ್ತಿದ್ದಾರೆಯೆ?

ಇತ್ತೀಚೆಗೆ FriendFlation ಎನ್ನುವ ಶಬ್ದ ಬಹಳ ಚರ್ಚೆಯಲ್ಲಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಮಾಧ್ಯಮಗಳಲ್ಲಿ ಜನರು FriendFlation ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. 'ರೆಡಿಟ್' ಸಾಮಾಜಿಕ ಜಾಲತಾಣದಲ್ಲಿ ಜನರು ಪರಸ್ಪರ ಭೇಟಿಯಾಗಲು ಸಾಧ್ಯವಿರದೆ ಇರುವ ಬಗ್ಗೆ ಚರ್ಚಿಸುತ್ತಿದ್ದಾರೆ. ಆಧುನಿಕ ಜಗತ್ತಿನಲ್ಲಿ ಸ್ನೇಹವನ್ನು ಉಳಿಸಿಕೊಳ್ಳುವುದು ಜೇಬಿಗೆ ಭಾರವಾಗುತ್ತಿದೆಯೆ?

**ಏನಿದು FriendFlation?:** ವಾಸ್ತವದಲ್ಲಿ ಹಣದುಬ್ಬರವು ಸ್ನೇಹಕ್ಕೆ ಅಡ್ಡಿಯಾಗುವುದನ್ನು FriendFlation ಎಂದು ಕರೆಯಲಾಗುತ್ತಿದೆ. ಕೆಲವು ಲೇಖನಗಳು ಮತ್ತು ಸಾಮಾಜಿಕ ಜಾಲತಾಣದ ಪೋಸ್ಟ್‌ಗಳು ಹೇಳಿರುವ ಪ್ರಕಾರ ಹಣದುಬ್ಬರದಿಂದಾಗಿ ಯುವ ಭಾರತೀಯರ ನಿತ್ಯ ಜೀವನದಲ್ಲಿ ಏಕಾಂಗಿತ ಹೆಚ್ಚಾಗುತ್ತಿದೆ ಮತ್ತು ಅದಕ್ಕೆ ಕಾರಣ ಹಣದುಬ್ಬರ. ಬಹಳಷ್ಟು ಯುವ ಭಾರತೀಯರು ತಮ್ಮ ಸ್ನೇಹಿತರನ್ನು ಭೇಟಿಯಾಗಲು ಹಿಂಜರಿಯುತ್ತಾರೆ. ಮುಖ್ಯ ಕಾರಣ ಹಣದುಬ್ಬರ. ಜೊತೆಗೂಡಿ ಸಾಗುವ ಯೋಜನೆ ಪಾಕೆಟ್ ಫ್ರೆಂಡ್ಲಿಯಾಗಿ ಇರದೆ ಇರುವುದು. ದುಬಾರಿ ಪಾರ್ಟಿಗಳಿಗೆ ಸ್ನೇಹಿತರು ಕರೆದಾಗ ಹೋಗದೆ ಏಕಾಂಗಿಯಾಗಿ ಕಳೆಯುವುದನ್ನು FriendFlation ಎಂದು ಕರೆಯಲಾಗುತ್ತಿದೆ.

**ಸ್ನೇಹಕ್ಕೆ ಹಣದುಬ್ಬರ ಅಡ್ಡಿಯಾಗದು:** ಆದರೆ ಬಹುತೇಕ ಭಾರತೀಯ ಮಧ್ಯಮ ವರ್ಗದವರ ಪ್ರಕಾರ ಇಂತಹ FriendFlation ಅನ್ನೋ ಪದ ತಮಗೆ ಹೊಂದಿಕೊಳ್ಳುವುದಿಲ್ಲ. ಬೆಂಗಳೂರಿನ ಜ್ಯೋತಿ ಎಂಬವರು ಹೇಳುವ ಪ್ರಕಾರ, ಉನ್ನತ ವರ್ಗ ಮತ್ತು ಮಧ್ಯಮ ವರ್ಗದವರ ನಡುವೆ ಸ್ನೇಹವಿದ್ದರೆ ಇಂತಹ ಸಮಸ್ಯೆಗಳು ಬರಬಹುದು. ಸಮಾನ ಮನಸ್ಕರ ನಡುವೆ ಇಂತಹ ಸಮಸ್ಯೆ ಬರುವುದಿಲ್ಲ. ನಾನು ಬಜೆಟ್ ಫ್ರೆಂಡ್ಲಿ ಔಟಿಂಗ್ ಬಯಸುತ್ತೇನೆ. ದುಬಾರಿ ಪಾರ್ಟಿಗಳಿಗೆ ಹೋಗಲು ಕರೆದರೆ ಖಂಡಿತಾ ಇಲ್ಲ ಎನ್ನುತ್ತೇನೆ, ಏಕೆಂದರೆ ನಾನು ಮದ್ಯಪಾನ ಮಾಡುವುದಿಲ್ಲ, ಡ್ಯಾನ್ಸ್ ಮಾಡುವುದಿಲ್ಲ. ಹೀಗಾಗಿ ದುಬಾರಿ ಪಾರ್ಟಿಗಳಿಗೆ ಹೋಗುವ ಅಗತ್ಯವಿಲ್ಲ.

ಜ್ಯೋತಿ ಹೇಳುವ ಪ್ರಕಾರ ಇದೊಂದು ವಿಪರೀತ ಕಲ್ಪನೆ. FriendFlation ಅನ್ನೋ ಪದ ಸೂಕ್ತವಲ್ಲ. ಬೆಂಗಳೂರಿನಂತಹ ನಿಬಿಡ ಜೀವನದಲ್ಲಿ ಎಲ್ಲರೂ ಯಾವಾಗಲೂ ಜೊತೆಗಿರಲು ಸಾಧ್ಯವಿಲ್ಲ. ತಮ್ಮ ಕೆಲಸಗಳನ್ನು ಏಕಾಂಗಿಯಾಗಿ ಮಾಡಿಕೊಳ್ಳಲು ಅಭ್ಯಾಸ ಮಾಡಿಕೊಳ್ಳಬೇಕಾಗುತ್ತದೆ. ಬಹುತೇಕರು ಹೇಳುವ ಪ್ರಕಾರ ಹೈಫೈ ಜನರ ನಡುವೆ ಮಧ್ಯಮ ವರ್ಗದವರು ಸೇರಿಕೊಂಡರೆ ಇಂತಹ ಸಮಸ್ಯೆ ಸೃಷ್ಟಿಯಾಗುತ್ತದೆ. ಆದರೆ ಹಣದುಬ್ಬರ ಸ್ನೇಹಕ್ಕೆ ಅಡ್ಡಿಯಾಗಿಲ್ಲ.



ಸ್ನೇಹಿತರು ಪರಸ್ಪರ ಭೇಟಿಯಾಗಬೇಕೆಂದರೆ ಸಮಯ ಅಗತ್ಯವೇ ವಿನಾ ಹಣ ಮುಖ್ಯವಾಗುವುದಿಲ್ಲ.

**ಸಮಾನ ಮನಸ್ಕರ ನಡುವೆ ಹಣದುಬ್ಬರ ಸಮಸ್ಯೆಯಲ್ಲ:** ಬೆಂಗಳೂರಿನ ಗೃಹಿಣಿ ಸ್ನೇಹ ಅವರಿಗೆ ಹಣದುಬ್ಬರ ಸ್ನೇಹಕ್ಕೆ ಅಡ್ಡಿಯಾಗಿಲ್ಲ. ಸ್ನೇಹ ಯಾವಾಗಲೂ ಸಮಕಾಲೀನರ ನಡುವೆಯೇ ಆಗುತ್ತದೆ. ಬಜೆಟ್ ಫ್ರೆಂಡ್ಲಿಯಾಗಿ ಸ್ನೇಹಿತರನ್ನು ಭೇಟಿಯಾಗಲು ಹಲವು ದಾರಿಗಳಿರುತ್ತವೆ. ನಾನು ಕಂಡಂತೆ ಯುವಜನತೆ ತಮ್ಮ ಇಷ್ಟದ ರೀತಿಯಲ್ಲಿ ಬದುಕುತ್ತಿದ್ದಾರೆ. ಮಧ್ಯಮ ವರ್ಗದವವರೂ ವಿದೇಶ ಪ್ರವಾಸ ಮಾಡುತ್ತಿದ್ದಾರೆ. ನನ್ನ ಅಣ್ಣನ ಮಕ್ಕಳು ಇತ್ತೀಚೆಗೆ ದುಬೈ ಹೋಗಿ ಬಂದರು. ಕಳೆದ ವಾರ ಮತ್ತೆ ಹಂಪಿಗೆ ಹೋಗಿದ್ದಾರೆ. ಸ್ನೇಹಿತರ ಜೊತೆಗೆ ಹೋಗುವಾಗ ಪಂಚತಾರಾ ಹೊಟೇಲ್ಲಗಳೇ ಬೇಕಿರುವುದಿಲ್ಲ. ಲಕ್ಷುರಿ ಹೊಟೇಲ್ ಬೇಕೆಂದು ಇರುವುದಿಲ್ಲ. ಜಾಣ್ಮೆಯಿಂದ ತಮ್ಮ ಪ್ರವಾಸವನ್ನು ಆಯೋಜಿಸುತ್ತಾರೆ.

ಕೆಲವೊಮ್ಮೆ ಹಣಕಾಸಿನ ಸಮಸ್ಯೆಯಿಂದ ಪ್ರವಾಸಕ್ಕೆ ಬರಲು ಸಾಧ್ಯವಾಗದವರಿಗೆ ಇತರರು ನೆರವು ನೀಡಿ ಕರೆದೊಯ್ಯುವುದಿದೆ. ದುಬಾರಿ ಎನ್ನುವ ಕಾರಣದಿಂದ ಯಾರೂ ಊಟ-ಉಡುಗೆ ಬಿಟ್ಟಿಲ್ಲ, ಹಾಗೆಯೇ ಸುತ್ತಾಡಲು ಇಷ್ಟವಿರುವವರು ಏಕಾಂಗಿಯಾಗಿ ಇರುವುದಿಲ್ಲ. ಅವರು ತಿರುಗಾಡುತ್ತಲೇ ಇದ್ದಾರೆ. ಇಷ್ಟವಿಲ್ಲದವರು ವಿವಿಧ ಕಾರಣದಿಂದ ಏಕಾಂಗಿಯಾಗಿ ಇರಬಹುದು. ಸ್ನೇಹ ಅವರ ಪ್ರಕಾರ, ಇತ್ತೀಚೆಗಿನ ದಿನಗಳಲ್ಲಿ ಯುವಜನತೆ ಷೇರುಗಳಲ್ಲಿ ಹೆಚ್ಚು ಹೂಡಿಕೆ ಮಾಡುತ್ತಾರೆ. ಅದರಿಂದಲೇ ಹೆಚ್ಚಿನ ಲಾಭ ಮಾಡಿಕೊಳ್ಳುತ್ತಾರೆ. ಹೀಗಾಗಿ ಉದ್ಯೋಗದಿಂದ ಬಂದ ವೇತನ ಉಳಿತಾಯವಾಗುತ್ತಿರುತ್ತದೆ. ಖರ್ಚು ಮಾಡಲು ಇಷ್ಟವಿಲ್ಲದವರು ಮಾತ್ರ ದುಬಾರಿ ಆಯಿತು ಎಂದು ಸುಮ್ಮನಿರುತ್ತಾರೆ. ಯಾರೂ ಜೀವನವನ್ನು ಹೊರೆಯನ್ನಾಗಿ ಮಾಡಿಕೊಳ್ಳುವುದಿಲ್ಲ. ತಮ್ಮ ಆದಾಯಕ್ಕೆ ಸಮನಾಗಿ ಬದ್ಧತೆಗಳು ಇರುತ್ತವೆ. ಹೀಗಾಗಿ ಹಣದುಬ್ಬರದಿಂದ ಏಕಾಂತ ಕಾಡುತ್ತಿದೆ. ಎನ್ನುವುದು ಸುಳ್ಳು

**ಹಣವಿದ್ದರೂ ಸಮಯ ಇರುವುದಿಲ್ಲ:** ಅನುವಾದಕ ವೃತ್ತಿಯಲ್ಲಿರುವ ಮೆಲ್ವಿನ್ ಅವರು ಹೇಳುವ ಪ್ರಕಾರ, ಸ್ನೇಹಿತರು ನಮ್ಮ ಸಮಕ್ಕೆ ವೆಚ್ಚ ಮಾಡಲು ಸಿದ್ಧರಿಲ್ಲದೆ ಇದ್ದಾಗ ಅಂತಹ ಸ್ನೇಹಿತರ ಜೊತೆಗೆ ಇರಲು ಸಾಧ್ಯವಾಗುವುದಿಲ್ಲ. ನಮ್ಮ ತರಹವೇ ಖರ್ಚು ಮಾಡುವ ಗೆಳೆಯರು ಜೊತೆಗೆ ಇದ್ದರೆ ಹಣದುಬ್ಬರ ಏನೂ ಪರಿಣಾಮ ಬೀರುವುದಿಲ್ಲ. ಆದರೆ ನಮ್ಮನ್ನು ಲೂಟಿ ಮಾಡುವ ಗೆಳೆಯರಿದ್ದರೆ ಕಷ್ಟ, ಆದರೆ ಇತ್ತೀಚೆಗೆ ಸ್ನೇಹಿತರ ಜೊತೆಗೆ ಕಳೆಯಲು ಸಮಯ ಎಲ್ಲಿರುತ್ತದೆ? ಬಹಳಷ್ಟು ಬಾರಿ ಸಮಯ ಇದ್ದರೆ ಹಣ ಇರುವುದಿಲ್ಲ, ಹಣ ಇದ್ದರೆ ಸಮಯ ಇರುವುದಿಲ್ಲ ಎನ್ನುತ್ತಾರೆ ಮೆಲ್ವಿನ್.

**ಒಂಟಿಯಾಗಿ ಸುತ್ತುವವರಿಗೆ FriendFlation ಅನ್ವಯಿಸುವುದಿಲ್ಲ:** ತುಮಕೂರಿನವರಾದ ಸತೀಶ್ ಅವರು ಹೇಳುವ ಪ್ರಕಾರ FriendFlation ಎನ್ನುವುದು ಸ್ವಲ್ಪ ಮಟ್ಟಿಗೆ ಪ್ರಯಾಣವನ್ನು ತಡೆಯಬಹುದು. ಆದರೆ ಒಬ್ಬಂಟಿಗರಾಗಿಯೇ ಪ್ರವಾಸ ಮಾಡುವ ಸತೀಶ್ ಅವರಿಗೆ FriendFlation ಹೆಚ್ಚು ಪರಿಣಾಮ ಬೀರಿಲ್ಲ ಬೆಂಗಳೂರಿನ ನಿವಾಸಿಯಾಗಿರುವ ನಾಗರಾಜ್ ಅವರಿಗೆ FriendFlation ಸಮಸ್ಯೆಯೇ ಆಗಿಲ್ಲ. ದುಬಾರಿ ವೆಚ್ಚ ಮಾಡಬೇಕು ಎಂದುಕೊಂಡವರ ಜೊತೆಗೆ ಹೋಗೋದೇ ಇಲ್ಲ. ಅಂತಹವರನ್ನು ತಪ್ಪಿಸಿಕೊಳ್ಳುತ್ತೇವೆ. ಮುಖ್ಯವಾಗಿ ನಾನು ಒಬ್ಬಂಟಿಗನಾಗಿ ಸುತ್ತೋದರಿಂದ ಜಾಸ್ತಿ ಸಮಸ್ಯೆ ಆಗುತ್ತಿಲ್ಲ. FriendFlation ತರುವಂತಹ ಸ್ನೇಹಿತರೇ ನನಗೆ ಇಲ್ಲ'' ಎನ್ನುತ್ತಾರೆ ನಾಗರಾಜ್.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಹೆದರಿಕೆ ನಿಮ್ಮ ಸಂತೋಷವನ್ನು ಹಾಳುಗೆಡವಬಹುದು. ನೀವು ಇದು ನಮ್ಮ ಆಲೋಚನೆಗಳು ಮತ್ತು ಕಲ್ಪನೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು. ಇದು ಸ್ವಾಭಾವಿಕತೆಯನ್ನು ಕೊಲ್ಲುತ್ತದೆ.

**ವೃಷಭ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

**ಮಿಥುನ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಕರ್ಕಾಟಕ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ಇಂದಿನವರೆಗೂ ಅಗತ್ಯವಿಲ್ಲದೆ ಹಣವನ್ನು ಖರ್ಚು ಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು.

**ಸಿಂಹ** ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ಆರ್ಥಿಕ ತೊಂದರೆಗೊಳಗಾಗಬಹುದು. ಆದಾಗ್ಯೂ ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

**ಕನ್ಯಾ** ನೀವು ಯಾವುದೇ ಹೊಸ ಯೋಜನೆಯನ್ನು ತೆಗೆದುಕೊಳ್ಳುವ ಮೊದಲು ಎರಡು ಬಾರಿ ಆಲೋಚಿಸಿ. ಇಂದು ನೀವು ಕಚೇರಿಯಿಂದ ಮನೆಗೆ ಹಿಂತಿರುಗಿ ನಿಮ್ಮ ನೆಚ್ಚಿನ ಕೆಲಸವನ್ನು ಮಾಡಬಹುದು.

**ತುಲಾ** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

**ವೃಶ್ಚಿಕ** ನಿಮ್ಮ ಅನಿರೀಕ್ಷಿತ ಸ್ವಭಾವ ನಿಮ್ಮ ವೈವಾಹಿಕ ಸಂಬಂಧವನ್ನು ಹಾಳು ಮಾಡಲು ಬಿಡಬೇಡಿ. ಇದನ್ನು ತಡೆಯುವುದನ್ನು ಖಚಿತಪಡಿಸಿಕೊಳ್ಳಿ, ಇಲ್ಲದಿದ್ದಲ್ಲಿ ನೀವು ನಂತರ ವಿಷಾದಪಡಬಹುದು.

**ಧನಸ್ಸು** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ, ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ, ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ಮಕರ** ನಿಮ್ಮ ಕುಟುಂಬದ ಸಲುವಾಗಿ ಏನಾದರೂ ಉದಾತ್ತ ಮತ್ತು ಉಪಯುಕ್ತವಾದದ್ದರ ಸಲುವಾಗಿ ಶ್ರಮಪಡಿ. ಒಂದು ತಪ್ಪಿದ ಅವಕಾಶ ಮತ್ತೆ ಮರಳದೇ ಇರಬಹುದಾದ್ದರಿಂದ ಹಿಂಜರಿಯಬೇಡಿ.

**ಕುಂಭ** ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು.

**ಮೀನ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಜಂಟಿ ಯೋಜನೆಗಳು ಮತ್ತು ಸಂಶಯಾಸ್ಪದ ಹಣಕಾಸು ಯೋಜನೆಗಳಲ್ಲಿ ಹೂಡಿಕೆ ಮಾಡಬೇಡಿ.

## ಸರ್ವಜ್ಞರ ತ್ರಿಪದಿಗಳು ಇಂದಿಗೂ ಸಾರ್ವಕಾಲಿಕ ಸತ್ಯ: ತಹಶೀಲ್ದಾರ್ ಕೀರ್ತಿ ಚಾಲಕ

• ಉದಯವಾಹಿನಿ ಮುದ್ದೇಬಿಹಾಳ

ಮನುಕುಲಕ್ಕೆ ಮಾರ್ಗದರ್ಶನ ನೀಡಿದ ನಾಡಿನ ಶ್ರೇಷ್ಠ ತ್ರಿಪದಿ ಕವಿ ಸರ್ವಜ್ಞ ಅವರ ಜಯಂತಿಯನ್ನು ತಾಲ್ಲೂಕು ಆಡಳಿತದ ವತಿಯಿಂದ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಸರ್ವಜ್ಞರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ತಹಶೀಲ್ದಾರ್ ಶ್ರೀಮತಿ ಕೀರ್ತಿ ಚಾಲಕ ಅವರು, ಸರ್ವಜ್ಞರ ತ್ರಿಪದಿಗಳು ಇಂದಿಗೂ ಸಾರ್ವಕಾಲಿಕ ಸತ್ಯಗಳಾಗಿವೆ. ತಮ್ಮ ಸರಳ ಮತ್ತು ಸಾರ್ಥಕ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು'' ಎಂದು ಹೇಳಿದರು. ಕನ್ನಡ ಸಾಹಿತ್ಯ ಲೋಕಕ್ಕೆ ಸರ್ವಜ್ಞರ ಕೊಡುಗೆ


ಉದಯವಾಹಿನಿ ಚಿತ್ರ

ಅಪಾರ ಎಂದು ಸ್ಮರಿಸಿದ ಅವರು, ''ಸರ್ವಜ್ಞರು ಕೇವಲ ಕವಿಯಷ್ಟೇ ಅಲ್ಲ, ಮಹಾನ್ ದಾರ್ಶನಿಕರೂ ಆಗಿದ್ದರು. ಅವರ ಜೀವನ ಮೌಲ್ಯಗಳು ಹಾಗೂ ಸಂದೇಶಗಳು ಇಂದಿನ ಆಧುನಿಕ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ'' ಎಂದು ಅಭಿಪ್ರಾಯಪಟ್ಟರು. ಈ ವೇಳೆ ತಹಶೀಲ್ದಾರ ಕಚೇರಿಯಲ್ಲಿ ಸರ್ವಜ್ಞರ ಭಾವಚಿತ್ರಕ್ಕೆ ಸಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಲಾಯಿತು.

ಕುಂಬಾರ ಸಮಾಜದ ಮುಖಂಡರಾದ ಸಂಗಣ್ಣ ಕುಂಬಾರ, ಸಿದ್ರಾಮಪ್ಪ ಕುಂಬಾರ, ಅಂಬಣ್ಣ ಕುಂಬಾರ, ಮಹಾಂತೇಶ ಕುಂಬಾರ, ಶ್ರೀಶೈಲ ಕುಂಬಾರ, ಶಂಕ್ರಪ್ಪ ಕುಂಬಾರ, ಸುಭಾಸ್ ಕುಂಬಾರ, ಹಣಮಂತ ಕುಂಬಾರ, ಮಲ್ಲಣ್ಣ ಕುಂಬಾರ ನಂದವಾಡಗಿ, ಪತ್ರಕರ್ತರಾದ ಕೆ.ಎಂ. ರಿಸಲದ್ದಾರ, ಮುತ್ತು ಟಕ್ಕಳಕಿ, ಬಸವರಾಜ ಕುಂಬಾರ ಉಪತಹಶೀಲ್ದಾರ್ ಎನ್.ಬಿ. ಮಾವಿನಮಟ್ಟಿ, ಎಂ.ಎಸ್. ಗೋನಾಳ ಹಾಗೂ ಶಿರಸ್ತೇದಾರರಾದ ಎಸ್.ಎಂ. ಸಜ್ಜನ, ಜಿ.ಎನ್. ಕಟ್ಟಿ, ಬಿ.ಎಸ್. ಮುದ್ದೇಬಿಹಾಳ ಸೇರಿದಂತೆ ತಹಶೀಲ್ದಾರ್ ಕಚೇರಿಯ ಸಿಬ್ಬಂದಿಗಳು ಹಾಗೂ ಕುಂಬಾರ ಸಮಾಜದ ಪ್ರಮುಖರು ಭಾಗವಹಿಸಿದ್ದರು.

## ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಯುವಕನಿಗೆ 20 ವರ್ಷ ಜೈಲು

• ಉದಯವಾಹಿನಿ ಕಲಬುರಗಿಫ

ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ್ದರಿಂದ ನಗರದ ಅಪರ ಜಿಲ್ಲಾ ಮತ್ತು ಸತ್ರ ( ವಿಶೇಷ ಪೋಕ್ಸೋ ) -ಎಫ್ ಟಿ ಎಸ್ ಸಿ -1 ನ್ಯಾಯಾಲಯವು ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ ಮತ್ತು 1.5 ಲಕ್ಷ ರೂ ದಂಡ ವಿಧಿಸಿದೆ. ಸೇಡಂ ತಾಲ್ಲೂಕಿನ ಮುಧೋಳ ಠಾಣಾ ವ್ಯಾಪ್ತಿಯ ಗ್ರಾಮವೊಂದರ ನಿವಾಸಿ ದೇವರಾಜ ತಿಮ್ಮಪ್ಪ ವಡ್ಡರ ( 20 ) ಶಿಕ್ಷೆಗೊಳಗಾದ ಯುವಕ. 2025 ರ ಏಪ್ರಿಲ್ 26 ರಂದು ಆರೋಪಿಯು ಅಪ್ರಾಪ್ತೆಯನ್ನು ಬೈಕ್ ಮೇಲೆ ಅಪಹರಿಸಿಕೊಂಡು ಹೋಗಿ ಹೊಲದಲ್ಲಿ ನಂತರ ಹೈದರಾಬಾದ್‌ಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸೆದಿದ್ದ. ಈ ಕುರಿತು ದಾಖಲಾದ ದೂರನ್ನು ಪರಿಗಣಿಸಿ ತನಿಖೆ ನಡೆಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಅಪರ ಜಿಲ್ಲಾ ಮತ್ತು ಸತ್ರ ( ವಿಶೇಷ ಪೋಕ್ಸೋ ) ನ್ಯಾಯಾಲಯ-ಎಫ್ ಟಿ ಎಸ್ ಸಿ -1 ನ್ಯಾಯಾಧೀಶರಾದ ಮಹ್ಮದ ಮುಜೀರ ಉಲ್ಲಾ ಅವರು ಶಿಕ್ಷೆಯನ್ನು ನೀಡಿ ಆದೇಶಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಶಾಂತವೀರ ಬೀ ತುಪ್ಪದ ಅವರು ವಾದ ಮಂಡಿಸಿದ್ದರು

## ಜಿಲ್ಲೆಯಲ್ಲಿ 26,954 ವಿದ್ಯಾರ್ಥಿಗಳಿಂದ ನೋಂದಣಿ: ಜಿಲ್ಲಾಧಿಕಾರಿ ಸ್ನೇಹಲ್ ಆರ್.

# ಫೆಬ್ರವರಿ 28 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ

• ಉದಯವಾಹಿನಿ ಧಾರವಾಡ

ಪ್ರಸ್ತಕ ವರ್ಷದ ಪಿಯುಸಿ ವಾರ್ಷಿಕ ಪರೀಕ್ಷೆಯು ಫೆಬ್ರವರಿ 28, 2026 ರಿಂದ ಮಾರ್ಚ್ 17, 2026 ರವರೆಗೆ ನಡೆಯಲಿವೆ. ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಪರೀಕ್ಷೆಗಳು ನಡೆಯಲಿವೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಹೇಳಿದರು.

ಅವರು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳ ಕುರಿತು ಕೈಗೊಂಡ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ಜರುಗಿಸಿ, ಮಾತನಾಡಿದರು. ಪ್ರಸಕ್ತ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ 12,665 ಪುರುಷ ಹಾಗೂ 14,289 ಮಹಿಳಾ ವಿದ್ಯಾರ್ಥಿಗಳು ಸೇರಿ ಒಟ್ಟು 26,954 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ಇದರಲ್ಲಿ ಪ್ರಥಮ ಬಾರಿಗೆ ಪಿಯುಸಿ ಪರೀಕ್ಷೆಗೆ ಹಾಜರಾಗುತ್ತಿರುವವರು 11,269 ಪುರುಷ ಹಾಗೂ 13,445 ಮಹಿಳಾ ವಿದ್ಯಾರ್ಥಿಗಳು ಸೇರಿ ಒಟ್ಟು 24,714 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಮತ್ತು ಪುರಾವರ್ತಿತ ಪರೀಕ್ಷಾರ್ಥಿಗಳು 1,234 ಪುರುಷ ಹಾಗೂ 682 ಮಹಿಳಾ ವಿದ್ಯಾರ್ಥಿಗಳು, ಖಾಸಗಿ ಅಭ್ಯರ್ಥಿಗಳಾಗಿ 150 ಪುರುಷ ಹಾಗೂ 148 ಮಹಿಳಾ ವಿದ್ಯಾರ್ಥಿಗಳು ಹಾಗೂ ಫಲಿತಾಂಶ ಸುಧಾರಣೆಗಾಗಿ 12 ಪುರುಷ ಮತ್ತು 14 ಮಹಿಳಾ ವಿದ್ಯಾರ್ಥಿಗಳು ಸೇರಿದಂತೆ 2240 ಪರೀಕ್ಷಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ಹೇಳಿದರು. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಪೂರ್ವಭಾವಿ ಭೇಟಿ ನೀಡಿ, ಸಿಸಿಟಿವಿ ವ್ಯವಸ್ಥೆ ಹಾಗೂ ಮೂಲಭೂತ ಸೌಲಭ್ಯಗಳಿರುವುದನ್ನು ಖಚಿತಪಡಿಸಲಾಗಿದೆ. ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಕೂಡ ಕಲ್ಪಿಸಲಾಗುತ್ತದೆ ಎಂದು ಅವರು ಹೇಳಿದರು.

**ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ 3,152 ಪುರುಷ ಹಾಗೂ 3,455 ಮಹಿಳಾ ವಿದ್ಯಾರ್ಥಿಗಳು ಸೇರಿ ಒಟ್ಟು 6,607 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 3,315 ಪುರುಷ ಹಾಗೂ 3,863 ಮಹಿಳಾ ವಿದ್ಯಾರ್ಥಿಗಳು ಸೇರಿ ಒಟ್ಟು 7,178 ವಿದ್ಯಾರ್ಥಿಗಳು ಹಾಗೂ ವಿಜ್ಞಾನ ವಿಭಾಗದಲ್ಲಿ 6,198 ಪುರುಷ ಹಾಗೂ 6,971 ಮಹಿಳಾ ವಿದ್ಯಾರ್ಥಿಗಳು ಸೇರಿ ಒಟ್ಟು 13,169 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಧಾರವಾಡ ಜಿಲ್ಲೆಯಲ್ಲಿ ಒಟ್ಟು 176 ಕಾಲೇಜುಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಒಟ್ಟು 43 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವುಗಳಲ್ಲಿ ಧಾರವಾಡ 16, ಹುಬ್ಬಳ್ಳಿ 18, ಅಳ್ನಾವರ 1, ಕಲಘಟಗಿ 2, ಕುಂದಗೋಳ 3, ನವಲಗುಂದ 2 ಹಾಗೂ ಅಣ್ಣಿಗೇರಿ 1 ಪರೀಕ್ಷಾ ಕೇಂದ್ರಗಳಿವೆ ಎಂದು ಅವರು ತಿಳಿಸಿದರು.**


ಉದಯವಾಹಿನಿ ಚಿತ್ರ

> **ಪರೀಕ್ಷಾ ಕೇಂದ್ರಗಳ ಮುಖ್ಯಾಧಿಕಾರಿಗಳಿಗೆ ಪರೀಕ್ಷೆಯನ್ನು ಸುಗಮ, ಶಾಂತಿಯುತ ಹಾಗೂ ಗೊಂದಲರಹಿತವಾಗಿ ನಡೆಸುವಂತೆ ಹಾಗೂ ಯಾವುದೇ ನಕಲುಗಳಿಗೆ ಅವಕಾಶ ಕೊಡಬಾರದೆಂದು ಕಟ್ಟುನಿಟ್ಟಿನ ನಿರ್ದೇಶನವನ್ನು ಜಿಲ್ಲಾಧಿಕಾರಿಗಳು ನೀಡಿದರು. ಪರೀಕ್ಷಾರ್ಥಿಗಳಿಗೆ ಅಗತ್ಯವಾದ ಆಸನ ವ್ಯವಸ್ಥೆ, ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯಗಳು ಸಮರ್ಪಕವಾಗಿ ಕಲ್ಪಿಸಬೇಕು. ಡೆಸ್ಕ ಕೊರತೆ ಕಂಡುಬಂದಲ್ಲಿ ಸಂಬಂಧಿತ ಟ್ಯಾಗ್ ಮಾಡಿದ ಕಾಲೇಜುಗಳಿಂದ ತಕ್ಷಣವೇ ವ್ಯವಸ್ಥೆ ಮಾಡಿಕೊಳ್ಳುವಂತೆ ಅವರು ಸೂಚಿಸಿದರು.**
> **-ಸ್ನೇಹಲ್, ಜಿಲ್ಲಾಧಿಕಾರಿ**

ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ, ಆ ವ್ಯಾಪ್ತಿಯಲ್ಲಿರುವ ಜರಾಕ್ಸ್, ಸೈಬರ್ ಸೆಂಟರ್ ಹಾಗೂ ಕಂಪ್ಯೂಟರ್ ಕೇಂದ್ರಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶ ಹೊರಡಿಸಲಾಗುವುದು ಎಂದು ಅವರು ತಿಳಿಸಿದರು.

ಪರೀಕ್ಷಾ ಸಂಬಂಧಿತ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಜಿಲ್ಲಾ ಖಜಾನೆ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 24×7 ಸಿಸಿಟಿವಿ ಕ್ಯಾಮೆರಾ ವೀಕ್ಷಣೆ ವ್ಯವಸ್ಥೆ ಕಲ್ಪಿಸಲಾಗಿದೆ. ವ್ಯಕ್ತಿಗಳ ಚಲನವಲನವನ್ನು ನಿರಂತರವಾಗಿ ಗಮನಿಸಲಾಗುತ್ತಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಕೇಂದ್ರಗಳಿಗೆ ನೇಮಕಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರತುಪಡಿಸಿ ಇತರ ಯಾವುದೇ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ ಎಂದು ಹೇಳಿದರು.

**ಶೌಚಾಲಯ ಸೌಲಭ್ಯಗಳು ಸಮರ್ಪಕವಾಗಿ ಕಲ್ಪಿಸಬೇಕು**

ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತಿ ವ್ಯವಸ್ಥೆ ಮಾಡಲಾಗಿದ್ದು, ಶಾಂತಿ ಮತ್ತು ಭದ್ರತೆ ಕಾಪಾಡಲು ಕ್ರಮ ಕೈಗೊಳ್ಳಬೇಕು. ಜಿಲ್ಲಾ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಸಾಗಿಸುವ ಗೌಪ್ಯ ಸಾಮಗ್ರಿಗಳ ವಾಹನಗಳಿಗೆ ಶಸ್ತ್ರಸಜ್ಜಿತ ಪೊಲೀಸ್ ಬೆಂಗಾವಲು ಒದಗಿಸಬೇಕು. ವಾಹನಗಳ ಮೇಲೆ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ಯಾದೃಚ್ಛಿಕಗೊಳಿಸುವಿಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗಿದ್ದು, ಪರೀಕ್ಷೆಯ ನಿಷ್ಪಕ್ಷಪಾತತೆಯನ್ನು ಖಚಿತಪಡಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಸಿಟಿಂಗ್ ಸ್ಕ್ವಾಡ್, ಜಿಲ್ಲಾ ಜಾಗೃತದಳ ಹಾಗೂ ತಾಲ್ಲೂಕು ಜಾಗೃತದಳಗಳನ್ನು ನೇಮಿಸಿ, ಕಟ್ಟುನಿಟ್ಟಿನ ಮೇಲ್ವಿಚಾರಣೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು.

## ಮಾತೃಭಾಷೆಯು ಸಂಸ್ಕೃತಿ-ಭಾವನೆಗಳ ಪ್ರತೀಕ:ಸಂತೋಷ ಬಂಡೆ

• ಉದಯವಾಹಿನಿ ವಿಜಯಪುರ

ಮಾತೃಭಾಷೆಯು ಸಂಸ್ಕೃತಿ-ಭಾವನೆಗಳ ಪ್ರತೀಕ. ಅದು ಉತ್ತಮ ಶೈಕ್ಷಣಿಕ ಸಾಧನೆಗೆ ಮತ್ತು ವ್ಯಕ್ತಿತ್ವದ ಸಮಗ್ರ ವಿಕಸನಕ್ಕೆ ಅತ್ಯಗತ್ಯವಾಗಿದೆ. ಹಾಗಾಗಿ ಮಾತೃಭಾಷೆಯ ಕಾಳಜಿ ಸದಾ ಇರಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು. ತಾಲ್ಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ 'ವಿಶ್ವ ಮಾತೃಭಾಷಾ ದಿನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಾತೃಭಾಷೆ ಮಗು ಕಲಿಯುವ ಮೊದಲ ಭಾಷೆ. ಅದು ಪ್ರತಿಯೊಂದು ಸಂಸ್ಕೃತಿಯ ಆಸ್ತಿ ಮತ್ತು ನಮ್ಮೆಲ್ಲರ ಆತ್ಮವಿಶ್ವಾಸದ ಪ್ರತೀಕ. ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಾತೃಭಾಷೆಯೇ ಬಹುಮುಖ್ಯ. ಮಕ್ಕಳು ಆಡುತ್ತಾ, ನೋಡುತ್ತಾ, ಮೈಗೂಡಿಸಿಕೊಳ್ಳುವ ಸಂವಹನದ ಬುನಾದಿಯೇ ಮಾತೃಭಾಷೆಯಾಗಿದೆ ಎಂದರು.

## ಬೀದಿ ನಾಯಿಗಳ ದಾಳಿ: 10 ಕುರಿ ಮರಿಗಳ ಸಾವು


ಉದಯವಾಹಿನಿ ಚಿತ್ರ

• ಉದಯವಾಹಿನಿ ಬ್ಯಾಡಗಿ

ತಾಲ್ಲೂಕಿನ ಕಲ್ಲೆದೇವರು ಗ್ರಾಮದ ಹೊರವಲಯದಲ್ಲಿ ದೊಡ್ಡಿಯಲ್ಲಿ ಕೂಡಿ ಹಾಕಿದ್ದ ಕುರಿ ಮರಿಗಳ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿದ ಹಿನ್ನೆಲೆಯಲ್ಲಿ ಶನಿವಾರ 10ಕ್ಕೂ ಹೆಚ್ಚು ಮರಿಗಳು ಮೃತಪಟ್ಟಿವೆ. ಪರಿಣಾಮ 2 ಲಕ್ಷಕ್ಕೂ ಹೆಚ್ಚು ಹಾನಿಯಾಗಿದೆ. ಗ್ರಾಮದ ಹೊರವಲಯದದಲ್ಲಿ ಅಗಡಿ ಗ್ರಾಮಕ್ಕೆ ಹೋಗುವ ರಸ್ತೆ ಬದಿ ಶರಣಪ್ಪ ಮಾತನವರ ಅವರ ಜಮೀನಿನಲ್ಲಿ ಕುರಿಗಳನ್ನು ಕೂಡಿ ಹಾಕಲಾಗಿತ್ತು. ಅವು ಕಿಟ್ಟಪ್ಪ ಕಾಡಮ್ಮನವರ ಅವರಿಗೆ ಸೇರಿದ ಕುರಿಗಳಾಗಿದ್ದು, ಮಧ್ಯಾಹ್ನ 3 ಗಂಟೆಗೆ ಊಟ ತರಲು ತೆರಳಿದ್ದ ವೇಳೆ ಬೀದಿ ನಾಯಿಗಳು ದಾಳಿ ನಡೆಸಿವೆ ಎಂದು ಅವರು ತಿಳಿಸಿದರು.

## ಮಕ್ಕಳ ಆಹಾರ ಸುರಕ್ಷತೆ ಬಗ್ಗೆ ಎಚ್ಚರಿಕೆ ವಹಿಸಿ: ಡಾ. ತಿಪ್ಪೇಸ್ವಾಮಿ.ಕೆ.ಟಿ

• ಉದಯವಾಹಿನಿ ಚಿತ್ರದುರ್ಗ

ಉಗ್ರಾಣದ ಪ್ರತಿಯೊಂದು ಚೀಲದಲ್ಲಿರುವ ಧಾನ್ಯವೂ ಮಗುವಿನ ಆರೋಗ್ಯ, ಶಿಕ್ಷಣ ಮತ್ತು ಭವಿಷ್ಯಕ್ಕೆ ನೇರವಾಗಿ ಸಂಬಂಧಿಸಿದೆ. ಆಹಾರ ಸುರಕ್ಷತೆಯಲ್ಲಿ ಯಾವುದೇ ಅಸಡ್ಡೆ ತೋರದೆ ಅಧಿಕಾರಿಗಳು ಸೂಕ್ಷ್ಮತೆಯಿಂದ ಕಾರ್ಯನಿರ್ವಹಿಸಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ಕೆ.ಟಿ.ತಿಪ್ಪೇಸ್ವಾಮಿ ತಿಳಿಸಿದರು. ನಗರದಲ್ಲಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಗ್ರಾಣಗಳಿಗೆ ಡಾ.ಕೆ.ಟಿ. ತಿಪ್ಪೇಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶಾಲೆ ಮತ್ತು ವಸತಿ ನಿಲಯಗಳಿಗೆ ಸರಬರಾಜು ಮಾಡುವ ಆಹಾರವನ್ನು ಸೂಕ್ಷ್ಮ ವಿಭಾಗ ಎಂದು ಪರಿಗಣಿಸಬೇಕು. ಮಕ್ಕಳ ಆಹಾರದ ಗುಣಮಟ್ಟದ ರಾಜಿ ಅಥವಾ ನಿರ್ಲಕ್ಷ್ಯ ಸಲ್ಲದು. ಉಗ್ರಾಣಗಳ ಸ್ವಚ್ಛತೆ, ಧಾನ್ಯ ಸಂಗ್ರಹಣೆ, ಕೀಟ-ಇಲಿ ನಿಯಂತ್ರಣ ಮತ್ತು


ಉದಯವಾಹಿನಿ ಚಿತ್ರ

ಮೊದಲು ಬಂದ ಧಾನ್ಯವನ್ನು ಮೊದಲು ವಿತರಿಸುವ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮಾರ್ಗಸೂಚಿಗಳು ಹಾಗೂ ಆಹಾರ ಸುರಕ್ಷತಾ ಕಾಯ್ದೆ-2006 ರ ನಿಯಮಗಳನ್ನು ಪ್ರತಿಯೊಂದು ಹಂತದಲ್ಲೂ ಪಾಲಿಸಬೇಕು. ಹಾನಿಯಾದ ಅಥವಾ ತೇವಾಂಶದಿಂದ ಕೂಡಿದ ಆಹಾರ ಪದಾರ್ಥಗಳು ಕಂಡುಬಂದಲ್ಲಿ ಕೂಡಲೇ ಅವುಗಳನ್ನು ಪ್ರತ್ಯೇಕಿಸಲು ಕ್ರಮ ಕೈಗೊಳ್ಳಬೇಕು. ಆಹಾರ ಸಂಗ್ರಹಣೆ ಅಥವಾ ವಿತರಣೆಯಲ್ಲಿನ ಲೋಪವು ಮಕ್ಕಳ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಸಮಾನ ಎಂದು ಅವರು ಎಚ್ಚರಿಸಿದರು. ಜಿಲ್ಲೆಯ ಎಲ್ಲಾ ಉಗ್ರಾಣಗಳು ಹಾಗೂ ನ್ಯಾಯಬೆಲೆ ಅಂಗಡಿಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಡಾ.ಕೆ.ಟಿ.ತಿಪ್ಪೇಸ್ವಾಮಿ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರೇಮಮೂರ್ತಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ್, ಉಗ್ರಾಣ ವ್ಯವಸ್ಥಾಪಕರು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಆದ್ಯತೆ ಮೇರೆಗೆ ಪರಿಹಾರ ವಿತರಣೆಗೆ ಕ್ರಮ: ಸಚಿವ ಆರ್.ಬಿ. ತಿಮ್ಮಾಪುರ

• ಉದಯವಾಹಿನಿ ಬಾಗಲಕೋಟೆ

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನಗೊಂಡ ರೈತರಿಗೆ ಆದ್ಯತೆ ಮೇರೆಗೆ ಪರಿಹಾರ ವಿತರಣೆಗೆ ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಜರುಗಿದ ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಕುರಿತ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಐತಿಹಾಸಿಕ ತೀರ್ಪಿನನ್ವಯ ಭೂಸ್ವಾಧೀನಗೊಂಡ ರೈತರಿಗೆ ಸೂಕ್ತ ಪರಿಹಾರ ಸರ್ಕಾರ ಘೋಷಿಸಿದೆ. ಭೂಮಿ ಕಳೆದುಕೊಳ್ಳುವ ರೈತರಿಗೆ ಆದ್ಯತೆಯ ಮೇರೆಗೆ ಪರಿಹಾರ ವಿತರಣೆಗೆ ಕ್ರಮವಹಿಸಬೇಕಿದೆ. ಈಗಾಗಲೇ ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದ ಹಂತದಲ್ಲಿದ್ದು, ಹೈಕೋರ್ಟ್ ತೀರ್ಪಿನನ್ವಯ ಪರಿಹಾರ ವಿತರಣೆಗೆ ನ್ಯಾಯಾಲಯದ ಅನುಮತಿ ಪಡೆಯಬೇಕು ಎಂದರು.



ನ್ಯಾಯಾಲಯದ ಅನುಮತಿ ಪಡೆದುಕೊಂಡ ನಂತರ ಭೂಸ್ವಾಧೀನಗೊಳ್ಳುವ ಗ್ರಾಮಗಳನ್ನು ಆದ್ಯತೆಯ ಮೇರೆಗೆ ಪಟ್ಟಿ ಮಾಡಿಕೊಳ್ಳಬೇಕು. ಎಲ್ಲೆಲ್ಲಿ ಮುಳುಗಡೆಯಾಗುತ್ತದೆ ಎಂಬುದನ್ನು ಗುರುತು ಮಾಡಬೇಕು. ಬಜೆಟ್ ನಂತರ ಮುಖ್ಯಮಂತ್ರಿ ಜಿಲ್ಲೆಗೆ ಬರಲಿದ್ದು, ಅದಕ್ಕೂ ಪೂರ್ವದಲ್ಲಿ ಪರಿಹಾರ ವಿತರಣೆಯ ಪಟ್ಟಿ ಸಿದ್ಧವಾಗಿರಬೇಕು ಎಂದು ಹೇಳಿದರು. ಪುನರ್‌ವಸತಿ ಕೇಂದ್ರಗಳನ್ನು ವರ್ಗಾವಣೆ ಮಾಡಲಾಗಿದೆ. ಅವುಗಳಲ್ಲಿ ಕೆಲವು ಮೂಲಸೌಲಭ್ಯಗಳು ಬೇಕಾಗಿದ್ದು, ಪುನರ್‌ವಸತಿ ಕೇಂದ್ರಗಳಲ್ಲಿ ಉಳಿಕೆ ಜಾಗವನ್ನು ಗ್ರಾಮ ಪಂಚಾತಿತಿಗೆ ಹಸ್ತಾಂತರಿಸುವ ಕೆಲಸವಾಗಬೇಕು ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಪುನರ್‌ವಸತಿ ಕೇಂದ್ರಗಳಲ್ಲಿ ಶಾಲೆ, ಪಿಕೆಪಿಎಸ್ ಕಟ್ಟಲಿಕ್ಕೆ ಯಾವುದೇ ರೀತಿಯಲ್ಲಿ ಅನಾವಶ್ಯಕ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

## ಅತಿಥಿ ಶಿಕ್ಷಕರ ಬಾಕಿ ವೇತನ ಪಾವತಿಗೆ ಆಗ್ರಹ

• ಉದಯವಾಹಿನಿ ಯಲಬುರ್ಗಾ

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಹೆಚ್ಚಾಗುತ್ತಿರುವ ಕಾರಣ ಮಕ್ಕಳ ಶೈಕ್ಷಣಿಕ ಸ್ಥಿತಿಗತಿ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಸರಿಯಾಗಿ ವೇತನ ನೀಡದೆ ಅತಿಥಿ ಶಿಕ್ಷಕರನ್ನು ದುಡಿಸಿಕೊಳ್ಳುತ್ತಿದ್ದಾರೆ' ಎಂದು ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ ಆರೋಪಿಸಿದರು. ಕಾಯಂ ಶಿಕ್ಷಕರಿಲ್ಲದೆ ಬಹುತೇಕ ಶಾಲೆಗಳಲ್ಲಿ ಅತಿಥಿ ಶಿಕ್ಷಕರೆ ಕಾರ್ಯನಿರ್ವಹಿಸಬೇಕಾಗಿದೆ. ಈ ಅವಕಾಶವನ್ನು ಕೆಲ ಪೂರ್ಣಾವಾಧಿ ಶಿಕ್ಷಕರು ದುರ್ಬಳಕೆ ಮಾಡಿಕೊಂಡು ಪೂರ್ಣ ತರಗತಿಗಳನ್ನು ಅತಿಥಿ ಶಿಕ್ಷಕರ ಮೇಲೆ ಹೊರೆ ಹಾಕಿ ಸಭೆ ಸಮಾರಂಭಗಳಲ್ಲಿ ತಿರುಗಾಡುತ್ತಿದ್ದಾರೆ' ಎಂದು ಆರೋಪಿಸಿದರು. 'ಕೆಲವೆಡೆ ಶಿಕ್ಷಕರಿಲ್ಲದೇ ಎಲ್ಲವನ್ನು ಅತಿಥಿ ಶಿಕ್ಷಕರೆ ನಿರ್ವಹಿಸುತ್ತಿರುವುದರಿಂದ ಕೆಲವೊಂದು ನಿರ್ಣಯ ಕೈಗೊಳ್ಳಲು ಸಾಧ್ಯವಾಗದ ಅನಿವಾರ್ಯತೆ ಎದುರಾಗುತ್ತಿದೆ. ಈ ಬಗ್ಗೆ ಸ್ಥಳೀಯ ಶಾಸಕರು ಯಾವುದೇ ಕಾಳಜಿ ತೋರುತ್ತಿಲ್ಲ' ಎಂದು ಟೀಕಿಸಿದರು. ಶಾಲೆ ಕೋಠಡಿಗಳ ನಿರ್ಮಾಣ, ಪ್ರೌಢಶಾಲೆ, ಕಾಲೇಜು ಕಟ್ಟಡ ಇದ್ದರೆ ಸಾಲದು ಪಾಠ ಮಾಡಲು ಶಿಕ್ಷಕರನ್ನು ಭರ್ತಿ ಮಾಡಬೇಕು ಎನ್ನುವ ಕನಿಷ್ಟ ಅರಿವು ಶಾಸಕರಿಗೆ ಇಲ್ಲದಾಗಿದೆ ಎಂದರು.

## ಕೆಪಿಎಸ್ ಶಾಲೆಗಳಿಂದ ಸಾರ್ವತ್ರಿಕ ಶಿಕ್ಷಣದ ಹರಣ: ವಿ.ಎನ್.ರಾಜಶೇಖರ

• ಉದಯವಾಹಿನಿ ವಾಡಿ

ಊರಿನ ಸರ್ಕಾರಿ ಶಾಲೆಗಳನ್ನು ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಸ್ಥಾಪನೆಗೆ ಮುಂದಾಗಿರುವ ರಾಜ್ಯ ಸರಕಾರ, ಸಾರ್ವತ್ರಿಕ ಶಿಕ್ಷಣದ ಹರಣಕ್ಕೆ ಮರಣ ಶಾಸನ ಬರೆಯಲು ಮುಂದಾಗಿದೆ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಉಪಾಧ್ಯಕ್ಷ ವಿ.ಎನ್.ರಾಜಶೇಖರ ಹೇಳಿದರು.

ಪಟ್ಟಣದಲ್ಲಿ ಶಿಕ್ಷಣ ಉಳಿಸಿ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಸರಕಾರಿ ಶಾಲೆಗಳು ಮುಚ್ಚುವ ಸರ್ಕಾರದ ಹುನ್ನಾರ ಕುರಿತ ಶಿಕ್ಷಕರ ವಿಶೇಷ ಚರ್ಚಾಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು. ಸರಕಾರದ ನೀಲನಕ್ಷೆ ಗಮನಿಸಿದರೆ ಶಿಕ್ಷಣದ ಅಡಿಪಾಯಗಳಾಗಿರುವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಇನ್ನುಮುಂದೆ ಗ್ರಾಮಗಳಿಂದ ಕಾಲ್ಕಿತ್ತಲಿವೆ. ಬಡ ಹಾಗೂ ಅತ್ಯಂತ ಹಿಂದುಳಿದ ಮಕ್ಕಳಿಗೆ ಅವರ ಊರಿನಲ್ಲೇ ದೊರೆಯುತ್ತಿದ್ದ ಅಕ್ಷರ ಜ್ಞಾನದ ಬಾಗಿಲುಗಳು ಮುಚ್ಚಲಿವೆ. ಇವು ದೂರದ ಕೆಪಿಎಸ್ ಮ್ಯಾಗ್ನೇಟ್ ಶಾಲೆಗಳಿಗೆ ವಿಲೀನಗೊಳ್ಳುತ್ತಿವೆ. ಕರ್ನಾಟಕದಲ್ಲಿ ಒಟ್ಟು 6000 ಕೆಪಿಎಸ್ ಮ್ಯಾಗ್ನೇಟ್ ಶಾಲೆಗಳನ್ನು ತೆರೆಯಲಾಗುತ್ತಿದ್ದು, ಒಂದು ಮ್ಯಾಗ್ನೇಟ್ ಶಾಲೆಯ


ಉದಯವಾಹಿನಿ ಚಿತ್ರ

ವ್ಯಾಪ್ತಿಯಲ್ಲಿ ಕನಿಷ್ಠ ಹತ್ತು ಗ್ರಾಮಗಳ ಸರ್ಕಾರಿ ಶಾಲೆಗಳು ಶಾಶ್ವತವಾಗಿ ಮುಚ್ಚಲಿವೆ ಎಂದರು. ಹಳ್ಳಿ ಶಾಲೆಗಳಿಗೆ ಬೀಗ ಬಿದ್ದರೆ, ಬಡ ವರ್ಗದ ಮಕ್ಕಳ ಶಿಕ್ಷಣಕ್ಕೂ ಬೀಗ ಬೀಳುತ್ತದೆ. ಬಹುಮುಖ್ಯವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಇದು ದೊಡ್ಡ ಪೆಟ್ಟು ಕೊಡುತ್ತದೆ. ಇಡೀ ಸಮಾಜವೇ ವಿರೋಧಿಸಿದರೂ ಕೆಳವರ್ಗದ ಮಕ್ಕಳು, ದಲಿತ ಸಮುದಾಯದ ಮಕ್ಕಳು, ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಶಿಕ್ಷಣ ಬೇಕೆಂದು ಹೋರಾಡಿದ್ದ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಈಶ್ವರಚಂದ್ರ ವಿದ್ಯಾಸಾಗರರ ಕನಸು ಮೂಲೆಗುಂಪಾಗುತ್ತವೆ. ಶಿಕ್ಷಣ ಮತ್ತು ಆರೋಗ್ಯ ಕಡ್ಡಾಯವಾಗಿ ಉಚಿತವಾಗಿ ಕೊಡಬೇಕಾದ್ದು ಸರಕಾರದ ಜವಾಬ್ದಾರಿಯಾಗಿದೆ. ಆದರೆ, ಶೋಷಕ ಬಂಡವಾಳಶಾಹಿ ಗುಲಾಮಿ ಸರ್ಕಾರಗಳು ಬಡವರ ಹಕ್ಕುಗಳನ್ನು ಒಂದೊಂದಾಗಿ ಕಿತ್ತುಕೊಳ್ಳುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾಮೀಣ ಜನರು ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಹೋರಾಟ ರೂಪಿಸಲು ಸಜ್ಜಾಗಬೇಕು ಎಂದು ಕರೆನೀಡಿದರು.

ಶಿಕ್ಷಣ ಉಳಿಸಿ ಸಮಿತಿ ವಾಡಿ ಘಟಕದ ಅಧ್ಯಕ್ಷ ರಮೇಶ ಮಾಶಾಳ, ಕಾರ್ಯದರ್ಶಿ ಶರಣುಕುಮಾರ ದೋಶೆಟ್ಟಿ, ವೀರಭದ್ರಪ್ಪ ಆರ್.ಕೆ, ಸಾಯಬಣ್ಣ ನಾಟೇಕರ, ಈರಣ್ಣ ನಾಟೇಕರ, ಪದ್ಮರೇಖಾ ವಿ.ಕೆ, ಸೀತಾ ಹೇರೂರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಚಿಕ್ಕಮಗಳೂರಿನ ಸರ್ಕಾರಿ ಶಾಲೆಗಳಲ್ಲಿ ಡಿ-ಗ್ರೂಪ್ ನೌಕರರ ಕೊರತೆ

## ಪುಸ್ತಕ ಹಿಡಯಬೇಕಾದ ವಿದ್ಯಾರ್ಥಿಗಳೇ ಶೌಚಾಲಯ ಸ್ವಚ್ಛಗೊಳಿಸುವ ಸ್ಥಿತಿ, ಶೀಘ್ರವೇ ಡಿ-ಗ್ರೂಪ್ ನೌಕರರನ್ನು ನೇಮಿಸಿ ಎಂದು ಪೋಷಕರ ಆಗ್ರಹ

• ಉದಯವಾಹಿನಿ ಕೊಪ್ಪ

ಸರಕಾರ ಶಾಲೆಗಳಲ್ಲಿ ಗುಣಮಟ್ಟದ ಶೌಚಾಲಯಗಳನ್ನು ನಿರ್ಮಿಸಿದೆ. ಆದರೆ, ಸಿಬ್ಬಂದಿ ಕೊರತೆಯಿಂದ ಅದನ್ನು ಸ್ವಚ್ಛಗೊಳಿಸುವವರು ಯಾರು? ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ತಾಲ್ಲೂಕಿನಾದ್ಯಂತ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ಗ್ರೂಪ್ ಡಿ ನೌಕರರಿಲ್ಲದೆ ವಿದ್ಯಾರ್ಥಿಗಳೇ ಶೌಚಾಲಯ ಸ್ವಚ್ಛಗೊಳಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ತಾಲ್ಲೂಕಿನಲ್ಲಿ ಇಲಾಖೆಯ 31 ಕಿರಿಯ ಪ್ರಾಥಮಿಕ ಶಾಲೆಯಲ್ಲಿ 374 ವಿದ್ಯಾರ್ಥಿಗಳು, 61 ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2984, 12 ಪ್ರೌಢಶಾಲೆಗಳಲ್ಲಿ 1324 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಉಳಿದಂತೆ 4 ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 478, 7 ಪ್ರೌಢಶಾಲೆಯಲ್ಲಿ 790 ವಿದ್ಯಾರ್ಥಿಗಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ 3 ಪ್ರೌಢಶಾಲೆಯಲ್ಲಿ 350 ಹಾಗೂ 3 ಗಿರಿಜನ ಆಶ್ರಮ ಶಾಲೆಯಲ್ಲಿ 482 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**ಮಕ್ಕಳ ಭವಿಷ್ಯಕ್ಕೆ ಧಕ್ಕೆ**

> **ಸರಕಾರಿ ಶಾಲೆಗಳಲ್ಲಿ ಗ್ರೂಪ್ ಡಿ ನೌಕರರ ಅಗತ್ಯತೆ ಬಗ್ಗೆ ಮೇಲಧಿಕಾರಿಗಳಿಗೆ ಮನವರಿಕೆ ಮಾಡಿದ್ದೇವೆ. ಸರಕಾರ ನೇಮಕಾತಿ ಮಾಡಿ ಕಳುಹಿಸಬೇಕಿದೆ.**
> **-ರಾಘವೇಂದ್ರ, ಬಿಇಒ, ಕೊಪ್ಪ.**

ತಾಲ್ಲೂಕಿನ 3 ಅನುದಾನ ರಹಿತ ಖಾಸಗಿ ಪ್ರೌಢಶಾಲೆಗಳಲ್ಲಿ ಗ್ರೂಪ್ ಡಿ ನೌಕರರಿದ್ದಾರೆ. ಆದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಲ್ಲೇ ಗ್ರೂಪ್ ಡಿ ನೌಕರರ ಕೊರತೆ ಕಾಡುತ್ತಿದೆ. ವಿದ್ಯಾರ್ಥಿಗಳು ಶೌಚದ ನಂತರ ನೀರು ಹಾಕುತ್ತಾರೆ, ಅದೇ ಸಾಕು ಎಂಬ ವಾದವಿದೆ. ಆದರೆ, ಶೌಚಾಲಯದ ಸ್ವಚ್ಛತೆಗೆ ಅಷ್ಟು ಮಾತ್ರ ಸಾಲದು.



ಉದಯವಾಹಿನಿ ಚಿತ್ರ

ಪ್ರಸ್ತುತ ತಾಲ್ಲೂಕಿನ ಬಾಳಗಡಿಯ ಸರಕಾರಿ ಪ್ರೌಢಶಾಲೆಯಲ್ಲಿ ಮಾತ್ರ ಒಬ್ಬ ಗ್ರೂಪ್ ಡಿ ನೌಕರ ಇದ್ದಾರೆ. ಉಳಿದಂತೆ ಯಾವುದೇ ಸರಕಾರಿ ಶಾಲೆಯಲ್ಲೂ ಇಲ್ಲ. ಬಹುತೇಕ ಸರಕಾರಿ ಶಾಲೆಗಳಲ್ಲಿ ಗುಮಾಸ್ತ, ಸಹಾಯಕ ಮತ್ತಿತರ ಹುದ್ದೆಗಳು ಖಾಲಿ ಬಿದ್ದು ಹಲವು ವರ್ಷಗಳಾಗಿವೆ. ಆದರೆ, ಗ್ರೂಪ್ ಡಿ ನೌಕರರ ಕೊರತೆಯ ಪರಿಣಾಮವು ನೇರವಾಗಿ ವಿದ್ಯಾರ್ಥಿಗಳ ಮೇಲಾಗುತ್ತಿದೆ.

### ಸಾದಿಲ್ವಾರು ಅನುದಾನದ ಬಳಕೆ

**ಸರಕಾರದಿಂದ ಶಾಲೆಗೆ ಸಾದಿಲ್ವಾರು ಅನುದಾನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬಿಡುಗಡೆಯಾಗುತ್ತದೆ. ಅದರಿಂದ ಸ್ವಲ್ಪ ಮೊತ್ತವನ್ನು ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿಯ ಗ್ರೂಪ್ ಡಿ ನೌಕರರಿಗೆ ನೀಡುವ ವ್ಯವಸ್ಥೆಯಾದಲ್ಲಿ ಅವರು ವಾರದಲ್ಲಿ ಒಂದೆರೆಡು ಬಾರಿ ಶೌಚಾಲಯ ನಿರ್ವಹಣೆಯನ್ನು ಮಾಡಬಹುದಾಗಿದೆ. ಇದರ ಹೊರತಾಗಿ ಸ್ಥಳೀಯ ಆಡಳಿತವೇ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಸರಕಾರಿ ಶಾಲೆಗಳ ಶೌಚಾಲಯಗಳ ನಿರ್ವಹಣೆ ಮುಂದಾಗಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.**

> **ಸರಕಾರ ಗ್ರೂಪ್ ಡಿ ನೌಕರರನ್ನು ನೇಮಿಸಬೇಕು. ನಾವು ನಮ್ಮ ಮನೆಯಲ್ಲಿ ಮಕ್ಕಳಿಂದ ಅಂತಹ ಯಾವುದೇ ಕೆಲಸ ಮಾಡಿಸುವುದಿಲ್ಲ. ಮಕ್ಕಳ ಹಕ್ಕು ಕೋಶ ಇದೆ ಎಂದು ಕೇಳಿದ್ದೇವೆ. ಆದರೆ, ಅವರು ಇಂತಹ ವಿಚಾರವನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಆಶ್ಚರ್ಯವಾಗಿದೆ. -ಹೆಸರು ಹೇಳಲು ಇಚ್ಚಿಸದ ಪೋಷಕರು, ಸರಕಾರಿ ಶಾಲೆಗಳು, ಕೊಪ್ಪ ತಾಲ್ಲೂಕು.**

ಸರಕಾರಿ ಶಾಲೆಗೆ ಬಡಜನರ ಮಕ್ಕಳೇ ಸೇರುವುದರಿಂದ ಅವರಲ್ಲಿ ಪ್ರತಿಭಟಿಸುವ ಶಕ್ತಿ ಇಲ್ಲ. ತಮ್ಮ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗಬಹುದು ಎಂಬ ಭಯದಿಂದ ಯಾರೂ ಇಂತಹ ವಿಚಾರಗಳನ್ನು ಪ್ರಸ್ತಾಪಿಸುವುದಿಲ್ಲ. ಸ್ಥಳೀಯ ಕರ್ನಾಟಕ ಪ್ಲಬಿಕ್ ಸ್ಕೂಲ್‌ನ ಪದವಿ ಪೂರ್ವ ಕಾಲೇಜು ವಿಭಾಗದಲ್ಲಿ ಶೌಚಾಲಯವಿದ್ದು, ಅದರ ಸ್ವಚ್ಛತೆ ಬಗ್ಗೆಯೂ ದೂರುಗಳಿವೆ.

• ಯುಎಸ್ ಬೆದರಿಕೆಗಳ ನಡುವೆ ಇರಾನ್‌ನಲ್ಲಿ ಮತ್ತೆ ಶುರುವಾಯ್ತು ವಿದ್ಯಾರ್ಥಿ ಪ್ರತಿಭಟನೆ

# ಆಂತರಿಕ-ಬಾಹ್ಯ ಒತ್ತಡದ ನಡುವೆ ಖಮೇನಿಗೆ ಅಗ್ನಿಪರೀಕ್ಷೆ ಫಿಕ್ಸ್?

**ಟೆಹ್ರಾನ್:** ಅಮೆರಿಕಾ ಇರಾನ್ ಮಧ್ಯೆ ಸಂಘರ್ಷ ಈಗಾಗಲೇ ತಾರಕಕ್ಕೇರಿದೆ. ಉಭಯದೇಶಗಳ ನಡುವಿನ ಹಲವು ವರ್ಷಗಳ ಶೀತಲ ಸಮರ ಯುದ್ಧಕ್ಕೆ ಕಾಲುಕೆರೆದು ಸರ್ವಸನ್ನದ್ಧವಾಗುವಂತೆ ಮಾಡುವಲ್ಲಿ ಇರಾನ್ ನಲ್ಲಿ ಭುಗಿಲೆದಿದ್ದ ಸಾರ್ವಜನಿಕರ ಆಕ್ರೋಶವೇ ಅಡಿಪಾಯವಾಗಿತ್ತು ಎಂಬ ವಿಚಾರ ಬಹುಶಃ ಎಲ್ಲರಿಗೂ ತಿಳಿದಿದೆ. ಆದರೆ, ಈ ಆಂತರಿಕ ಸಂಘರ್ಷ ಕೊಂಚ ಮಟ್ಟಿಗೆ ಶಾಂತವಾಗುವಂತೆ ಮಾಡಿ ಇರಾನ್ ಪ್ರತಿಭಟನಾಕಾರರ ಸದ್ದಡಗಿಸುತ್ತು. ಆದರೆ, ಸದ್ಯ ಇದು ಮತ್ತೆ ಭುಗಿಲೆದಿದ್ದು, ಇರಾನ್‌ನ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ನಲ್ಲಿ ಸರ್ಕಾರಿ ವಿರೋಧಿ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದ್ದಾರೆ.

**ಸೆಮಿಸ್ಟರ್ ಆರಂಭದಲ್ಲೇ ಇರಾನಿ ವಿದ್ಯಾರ್ಥಿಗಳ ಪ್ರತಿಭಟನೆ**

ಮೊದಲು ಆಂತರಿಕವಾಗಿ ಜನಾಕ್ರೋಶದಿಂದ ಆರಂಭವಾಗಿ, ಇರಾನ್ ಬಿಕ್ಕಟ್ಟು ನಂತರ ಶೀಘ್ರವೇ ಅಮೆರಿಕಾ-ಇರಾನ್ ನಡುವಿನ ಸಂಘರ್ಷವಾಗಿ ಸದ್ಯ ಯುದ್ಧ ಯಾವಾಗ ಬೇಕಾದರೂ ನಡೆಯುವ ಸಂಭವನೀಯತೆಗಳು ಹೆಚ್ಚಾಗಿದೆ. ಈ ನಡುವೆ ಹೊಸ ಸೆಮಿಸ್ಟರ್ ಆರಂಭವಾಗುತ್ತಿದ್ದಂತೆ ವಿಶ್ವವಿದ್ಯಾಲಯಗಳಿಗೆ ಬಂದಿರುವ ಇರಾನ್‌ನ ಟೆಹ್ರಾನ್, ಮಶಾದ್ ಸೇರಿದಂತೆ ಹಲವು ಪ್ರಮುಖ ಕಾಲೇಜುಗಳ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳು ಮೊದಲ ದಿನವೇ ಖಮೇನಿ ಸರ್ಕಾರದ ವಿರುದ್ಧ ಪ್ರತಿಭಟನೆಗಿಳಿದಿದ್ದಾರೆ.

ಹೀಗೆ ಟೆಹ್ರಾನ್ ನ ಶರೀಫ್ ತಂತ್ರಜ್ಞಾನ ವಿಶ್ವವಿದ್ಯಾಲಯ, ಸೇರಿದಂತೆ ಹಲವು ಕಡೆ ಸೆಮಿಸ್ಟರ್ ಆರಂಭದ ಮೊದಲ ದಿನವೇ ವಿದ್ಯಾರ್ಥಿಗಳು ತರಗತಿಯ ಕೋಣೆಗಳನ್ನು ಬಿಟ್ಟು ಕ್ಯಾಂಪಸ್ ಸುತ್ತಲೂ ಜಮಾಯಿಸಿದ್ದು, ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಕೊಲೆಗಾರ ನಾಯಕ, ಸರ್ವಾಧಿಕಾರಿಗೆ ಸಾವು, ನಮಗೆ ಸ್ವಾಂತಂತ್ರ್ಯ ಬೇಕು, ಫಾರ್ಸಿ ಭಾಷೆಯಲ್ಲಿ ಬೈ ಶರಫ್ ಎಂದರೆ ಅವಮಾನಕರ ಎಂದೆಲ್ಲಾ ಘೋಷಣೆಗಳನ್ನು ಕೂಗುತ್ತಿದ್ದಾರೆ. ಸದ್ಯ ಈ ವಿಡಿಯೋಗಳು ಸಾಕಷ್ಟು ವೈರಲ್ ಆಗುತ್ತಿವೆ. ಸದ್ಯ ಖಮೇನಿ ಸರ್ಕಾರದ ಪರಿಸ್ಥಿತಿ ಅಡಕತ್ತರಿಯಲ್ಲಿ ಸಿಲುಕಿದಂತಾಗಿದ್ದು, ಒಂದೆಡೆ ಈಗಾಗಲೇ ಅಮೆರಿಕಾದಿಂದ ಬಾಹ್ಯ ಒತ್ತಡ ಜೋರಾಗಿದ್ದು, 15 ದಿನಗಳ ಡೆಡ್ ಲೈನ್ ಕೊಟ್ಟಿದೆ.

**ಅಮೆರಿಕಾದಿಂದ ಹೆಚ್ಚಿದ ಒತ್ತಡ**

**ಈ ಪ್ರತಿಭಟನೆಗಳು ಮತ್ತೆ ಆರಂಭವಾಗುತ್ತಿದ್ದು, ಇದು ಕೇವಲ ಕ್ಯಾಂಪಸ್‌ಗಳಿಗೆ ಮಾತ್ರವಲ್ಲದೆ, ಶೀಘ್ರವೇ ಜನಸಾಮಾನ್ಯರಲ್ಲಿಯೂ ಸಹ ಹಬ್ಬುವ ಸಾಧ್ಯತೆಯಿದ್ದು ಇರಾನ್‌ನ ಬೀದಿಗಳಲ್ಲಿ ಮತ್ತೆ ಭುಗಿಲೆಳುವ ಸಾಧ್ಯತೆಗಳಿವೆ ಎಂದು ವಿಶ್ಲೇಷಕರು ಅಭಿಪ್ರಾಯಪಡುತ್ತಿದ್ದಾರೆ. ಈದಕ್ಕೆ ಕಾರಣ ಇರಾನ್ ವಿದ್ಯಾರ್ಥಿ ಪ್ರತಿಭಟನೆಗಳ ಇತಿಹಾಸ. ಈವರೆಗೂ ಇರಾನ್ ನಲ್ಲಿ ನಡೆದ ಬಹುತೇಕ ಆಕ್ರೋಶದ ಪ್ರತಿಭಟನೆಗಳು ಯುವ ಸಮುದಾಯದಿಂದಲೇ ಆರಂಭವಾಗಿದ್ದು, ಅದರಲ್ಲೂ ಪ್ರಮುಖವಾಗಿ ಇಸ್ಲಾಮಿಕ್ ಗಣರಾಜ್ಯ ಕಂಡ ಭೀಕರ ಪ್ರತಿಭಟನೆಗಳಾದ 1999 ರ ದಂಗೆ ಹಾಗೂ 2022 ರಲ್ಲಿ ಮಹ್ಸಾ ಅಮಿನಿಯ ಮರಣದ ನಂತರದ ರಾಷ್ಟ್ರವ್ಯಾಪಿ ದಂಗೆ ಎಲ್ಲವೂ ವಿದ್ಯಾರ್ಥಿಗಳ ಅಶಾಂತಿಯಿಂದಲೇ ಆರಂಭವಾಗಿದ್ದು ಎಂಬುದನ್ನು ಗಮನಿಸಬೇಕು.**


ಇದರೊಂದಿಗೆ ಯುದ್ಧಕ್ಕೆ ಸಿದ್ದತೆಗಳನ್ನು ನಡೆಸುತ್ತಾ ಇರಾನ್ ಕರಾವಳಿ ಸಮೀಪದಲ್ಲಿ ಯುಎಸ್ ತನ್ನ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ.ಹೀಗಿರುವಾಗ ಮತ್ತೆ ದೇಶದಲ್ಲಿ ಆಂತರಿಕವಾಗಿ ಪರಿಸ್ಥಿತಿ ಹದಗೆಟ್ಟರೆ ಯುದ್ಧಶುರುವಾಗುವಲ್ಲಿ ಮತ್ತಷ್ಟು ಉತ್ತೇಜನ ನೀಡಲಿದ್ದು ಖಮೇನಿ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಲಿದ್ದಾರೆ ಎಂದು ನೋಡಬೇಕಿದೆ.



- ಇರಾನ್ ನಲ್ಲಿ ಮತ್ತೆ ಶುರುವಾಯ್ತು ವಿದ್ಯಾರ್ಥಿ ಪ್ರತಿಭಟನೆ
- ಇರಾನ್‌ನಾದ್ಯಂತ ಸೆಮಿಸ್ಟರ್ ಆರಂಭದ ಮೊದಲ ದಿನವೇ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದ ವಿದ್ಯಾರ್ಥಿಗಳು
- ಒಂದೆಡೆ ಅಮೆರಿಕಾದ ಬಾಹ್ಯ ಒತ್ತಡ , ಇನ್ನೊಂದೆಡೆ ಆಂತರಿಕವಾಗಿ ಭುಗಿಲೆದ್ದ ವಿದ್ಯಾರ್ಥಿಗಳ ಆಕ್ರೋಶ, ಖಮೇನಿ ಸರ್ಕಾರದ ಪರಿಸ್ಥಿತಿ ಏನು?

**ಮತ್ತೆ ಭುಗಿಲೆಳುತ್ತಾ ಆಂತರಿಕ ದಂಗೆ?**

**ಈ ಪ್ರತಿಭಟನೆಗಳು ಕಳೆದ ತಿಂಗಳು ಜನವರಿಯಲ್ಲಿ ನಡೆದ ತೀವ್ರ ಪ್ರತಿಭಟನೆಗಳ ಬಳಿಕ ಮತ್ತೆ ಆರಂಭವಾಗಿದ್ದು, ಇದು ಕೇವಲ ವಿದ್ಯಾರ್ಥಿಗಳಲ್ಲಿ ತಮ್ಮ ಇಂದಿನ ಸ್ಥಿತಿಯ ಕುರಿತು ಮಾತ್ರವಲ್ಲದೆ, ತಮ್ಮ ಭವಿಷ್ಯಕ್ಕಾಗಿ ಮಾಡುತ್ತಿರುವ ಪ್ರತಿಭಟನೆಗಳಾಗಿವೆ. ಇರಾನ್ ನಲ್ಲಿ ಈಗಾಗಲೇ ಕುಸಿದಿರುವ ಆರ್ಥಿಕ ಪರಿಸ್ಥಿತಿಯೊಂದಿಗೆ ಯುವ ವಿದ್ಯಾರ್ಥಿಗಳು ಪದವಿಧರರಾಗಿ ಹೊರ ಬಂದ ಮೇಲೆ ಉದ್ಯೋಗಗಳು ದೊರೆಯದೆ ಇರುವ ದೇಶಿಯ ಮಾರುಕಟ್ಟೆ ವಿರುದ್ಧ ಸಹ ತಮ್ಮ ಆಕ್ರೋಶ ವ್ಯಕ್ತವಾಗುತ್ತಿದೆ. ಹೀಗಾಗಿಯೇ ಟೆಹ್ರಾನ್ ವಿಶ್ವವಿದ್ಯಾಲಯದ ಗೋಡೆಗಳ ಮೇಲೆ ನಾವು ಅಸ್ತಿತ್ವದಲ್ಲಿಲ್ಲದ ಭವಿಷ್ಯಕ್ಕಾಗಿ ಅಧ್ಯಯನ ಮಾಡುತ್ತೇವೆ ಎಂದು ಫಲಕಗಳನ್ನು ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.**



## ಭಾರತ-ಬ್ರೇಜಿಲ್ ನಡುವೆ 20 ಶತಕೋಟಿ ಡಾಲರ್ ವ್ಯಾಪಾರಕ್ಕೆ ಒಪ್ಪಂದ



**ನಾವು ಜಾಗತಿಕ ದಕ್ಷಿಣದ ಎರಡು ದೊಡ್ಡ ಪ್ರಜಾಪ್ರಭುತ್ವ ದೇಶಗಳು**

**ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾಡ ಸಿಲ್ವಾ ಮಾತನಾಡಿ, ನನ್ನ ಪ್ರಿಯ ಸ್ನೇಹಿತ ಮೋದಿ ಅವರೇ, ಭಾರತಕ್ಕೆ ಇದು ನನ್ನ 6ನೇ ಭೇಟಿ. ಇಲ್ಲಿಗೆ ಪ್ರತಿ ಬಾರಿ ಬರಲು ಸಂತೋಷವಿದೆ. ಎರಡೂ ರಾಷ್ಟ್ರಗಳ ನಡುವಿನ ಸಭೆಯು ಅತ್ಯುನ್ನತ ಅಂಶಗಳಿಂದ ಕೂಡಿದೆ. ನಾವು ಜಾಗತಿಕ ದಕ್ಷಿಣದ ಎರಡು ದೊಡ್ಡ ಪ್ರಜಾಪ್ರಭುತ್ವ ದೇಶಗಳು. ನವೀಕರಿಸಬಹುದಾದ ಇಂಧನದ ಸೂಪರ್ ಪವರ್ ಹೊಂದಿರುವ ರಾಷ್ಟ್ರಗಳೂ ಹೌದು. ನಾವಿಬ್ಬರೂ ವೈವಿಧ್ಯಮಯ ದೇಶಗಳು ಮತ್ತು ಸಾಂಸ್ಕೃತಿಕ ಉದ್ಯಮದ ಕೇಂದ್ರಗಳು. ವೈವಿಧ್ಯತೆ ಮತ್ತು ಶಾಂತಿಯನ್ನು ರಕ್ಷಿಸುವ ರಾಷ್ಟ್ರಗಳು ಎಂದು ಬಣ್ಣಿಸಿದರು.**

**ನವದೆಹಲಿ:** ಮುಂದಿನ 5 ವರ್ಷಗಳಲ್ಲಿ 20 ಶತಕೋಟಿ ಡಾಲರ್‌ಗೂ ಹೆಚ್ಚಿನ ದ್ವಿಪಕ್ಷೀಯ ವ್ಯಾಪಾರ ನಡೆಸಲು ಭಾರತ- ಬ್ರೇಜಿಲ್ ಗುರಿಯನ್ನು ನಿಗದಿಪಡಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾಡ ಸಿಲ್ವಾ ಅವರೊಂದಿಗೆ ನಡೆಸಿದ ದ್ವಿಪಕ್ಷೀಯ ಮಾತುಕತೆ ಸಂದರ್ಭದಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಭವಿಷ್ಯಕ್ಕಾಗಿ ಡಿಜಿಟಲ್ ಪಾಲುದಾರಿಕೆ, ಭೂಮಿಯ ಮೇಲಿನ ಅಪರೂಪದ ಮತ್ತು ನಿರ್ಣಾಯಕ ಖನಿಜಗಳ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಉಕ್ಕಿನ ಸರಬರಾಜು ಸರಪಳಿಯಲ್ಲಿ ಗಣಿಗಾರಿಕೆ ಕ್ಷೇತ್ರದಲ್ಲಿ ಸಹಕಾರದ ಕುರಿತು 3 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಮುಂದಿನ 5 ವರ್ಷಗಳಲ್ಲಿ ಭಾರತವು ದ್ವಿಪಕ್ಷೀಯ ವ್ಯಾಪಾರವನ್ನ 20 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಕೊಂಡೊಯ್ಯಲು ಬದ್ಧವಾಗಿದೆ ಎಂದು ಹೇಳಿದರು.

ಭೂಮಿಯ ಮೇಲಿನ ಅಪರೂಪದ ಮತ್ತು ನಿರ್ಣಾಯಕ ಖನಿಜಗಳ ಒಪ್ಪಂದವು ಬಲವಾದ ಪೂರೈಕೆ ಸರಪಳಿಯನ್ನು ನಿರ್ಮಿಸುವತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ಇದರೊಂದಿಗೆ ರಕ್ಷಣಾ ಸಹಕಾರವು ಸ್ಥಿರವಾಗಿ ಬೆಳೆಯುತ್ತಿದೆ ಎಂದ ಪ್ರಧಾನಿ, ಬ್ರೆಜಿಲ್‌ಗೆ ಕೈಗೆಟುಕುವ ಮತ್ತು ಗುಣಮಟ್ಟದ ಔಷಧಿಗಳ ಪೂರೈಕೆ ಹೆಚ್ಚಿಸುವ ಮತ್ತು ಆಯುರ್ವೇದ ಉತ್ತೇಜಿಸುವ ಬಗ್ಗೆಯೂ ಚರ್ಚಿಸಿದರು. ತಮ್ಮದೇ ಕರೆನ್ಸಿಯಲ್ಲಿ

ವ್ಯಾಪಾರಸಹಜವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯ ವಹಿವಾಟುಗಳು ಡಾಲರ್ ಮೂಲಕ ನಡೆಯುತ್ತವೆ. ಆದ್ರೆ ಭಾರತ ಮತ್ತು ಬ್ರೆಜಿಲ್ ನಡುವೆ ತಮ್ಮದೇ ಆದ ಕರೆನ್ಸಿಗಳಲ್ಲಿ ವ್ಯಾಪಾರ ಮಾಡಬಹುದಾಗಿದೆ. ಇದರಿಂದ ಅಮೆರಿಕದ ಡಾಲರ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಎಂದು ಲೂಲಾ ಹೇಳಿದರು. 5 ವರ್ಷದಲ್ಲಿ 20 ಶತಕೋಟಿ ವ್ಯಾಪಾರ ಗುರಿ 2025 ರ ಜುಲೈನಲ್ಲಿ ಪ್ರಧಾನಿ ಮೋದಿ ಬ್ರೆಜಿಲಿಯಾಕ್ಕೆ ಭೇಟಿ ನೀಡಿದ್ದ ಸಮಯದಲ್ಲಿ ಉಭಯ ದೇಶಗಳು 2030 ರ ವೇಳೆಗೆ 20 ಶತಕೋಟಿ ಡಾಲರ್ ವ್ಯಾಪಾರ ಗುರಿ ನಿಗದಿಪಡಿಸಿದ್ದವು.

ಈ ದ್ವಿಪಕ್ಷೀಯ ವ್ಯಾಪಾರವು 2025 ರಲ್ಲೇ 15 ಶತಕೋಟಿ ಡಾಲರ್ ತಲುಪಿತ್ತು, ಬ್ರೇಜಿಲ್‌ನಲ್ಲಿ ಭಾರತೀಯ ಹೂಡಿಕೆ 15 ಶತಕೋಟಿ ಡಾಲರ್ ಮೀರಿದೆ. ಇಂಧನ ಸಹಕಾರವು ಪ್ರಬಲವಾಗಿದೆ. ಅಲ್ಲದೇ ಡಿಜಿಟಲ್ ತಂತ್ರಜ್ಞಾನ, ಸೆಮಿಕಂಡಕ್ಟರ್‌ಗಳು ಮತ್ತು ಪಾವತಿ ವ್ಯವಸ್ಥೆಗಳಲ್ಲಿ ಸಹಕಾರವು ವಿಸ್ತರಿಸುತ್ತಿದೆ.

## ಕಾಂಗ್ರೆಸ್ಸಿಗರ ಅರೆಬೆತ್ತಲೆ ಪ್ರತಿಭಟನೆ ಖಂಡಿಸಿದ ಅಖಿಲೇಶ್

**ಲಕ್ನೋ:** ಸಮಾಜವಾದಿ ಪಕ್ಷದ ಮುಖ್ಯಸ್ಥ ಮತ್ತು ಇಂಡಿಯಾ ಒಕ್ಕೂಟದ ಅಂಗವಾಗಿರುವ ಅಖಿಲೇಶ್ ಯಾದವ್ ಅವರು ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾರತೀಯ ಯುವ ಕಾಂಗ್ರೆಸ್ ನಡೆಸಿದ ಶರ್ಟ್‌ಲೆಸ್ ಪ್ರತಿಭಟನೆಯನ್ನು ಟೀಕಿಸಿದ್ದಾರೆ. ಇದು ರಾಷ್ಟ್ರಕ್ಕೆ ಅವಮಾನ ತಂದಿದೆ ಎಂದು ಹೇಳಿದ್ದಾರೆ.ಝೂನ್ಸಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಖಿಲೇಶ್ ಯಾದವ್, ಭಾರತ್ ಮಂಟಪದಲ್ಲಿ ವಿದೇಶಿ ಪ್ರತಿನಿಧಿಗಳ ಮುಂದೆ ಕಾಂಗ್ರೆಸ್ ಇಂತಹ ಕೃತ್ಯದಿಂದ ದೂರವಿರಬೇಕಿತ್ತು ಎಂದು ಹೇಳಿದರು.

ನಮ್ಮಲ್ಲಿ ಆಂತರಿಕ ಬಿರುಕುಗಳಿರಬಹುದು ಬಿಜೆಪಿ ಸುಳ್ಳು ಹೇಳುತ್ತಿದೆ ಎಂದು ಇಡೀ ರಾಷ್ಟ್ರಕ್ಕೆ ತಿಳಿದಿದೆ. ಆದರೆ, ವಿದೇಶಿ ಪ್ರತಿನಿಧಿಗಳು ಮತ್ತು ವಿಶ್ವ ಪ್ರತಿನಿಧಿಗಳ ಮುಂದೆ ನಮ್ಮ ದೇಶಕ್ಕೆ ಅವಮಾನ ತರುವ ಕೆಲಸವನ್ನು ಅವರು ಮಾಡದಂತೆ ತಡೆಯಬೇಕಿತ್ತು ಎಂದು ಎಸ್‌ಪಿ ಮುಖ್ಯಸ್ಥರು ಹೇಳಿದರು. ಯುವ ಕಾಂಗ್ರೆಸ್ ಕಾರ್ಯಕರ್ತರು ಸ್ಥಳದೊಳಗೆ ಶರ್ಟ್‌ಗಳಿಲ್ಲದೆ ಪ್ರತಿಭಟನೆ ನಡೆಸಿದರು, ರಾಜಿ ಮಾಡಿ ಕೊಂಡ ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿ ಸಿಕೊಂಡು ಪ್ರತಿಭಟನಾ ಸಂದೇಶಗಳನ್ನು ಹೊಂದಿರುವ ಟಿ-ಶರ್ಟ್‌ಗಳನ್ನು ಬೀಸಿದರು.ಈ ಪ್ರತಿಭಟನೆ ರಾಜಕೀಯ ವಾಗ್ವಾದಕ್ಕೆ ಕಾರಣವಾಯಿತು, ಇದು ಪುದುಚೇರಿ ಮತ್ತು ಇಂದೋರ್‌ನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಪ್ರತಿ-ಪ್ರತಿಭಟನೆಗಳು ಮತ್ತು ಘರ್ಷಣೆಗಳಿಗೆ ಕಾರಣವಾಯಿತು. ಒಂದು ದಿನ ಮೊದಲು, ಬಿಜೆಪಿ ಸಂಸದ ಅನುರಾಗ್ ಠಾಕೂರ್ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮತ್ತು ಯುವ ಕಾಂಗ್ರೆಸ್ ಅನ್ನು ಭಾರತ ವಿರೋಧಿ ಎಂದು ಕರೆದರು.ಠಾಕೂರ್ ವರದಿಗಾರರೊಂದಿಗೆ ಮಾತನಾಡುತ್ತಾ, ಅವರು ಪ್ರಜಾಪ್ರಭುತ್ವದ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವರು ಮೋದಿ ವಿರೋಧಿಗಳೇ ಅಥವಾ ಈಗ ಅವರು ಭಾರತ ವಿರೋಧಿಗಳೇ ಕಾಂಗ್ರೆಸ್ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತವನ್ನು ಕೆಣಕುತ್ತಿದೆ. ಇದು ಯಾವ ರೀತಿಯ ರಾಜಕೀಯ ಮೋದಿಯನ್ನು ವಿರೋಧಿಸುತ್ತಿರುವ ರಾಹುಲ್ ಗಾಂಧಿ, ಭಾರತವನ್ನು ವಿರೋಧಿಸಲು ಪ್ರಾರಂಭಿಸಿದ್ದಾರೆ.

ಏತನ್ಮಧ್ಯೆ, ಕಾಂಗ್ರೆಸ್ ನಾಯಕರು ಯುವ ಕಾಂಗ್ರೆಸ್‌ನ ನಡೆಯನ್ನು ಸಮರ್ಥಿಸಿಕೊಳ್ಳಲು ಮುಂದೆ ಬಂದರು. ಭಾರತೀಯ ಯುವ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯ ವಿಧಾನವು ಸರಿಯಾದ ಮನೋಭಾವ ದಲ್ಲಿಲ್ಲದಿರಬಹುದು, ಆದರೆ ಕಾರ್ಯಕ್ರಮದಲ್ಲಿ ಚೀನಾದ ಉತ್ಪನ್ನಗಳ ಪ್ರದರ್ಶನದ ಸುತ್ತಲಿನ ವಿವಾದದ ಬಗ್ಗೆ ಬಿಜೆಪಿ ಮುಜುಗರಕ್ಕೊಳಗಾಗಬೇಕು ಎಂದು ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



## ದಾಳಿಗೆ ಸಂಚು: 8 ಮಂದಿ ಸಂಚುಕೋರರ ಬಂಧನ

**ನವದೆಹಲಿ:** ದೇಶದಲ್ಲಿ ಭಾರಿ ಉಗ್ರ ದಾಳಿ ನಡೆಸಲು ಸಂಚು ರೂಪಿಸಲಾಗಿದ್ದ ಸಂಚುನ್ನು ಭೇದಿಸಿರುವ ದೆಹಲಿ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ. ಉಗ್ರರು ದಾಳಿ ನಡೆಸುವ ಕುರಿತು ಗುಪ್ತಚರಸಂಸ್ಥೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಕಾರ್ಯಚರಣೆ ನಡೆಸಿ 8 ಮಂದಿ ಸಂಚುಕೋರರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರ ಜಾಲವು ಪಾಕಿಸ್ತಾನದ ಗುಪ್ತಚರ ಸಂಸ್ಥೆ (ಐಎಸ್‌ಐ) ಹಾಗೂ ಬಾಂಗ್ಲಾದೇಶ ಮೂಲದ ಅತಿರೇಕಿ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿತ್ತು ಎಂದು ಮೂಲಗಳು ತಿಳಿಸಿವೆ. ತಮಿಳುನಾಡಿನ ತಿರುಪ್ಪೂರು ಜಿಲ್ಲೆಯ ಗಾರ್ಮೆಂಟ್ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಮಿಜಾ ರೆಹಮಾನ್ ಮೊಹಮ್ಮದ್ ಶಾಬತ್, ಉಮರ್, ಮೊಹಮ್ಮದ್ ಲಿತಾನ್, ಮೊಹಮ್ಮದ್ ಶಾಹಿದ್ ಹಾಗೂ ಮೊಹಮ್ಮದ್ ಉಜ್ಜಲ್ ಸೇರಿದಂತೆ ಆರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಇನ್ನಿಬ್ಬರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ಕೆಲವರು ಬಾಂಗ್ಲಾದೇಶ ಪ್ರಜೆಗಳಾಗಿದ್ದು, ತಮ್ಮ ಗುರುತು ಮರೆಮಾಚಲು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸುತ್ತಿದ್ದರೆಂದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಕಾರ್ಯಾಚರಣೆಯ ವೇಳೆ ಎಂಟು ಮೊಬೈಲ್ ಫೋನ್‌ಗಳು ಹಾಗೂ 16 ಸಿಮ್ ಕಾರ್ಡ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಡಿಜಿಟಲ್ ಸಾಕ್ಷ್ಯಗಳ ಪರಿಶೀಲನೆ ನಡೆಯುತ್ತಿದೆ. ಇದಕ್ಕೂ ಮುನ್ನ ರಾಷ್ಟ್ರೀಯ ರಾಜಧಾನಿಯಲ್ಲಿ ಪಾಕಿಸ್ತಾನ ಆಧಾರಿತ ಉಗ್ರ ಸಂಘಟನೆ (ಎಲ್‌ಇಟಿ) ದಾಳಿ ಸಂಚು ರೂಪಿಸುತ್ತಿದೆ ಎಂಬ ಗುಪ್ತಚರ ಮಾಹಿತಿ ಲಭಿಸಿತ್ತು. ಚಾಂದಿನಿ ಚೌಕ್ ಪ್ರದೇಶದ ದೇವಾಲಯ ಸೇರಿದಂತೆ ಜನಸಂದಣಿ ಪ್ರದೇಶಗಳು ಹಾಗೂ ದೆಹಲಿ ಮೆಟ್ರೋ ಸುತ್ತಮುತ್ತ ಐಇಡಿ ದಾಳಿ ನಡೆಸುವ ಸಾಧ್ಯತೆಗಳ ಬಗ್ಗೆ ಎಚ್ಚರಿಕೆ ನೀಡಲಾಗಿತ್ತು.




ದೆಹಲಿಯಲ್ಲಿ ಫ್ರೀ ಕಾಶ್ಮೀರ್ ಸೇರಿದಂತೆ ಪ್ರಚೋದನಕಾರಿ ಪೋಸ್ಟರ್‌ಗಳು ಮೆಟ್ರೋ ಜಾಲತಾಣ ಸೇರಿ 10ಕ್ಕೂ ಹೆಚ್ಚು ಕಡೆಗಳಲ್ಲಿ ಪತ್ತೆಯಾಗಿದ್ದವು. ಈ ಪೋಸ್ಟರ್‌ಗಳ ಮೂಲವನ್ನು ಪತ್ತೆಹಚ್ಚುವ ತನಿಖೆಯೇ ತಿರುಪ್ಪೂರಿನ ಜಾಲವನ್ನು ಬೆಳಕಿಗೆ ತಂದಿದೆ ಎಂದು ವಿಶೇಷ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ.

## ಎಲ್ಲಾ ದೇಶಗಳ ಮೇಲಿನ ಹೆಚ್ಚುವರಿ ಸುಂಕ 15% ಗೆ ಹೆಚ್ಚಿಸಿದ ಟ್ರಂಪ್

**ವಾಷಿಂಗ್ಟನ್:** ಯುಎಸ್ ಸುಪ್ರೀಂ ಕೋರ್ಟ್ ಟ್ರಂಪ್ ಸುಂಕ ಕಾನೂನುಬಾಹಿರವೆಂದು ತೀರ್ಪು ನೀಡಿದ ಬೆನ್ನಲ್ಲೇ ಅಸಮಾಧಾನಕ್ಕೆ ಒಳಗಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾಗತಿಕವಾಗಿ ಎಲ್ಲಾ ದೇಶಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದಾರೆ.

ಮೊದಲು 10% ವಿಧಿಸಿದ್ದ ಹೆಚ್ಚುವರಿ ಸುಂಕದ ಪ್ರಮಾಣವನ್ನ ಇದ್ದಕ್ಕಿದ್ದಂತೆ 15% ಗೆ ಏರಿಕೆ ಮಾಡಿದ್ದಾರೆ. ಮತ್ತೆ ತಮ್ಮ ಜಾಗತಿಕ ಸುಂಕ ಯುದ್ಧವನ್ನ ಅತ್ಯಂತ ದೃಢವಾಗಿ ಸಮರ್ಥಿಸಿಕೊಂಡ ಡೊನಾಲ್ಡ್ ಟ್ರಂಪ್, ಅಮೆರಿಕದ ಅಧ್ಯಕ್ಷನಾಗಿ ನಾನು ವಿಶ್ವದಾದ್ಯಂತ ಸುಂಕವನ್ನ ಕಾನೂನುಬದ್ಧವಾಗಿ 10% ರಿಂದ 15% ಗೆ ಹೆಚ್ಚಿಸುತ್ತಿದ್ದೇನೆ ಎಂದು ಘೋಷಿಸಿದ್ದಾರೆ.

ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆಯಾದ ಟ್ರೂತ್ ಸೋಷಿಯಲ್‌ನಲ್ಲಿ ಈ ಕುರಿತು ಬರೆದುಕೊಂಡಿದ್ದಾರೆ. ಯುಎಸ್ ಸುಪ್ರೀಂ ಕೋರ್ಟ್ ಸುಂಕ ನೀತಿ ಬಗ್ಗೆ ಹೊರಡಿಸಿದ್ದ ತೀರ್ಪು ಹಾಸ್ಯಾಸ್ಪದ ಹಾಗೂ ಸಂಪೂರ್ಣ ಅಮೆರಿಕನ್ ವಿರೋಧಿ ನಿರ್ಧಾರವಾಗಿದೆ. ದಶಕಗಳ ಕಾಲ ಹಲವಾರು ದೇಶಗಳು ಅಮೆರಿಕವನ್ನ ಕಿತ್ತುತಿನ್ನುತ್ತಿವೆ. ಇದರಿಂದ ದೇಶವನ್ನ ರಕ್ಷಿಸಲು ಸುಂಕ ವಿಧಿಸುವ ಕ್ರಮ ಕಾನೂನುಬದ್ಧವಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ. ಜೊತೆಗೆ ಹೆಚ್ಚುವರಿ ಸುಂಕವು ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಿದ್ದಾರೆ.



## ಮಧ್ಯಪ್ರಾಚ್ಯವೆಲ್ಲಾ ಇಸ್ರೇಲ್ ಗೆ ಸೇರಿದ್ದು ಎಂದ ಯುಎಸ್ ರಾಯಭಾರಿ ಹೇಳಿಕೆಗೆ ಕೆರಳಿ ಕೆಂಡವಾದ ಮುಸ್ಲಿಂ ರಾಷ್ಟ್ರಗಳು, ಇಸ್ರೇಲ್‌ಗೆ ಯಾವುದೇ ಹಕ್ಕಿಲ್ಲ ಎಂದು ತಿರುಗೇಟು

**ಅಬುದಾಬಿ:** ಜಾಗತಿಕ ಇತಿಹಾಸದಲ್ಲಿ ಮಧ್ಯಪ್ರಾಚ್ಯ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಒಂದು. ಇಲ್ಲಿ ಹೆಚ್ಚಾಗಿ ಯಹೂದಿ, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳ ನಡುವಿನ ಮತೀಯ ಸಂಘರ್ಷಗಳಿಂದಲೇ ಹೆಚ್ಚಾಗಿ ದೇಶಗಳು ಯುದ್ಧಕ್ಕೆ ನಿಲ್ಲುವ ಪರಿಸ್ಥಿತಿ ಇದೆ. ಹೀಗಿರುವಾಗ ಒಂದು ಸಣ್ಣ ಮಾತು ಸಹ ಇಲ್ಲಿ ಜ್ವಾಲಾಗ್ನಿಯನ್ನು ಭುಗಿಲೆಳಿಸಬಹುದು.

ಹೀಗಿರುವಾಗ ಇಸ್ರೇಲ್‌ಗೆ ಅಮೆರಿಕಾದ ರಾಯಭಾರಿಯಾಗಿರುವ ಮೈಕ್ ಹಕಬೀ ಮಧ್ಯಪ್ರಾಚ್ಯದಾದ್ಯಂತ ಇರುವ ಭೂಮಿಯ ಮೇಲೆ ಇಸ್ರೇಲ್‌ಗೆ ಹಕ್ಕಿದ ಎಂಬ ದಾಟಿಯಲ್ಲಿ ಹೇಳಿಕೆ ನೀಡಿರುವುದು ಸದ್ಯ ಈ ಭಾಗದ ಮುಸ್ಲಿಂ ರಾಷ್ಟ್ರಗಳ ಕಣ್ಣು ಕೆಂಪಾಗುವಂತೆ ಮಾಡಿದೆ.

ಇಸ್ರೇಲ್‌ಗೆ ಅಮೆರಿಕಾದ ರಾಯಭಾರಿಯಾಗಿರುವ ಮೈಕ್ ಹಕಬೀಯ ಈ ಹೇಳಿಕೆಗೆ ಮುಸ್ಲಿಂ ರಾಷ್ಟ್ರಗಳು ಖಂಡನೆ ವ್ಯಕ್ತಪಡಿಸಿದ್ದು, ಇದೊಂದು ಅಪಾಯಕಾರಿ ಮತ್ತು ಪ್ರಚೋದನಕಾರಿ ಹೇಳಿಕೆ ಎಂದು ಟೀಕೆ ವ್ಯಕ್ತ ಪಡಿಸಿದ್ದಾರೆ.

## ಮಿನಿ ನ್ಯೂಸ್

### ಬಿಜೆಪಿಗೆ ಸೇರಿದ ಅಸ್ಸಾಂ ಕಾಂಗ್ರೆಸ್‌ನ ಮಾಜಿ ಮುಖ್ಯಸ್ಥ ಭೂಪೇನ್ ಬೋರಾ

**ಗುವಾಹಟಿ:** ಅಸ್ಸಾಂ ಕಾಂಗ್ರೆಸ್‌ನ ಮಾಜಿ ಮುಖ್ಯಸ್ಥ ಭೂಪೇನ್ ಕುಮಾರ್ ಬೋರಾ ಆಡಳಿತಾರೂಢ ಬಿಜೆಪಿಗೆ ಸೇರ್ಪಡೆ ಗೊಂಡರು. ಅಸ್ಸಾಂ ಬಿಜೆಪಿ ಪ್ರಧಾನ ಕಚೇರಿ ವಾಜಪೇಯಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಬೋರಾ ಬಿಜೆಪಿ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರೊಂದಿಗೆ, ಮಾಜಿ ಕಾಂಗ್ರೆಸ್ ಕಾರ್ಯಕರ್ತ ಸಂಜು ಬೋರಾ ಕೂಡ ಕೇಸರಿ ಪಕ್ಷಕ್ಕೆ ಸೇರಿದರು. ಬೋರಾ ಫೆಬ್ರವರಿ 16 ರಂದು ರಾಜೀನಾಮೆ ನೀಡಿದ್ದರು, ಕಾಂಗ್ರೆಸ್ ಹೈಕಮಾಂಡ್ ಅದನ್ನು ಸ್ವೀಕರಿಸಲಿಲ್ಲ ಮತ್ತು ಹಿರಿಯ ನಾಯಕರು ಅವರ ನಿವಾಸಕ್ಕೆ ಧಾವಿಸಿದರು, ಆದರೆ ರಾಹುಲ್ ಗಾಂಧಿ ಕೂಡ ಅವರೊಂದಿಗೆ ಮಾತನಾಡಿದರು.

ತಮ್ಮ ನಿರ್ಧಾರವನ್ನು ಮರುಪರಿಶೀಲಿಸಲು ಅವರು ಸಮಯ ಕೇಳಿದ್ದರು, ಆದರೆ ಮರುದಿನ, ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ನಿವಾಸಕ್ಕೆ ಹೋಗಿ ಫೆಬ್ರವರಿ 22 ರಂದು ಬಿಜೆಪಿಗೆ ಸೇರುವುದಾಗಿ ಘೋಷಿಸಿದರು.126 ಸದಸ್ಯರ ಅಸ್ಸಾಂ ವಿಧಾನಸಭೆಗೆ ಮಾರ್ಚ್-ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ನಿರೀಕ್ಷೆಯಿದೆ.

### ಶರದ್ ಪವಾರ್ ಆಸ್ಪತ್ರೆಗೆ ದಾಖಲು

**ಪುಣೆ:** ಎನ್‌ಸಿಪಿ (ಎಸ್‌ಪಿ) ಪಕ್ಷದ ಅಧ್ಯಕ್ಷ ಶರದ್ ಪವಾರ್ ಅವರನ್ನು ಪುಣೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.85 ವರ್ಷದ ಅವರ ಸ್ಥಿತಿ ಸ್ಥಿರವಾಗಿದೆ. ಸೌಮ್ಯ ನಿರ್ಜಲೀಕರಣದಿಂದಾಗಿ ಅವರನ್ನು ರೂಬಿ ಹಾಲ್ ಚಿಕಿತ್ಸಾಲಯಕ್ಕೆ ದಾಖಲಿಸಲಾಗಿದೆ ಮತ್ತು ಅವರಿಗೆ ಇಂಟ್ರಾವೆನಸ್ ದ್ರವಗಳ ಅಗತ್ಯವಿದೆ ಎಂದಿದ್ದಾರೆ.

ಅವರು ಎರಡು ದಿನಗಳ ಕಾಲ ಆಸ್ಪತ್ರೆಯಲ್ಲಿಯೇ ಇರುತ್ತಾರೆ ಮತ್ತು ನಂತರ ಅವರನ್ನು ಬಿಡುಗಡೆ ಮಾಡುವ ನಿರೀಕ್ಷೆಯಿದೆ ಎಂದು ಮುಖ್ಯ ಹೃದ್ರೋಗ ತಜ್ಞ ಮತ್ತು ಆಸ್ಪತ್ರೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ಟ್ರಸ್ಟಿ ಡಾ. ಪುರ್ವೇಜ್ ಗ್ರಾಂಟ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಡಾ. ಗ್ರಾಂಟ್ ಮತ್ತು ಆಸ್ಪತ್ರೆಯ ಸಲಹಾ ವೈದ್ಯ ಡಾ. ಅಭಿಜಿತ್ ಲೋಢಾ ಅವರ ಚಿಕಿತ್ಸೆಯನ್ನು ಮೇಲ್ವಿಚಾರಣೆ ಮಾಡುತ್ತಿದ್ದರು.ಇದಕ್ಕೂ ಮೊದಲು, ಮಾಜಿ ಕೇಂದ್ರ ಸಚಿವರನ್ನು ಫೆಬ್ರವರಿ 9 ರಂದು ಎದೆ ಸೋಂಕಿನ ನಂತರ ಅದೇ ಆಸ್ಪತ್ರೆಗೆ ದಾಖಲಿಸಲಾಯಿತು ಮತ್ತು ಫೆಬ್ರವರಿ 14 ರಂದು ಅವರನ್ನು ಬಿಡುಗಡೆ ಮಾಡಲಾಗಿತ್ತು.

### ಪೊಲೀಸ್ ವ್ಯಾನ್‌ಗೆ ಟ್ರಕ್ ಡಿಕ್ಕಿ: ಐವರು ಸ್ಥಳದಲ್ಲೇ ಸಾವು, ಮೂವರು ಗಂಭೀರ

**ಝೂರ್ಸುಗುಡಾ:** ಪೊಲೀಸ್ ವ್ಯಾನ್‌ಗೆ ಟ್ರಕ್ ಡಿಕ್ಕಿಯಾಗಿ ಐವರು ದುರ್ಮರಣ ಹೊಂದಿರುವ ಘಟನೆ ಒಡಿಶಾದ ಝೂರ್ಸುಗುಡಾ ಬಳಿ ರಾಷ್ಟ್ರೀಯ ಹೆದ್ದಾರಿ 49ರಲ್ಲಿ ನಡೆದಿದೆ. ಟ್ರಕ್ ಮತ್ತು ಪೊಲೀಸ್ ವ್ಯಾನ್ ಮುಖಾಮುಖಿ ಡಿಕ್ಕಿಯಾಗಿ ದುರಂತ ಸಂಭವಿಸಿದ್ದು, ಐವರು ಪೊಲೀಸರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರ ಗಾಯಗೊಂಡಿರುವ ಮೂವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಎಪಿಆರ್ ಸಿಬ್ಬಂದಿಗಳಾದ ಕಾಶಿರಾಮ್ ಭೋಯಿ ಮತ್ತು ದೇವದತ್ತ ಸಾ, ಡ್ರಿಲ್ ಸಬ್-ಇನ್ಸ್‌ಪೆಕ್ಟರ್ ನಿರಂಜನ್ ಕುಜುರ್, ಎಪಿಆರ್ ಹವಿಲ್ದಾರ್ ಲಿಂಗರಾಜ್ ಧುರೂವಾ ಹಾಗೂ ಹೋಮ್ ಗಾರ್ಡ್ ಭಕ್ತಬಂಧು ಮಿರ್ಧಾ ಮೃತ ದುರ್ದೈವಿಗಳಾಗಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಪೊಲೀಸ್ ವಾಹನವು ಎದುರಿನಿಂದ ವೇಗವಾಗಿ ಬರುತ್ತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ತೀವ್ರತೆಯಿಂದ ಬೊಲೆರೊ ವಾಹನ ಸಂಪೂರ್ಣ ಜಖಂ ಆಗಿರುವ ಪರಿಣಾಮ ಐವರು ಪೊಲೀಸ್ ಸಿಬ್ಬಂದಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಸಿಬ್ಬಂದಿಗಳು ಸೇರಿ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ತಕ್ಷಣ ರಕ್ಷಿಸಿ ಝೂರ್ಸುಗುಡಾ ಜಿಲ್ಲಾ ಮುಖ್ಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆ ಮೂಲಗಳ ಪ್ರಕಾರ, ಅವರ ಸ್ಥಿತಿಯೂ ಗಂಭೀರವಾಗಿದೆ ಎನ್ನಲಾಗಿದೆ.

### ಮದುವೆಗೂ ಮುನ್ನಾ ದಿನ ಅಕ್ಕ-ತಂಗಿ ಆತ್ಮಹತ್ಯೆ

**ಜೈಪುರ್:** ಜೋಧ್‌ಪುರದ ಮನ್ನೈ ಗ್ರಾಮದಲ್ಲಿ ಮದುವೆಗೂ ಮುನ್ನಾ ದಿನವೇ ಇಬ್ಬರು ಸಹೋದರಿಯರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ವಿಷಕಾರಿ ವಸ್ತು ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಶೋಭಾ (25) ಮತ್ತು ವಿಮ್ಲಾ (23) ಅವರ ವಿವಾಹ ನಡೆಯಬೇಕಿತ್ತು. ರಾತ್ರಿ ಅವರ ವಿವಾಹದ ಸಿದ್ಧತೆಗಳು ಭರದಿಂದ ಸಾಗುತ್ತಿದ್ದಾಗ ಈ ಘಟನೆ ನಡೆದಿದೆ. ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಯಿತು. ಇಬ್ಬರೂ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಈ ಮಾಹಿತಿ ತಿಳಿದ ಪೊಲೀಸರು ಸ್ಥಳಕ್ಕೆ ಆಗಮಿಸಿ ಅಂತ್ಯಕ್ರಿಯೆ ವ್ಯವಸ್ಥೆಗಳನ್ನು ಸ್ಥಗಿತಗೊಳಿಸಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಶವಾಗಾರಕ್ಕೆ ಕಳುಹಿಸಲಾಯಿತು. ನಂತರ ಕುಟುಂಬಕ್ಕೆ ಹಿಂತಿರುಗಿಸಲಾಯಿತು. ಸಹೋದರಿಯರು ವಿಷಕಾರಿ ವಸ್ತುವನ್ನು ಸೇವಿಸಿ ಸಾವನ್ನಪ್ಪಿರಬಹುದು ಎಂದು ಪ್ರಾಥಮಿಕ ತನಿಖೆಗಳು ತಿಳಿಸಿವೆ. ಆದಾಗ್ಯೂ, ಮರಣೋತ್ತರ ಪರೀಕ್ಷೆಯ ವರದಿ ಪೂರ್ಣಗೊಂಡ ನಂತರ ಸಾವಿಗೆ ನಿಖರವಾದ ಕಾರಣವನ್ನು ದೃಢಪಡಿಸಲಾಗುವುದು.

# ಅಫ್ಘಾನ್ ಗಡಿಯಲ್ಲಿ ಪಾಕ್ ದಾಳಿಗೆ ತಾಲಿಬಾನಿಗಳ ಪ್ರತೀಕಾರದ ಶಪಥ

• ತನ್ನ ಸಾರ್ವಭೌಮತ್ವ ಮತ್ತು ಅಂತರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಅಫ್ಘಾನಿಸ್ತಾನ ಟೀಕೆ

**ಕಾಬೂಲ್:** ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ನಡುವೆ ಮತ್ತೆ ಸಂಘರ್ಷ ಶುರುವಾಗಿದ್ದು, ಇಸ್ಲಾಮಾಬಾದ್ ನಲ್ಲಿ ಇತ್ತೀಚೆಗೆ ನಡೆದ ಆತ್ಮಾಹುತಿ ಬಾಂಬ್ ದಾಳಿಗೆ ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್(TTP) ಉಗ್ರ ಸಂಘಟನೆಯೇ ಕಾರಣ ಎಂದು ಆರೋಪಿಸಿ ಅಫ್ಘಾನಿಸ್ತಾನದ ಗಡಿ ಭಾಗಗಳಲ್ಲಿರುವ ಅವರ ಉಗ್ರ ಶಿಬಿರಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇದಕ್ಕೆ ಅಫ್ಘಾನಿಸ್ತಾನದ ಖಂಡನೆ ವ್ಯಕ್ತಪಡಿಸಿದ್ದು, ಪಾಕ್ ನಡೆಸಿದ ದಾಳಿಯಲ್ಲಿ ಅಮಯಾಕರನ್ನು ಗುರಿಯಾಗಿಸಿದ್ದು, ಇದು ತನ್ನ ಸಾರ್ವಭೌಮತ್ವ ಮತ್ತು ಅಂತರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಟೀಕಿಸಿದ್ದು, ಇದಕ್ಕೆ ತಕ್ಕ ತಿರುಗೇಟು ನೀಡುವುದಾಗಿ ಎಚ್ಚರಿಕೆ ನೀಡಿದೆ.

ಅಮಾಯಕರನ್ನು ಗುರಿಯಾಗಿಸಿ ಪಾಕ್ ದಾಳಿ ಎಂದು ಆರೋಪ ಇನ್ನು, ದಾಳಿಯ ಪರಿಣಾಮಗಳ ಕುರಿತು ತಿಳಿಸಿರುವ ಅಫ್ಘಾನಿಸ್ತಾನ ಸರ್ಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಪಾಕಿಸ್ತಾನ ಕಳೆದ ರಾತ್ರಿ ಅಫ್ಘಾನಿಸ್ತಾನದ ನಂಘರ್ಹಾರ್ ಹಾಗೂ ಪಕ್ತಿಕಾ ಪ್ರಾಂತ್ಯದಲ್ಲಿರುವ ನಾಗರಿಕ ಪ್ರದೇಶದ ಮೇಲೆ ದಾಳಿ ನಡೆಸಿದೆ. ಈ ದಾಳಿಗಳು ಧಾರ್ಮಿಕ ಸೆಮಿನರಿ ಮತ್ತು ಗಡಿ ಪ್ರದೇಶಗಳಲ್ಲಿನ ಹಲವಾರು ವಸತಿ ಕಟ್ಟಡಗಳನ್ನು ಗುರಿಯಾಗಿಸಿಕೊಂಡು ನಡೆಸಲಾಗಿದ್ದು, ಇದರ ಪರಿಣಾಮವಾಗಿ ಡಜನ್ಗಟ್ಟಲೆ ಅಮಾಯಕ ನಾಗರಿಕರು ಅದರಲ್ಲೂ ಪ್ರಮುಖವಾಗಿ ಮಹಿಳೆಯರು ಹಾಗೂ ಮಕ್ಕಳು ಬಲಿಯಾಗಿದ್ದು, ಗಂಭೀರ ಗಾಯಗಳಿಗೆ ಒಳಗಾಗಿದ್ದಾರೆ ಎಂದು ಎಕ್ಸ್ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ಪಾಕಿಸ್ತಾನದ ಸುದ್ದಿ ಸಂಸ್ಥೆ ಜಿಯೋ ನ್ಯೂಸ್ ಪ್ರಕಾರ, ಪೂರ್ವ ಮತ್ತು ಆಗ್ನೇಯ ಅಫ್ಘಾನಿಸ್ತಾನದಾದ್ಯಂತದ ಸ್ಥಳಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ನಡೆಸಿದ ದಾಳಿಗಳಲ್ಲಿ TTPಯ ಕನಿಷ್ಠ 28 ಮಂದಿ ಸಾವನ್ನಪ್ಪಿದ್ದು, ರಂಜಾನ್ ತಿಂಗಳ ಪ್ರಾರ್ಥನೆಯ ಸಮಯದಲ್ಲಿ ಪಾಕಿಸ್ತಾನದ ಇಸ್ಲಾಮಾಬಾದ್, ಬಜೌರ್ ಹಾಗೂ ಬನ್ನು ಪ್ರದೇಶಗಳನ್ನು TTP ನಡೆಸಿದ ಆತ್ಮಾಹುತಿ ದಾಳಿಗಳ ಪ್ರತೀಕಾರವಾಗಿ ನಡೆಸಲಾಗಿದೆ ಎಂದು ತಿಳಿಸಿದೆ. 3 ಕಡೆಗಳಲ್ಲಿ ನಡೆದಿದ್ದ ಈ ಆತ್ಮಾಹುತಿ ದಾಳಿಗಳಲ್ಲಿ ಸುಮಾರು 40ಕ್ಕೂ ಅಧಿಕ ಜನರು ಸಾವನ್ನಪ್ಪಿದ್ದರು ಎಂಬ ಮಾಹಿತಿ ಇದೆ. ಹೀಗೆ ಉಗ್ರರ ನೆಪವನ್ನು ಹಾಕುತ್ತಾ ಪಾಕಿಸ್ತಾನ ಅಫ್ಘಾನಿಸ್ತಾನದ ಗಡಿಭಾಗದಲ್ಲಿ ನಡೆಸಿರುವ ದಾಳಿಗಳಲ್ಲಿ ಅಮಾಯಕ ಜೀವಗಳು ಬಲಿಯಾಗಿದ್ದು, ಇದರಿಂದಾಗಿ ತಾಲಿಬಾನಿಗಳು ಕೆರಳಿದ್ದು ಈ ಪ್ರದೇಶದಲ್ಲಿ ಮತ್ತೆ ಯುದ್ದದ ಆತಂಕಕ್ಕೆ ಕಾರಣವಾಗಿದೆ.

- ಅಫ್ಘಾನ್ ಗಡಿಭಾಗದಲ್ಲಿ ಪಾಕ್ ವೈಮಾನಿಕ ದಾಳಿಗೆ ಪ್ರತೀಕಾರ ತೆಗೆದುಕೊಳ್ಳುತ್ತೇವೆ ಎಂದು ತಾಲಿಬಾನ್ ಎಚ್ಚರಿಕೆ
- ಅಫ್ಘಾನಿಸ್ತಾನದಲ್ಲಿ ಅಮಾಯಕ ನಾಗರಿರನ್ನು ಗುರಿಯಾಗಿಸಿ ಪಾಕ್ ದಾಳಿ ನಡೆಸಿದೆ ಎಂಬ ಆರೋಪ
- ಪಾಕ್‌ನಲ್ಲಿ ನಡೆದ ಆತ್ಮಹುತಿ ದಾಳಿಗೆ TTP ಮೇಲೆ ಪ್ರತೀಕಾರಕ್ಕೆ ದಾಳಿ ನಡೆಸಲಾಗಿದೆ ಎಂದು ಸಮರ್ಥಿಸಿಕೊಂಡ ಪಾಕಿಸ್ತಾನ




**ಪಾಕಿಸ್ತಾನ ಹೇಳಿದ್ದೇನು?**

**ಈಗಾಗಲೇ ಪಾಕಿಸ್ತಾನ ನಿನ್ನೆ ರಾತ್ರಿ (ಫೆ.22) ನಡೆಸಿದ ದಾಳಿಗಳನ್ನು ದೃಢಿಕರಿಸಿದ್ದು, ಪಾಕಿಸ್ತಾನದ ಮಾಹಿತಿ ಸಚಿವ ಅತಾವುಲ್ಲಾ ತರಾರ್ TTP ಮತ್ತು ಅದರ ಅಂಗಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುವ 7 ಶಿಬಿರಗಳ ವಿರುದ್ಧ ಸೇನೆಯು ಗುಪ್ತಚರ ಆಧಾರಿತ, ಆಯ್ದ ಕಾರ್ಯಾಚರಣೆಗಳನ್ನು ನಡೆಸಿದೆ. ಪಾಕಿಸ್ತಾನ ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಯಾವಾಗಲೂ ಶ್ರಮಿಸುತ್ತಿದೆ, ಆದಾಗ್ಯೂ, ಪಾಕಿಸ್ತಾನಿ ನಾಗರಿಕರ ಸುರಕ್ಷತೆ ಮತ್ತು ಭದ್ರತೆಯು ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಹೇಳಿದ್ದಾರೆ.**

**ಪಾಕ್ ದಾಳಿಗೆ ಅಫ್ಘಾನಿಸ್ತಾನ ಪ್ರತೀಕಾರದ ಶಫಥ**

**ಈ ಕುರಿತು ಅಫ್ಘಾನಿಸ್ತಾನ ತಾಲಿಬಾನ್ ಸರ್ಕಾರದ ರಕ್ಷಣಾ ಸಚಿವಾಲಯ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಪಾಕಿಸ್ತಾನ ನಡೆಸಿದ ದಾಳಿಗಳಲ್ಲಿ ಧಾರ್ಮಿಕ ತಾಣಗಳು ಹಾಗೂ ನಾಗರಿಕರನ್ನು ಟಾರ್ಗೆಟ್ ಮಾಡಿರುವುದು ಪಾಕ್ ಸೇನೆಯಲ್ಲಿನ ಗುಪ್ತಚರ ಹಾಗೂ ಭದ್ರತಾ ವೈಫಲ್ಯಕ್ಕೆ ಸಿಕ್ಕ ಮೊತ್ತೊಂದು ಸ್ಪಷ್ಟ ಸಾಕ್ಷಿಯಾಗಿದ್ದು, ಇಂತಹ ಪುನರಾವರ್ತಿತ ಆಕ್ರಮಣಗಳು ಎಂದಿಗೂ ಅವರ ಆಂತರಿಕ ನ್ಯೂನ್ಯತೆಗಳನ್ನು ಮುಚ್ಚಿಹಾಕಲು ಸಾಧ್ಯವಿಲ್ಲ ಎಂದು ಟೀಕಿಸಿದ್ದಾರೆ. ಅಲ್ಲದೆ, ದೇಶದ ಸಾರ್ವಭೌಮತ್ವ ಹಾಗೂ ನಾಗರಿಕರ ರಕ್ಷಣೆ ತಾಲಿಬಾನ್ ಸರ್ಕಾರದ ರಾಷ್ಟ್ರೀಯ ಹಾಗೂ ಧಾರ್ಮಿಕ ಗುರಿಯಾಗಿದ್ದು, ಪಾಕಿಸ್ತಾನ ಅಮಾಯಕರ ಮೇಲೆ ನಡೆಸಿದ ಈ ದಾಳಿಗಳಿಗೆ ತಾಲಿಬಾನ್ ತಕ್ಕ ಸಮಯದಲ್ಲಿ ಸೂಕ್ತ ಹಾಗೂ ನಿಖರವಾದ ಉತ್ತರದ ಮೂಲಕ ತಿರುಗೇಟು ನೀಡಲಿದೆ ಎಂದು ಎಚ್ಚರಿಕೆ ನೀಡಿದೆ.**

## ರವಿ ಬಸ್ರೂರು ಮಾತ್ರವಲ್ಲ: ಟಾಕ್ಸಿಕ್ ಚಿತ್ರಕ್ಕೆ 5 ಸಂಗೀತ ನಿರ್ದೇಶಕರು; ಜೀ ಮ್ಯೂಸಿಕ್ ತೆಕ್ಕೆಗೆ ಆಡಿಯೋ ಹಕ್ಕು



ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾ ಬಹಳ ದೊಡ್ಡದಾಗಿ ನಿರ್ಮಾಣ ಆಗುತ್ತಿದೆ. ಬಿಡುಗಡೆಗೆ ಕೆಲವೇ ದಿನಗಳು ಬಾಕಿ ಇರುವಾಗ ಚಿತ್ರತಂಡದಿಂದ ಒಂದಷ್ಟು ಮಾಹಿತಿಗಳನ್ನು ಹಂಚಿಕೊಳ್ಳಲಾಗುತ್ತಿದೆ. ಸದ್ಯದಲ್ಲೇ ಈ ಸಿನಿಮಾದ ಹಾಡುಗಳ ಬಿಡುಗಡೆ ಆಗಲಿವೆ. ಪ್ರತಿಷ್ಠಿತ ಜೀ ಮ್ಯೂಸಿಕ್ ಕಂಪನಿಯು ಈ ಸಿನಿಮಾದ ಆಡಿಯೋ ರೈಟ್ಸ್ ಪಡೆದುಕೊಂಡಿದೆ. ಅಂದಹಾಗೆ, ಟಾಕ್ಸಿಕ್ ಸಿನಿಮಾಗಾಗಿ ರವಿ ಬಸ್ರೂರು ಸೇರಿದಂತೆ ಒಟ್ಟು 5 ಮಂದಿ ಸಂಗೀತ ನಿರ್ದೇಶಕರು ಕೆಲಸ ಮಾಡಿದ್ದಾರೆ. ಆ ಕಾರಣದಿಂದ ಯಶ್ ಅಭಿಮಾನಿಗಳಿಗೆ ಈ ಚಿತ್ರದ ಮೇಲೆ ನಿರೀಕ್ಷೆ ಇನ್ನಷ್ಟು ಹೆಚ್ಚಾಗಿದೆ. ಟಾಕ್ಸಿಕ್ ಸಿನಿಮಾದ ಆಲ್ಬಂ ಯಾವ ರೀತಿ ಇರಲಿದೆ ಎಂಬ ಮಾಹಿತಿ ಸಿಕ್ಕಿದೆ.

ಸಿನಿಮಾದ ಮೆರುಗು ಹೆಚ್ಚಿಸಲು ಐವರು ಪ್ರತಿಭಾವಂತ ಸಂಗೀತ ನಿರ್ದೇಶಕರ ಸಮಾಗಮ ಆಗಿದೆ. ಚಿತ್ರದಲ್ಲಿ ಒಟ್ಟು 6 ಹಾಡುಗಳು ಇರಲಿವೆ. ರವಿ ಬಸ್ರೂರು ಅವರು ಹಿನ್ನೆಲೆ ಸಂಗೀತದ ಜತೆಗೆ ಕೇವಲ ಒಂದು ಹಾಡಿಗೆ ಸಂಗೀತ ನೀಡಿದ್ದಾರೆ.

ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕ ವಿಶಾಲ್ ಮಿಶ್ರಾ ಅವರು 4 ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ, ತನಿಷ್ಕ್ ಬಾಗ್ಚಿ ಅವರು ಅರ್ಜುನ್ ನಿಜಾಮಿ ಮತ್ತು ಫಹೀಮ್ ಅಬ್ದುಲ್ಲಾ ಜೊತೆ ಸೇರಿ ಒಂದು ಹಾಡಿಗೆ ಸಂಗೀತ ನೀಡಿದ್ದಾರೆ. ಈ ಎಲ್ಲಾ ಪ್ರತಿಭಾವಂತರ ಸಂಗಮ ಆಗಿರುವುದರಿಂದ 'ಟಾಕ್ಸಿಕ್' ಸಿನಿಮಾದ ಹಾಡುಗಳ ಮೇಲೆ ಹೈಪ್ ಹೆಚ್ಚಾಗಿದೆ. ಗೀತು ಮೋಹನ್ ದಾಸ್ ಅವರು 'ಟಾಕ್ಸಿಕ್' ಸಿನಿಮಾಗೆ ನಿರ್ದೇಶನ ಮಾಡಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆ ಬಂಡವಾಳ ಹೂಡಿದೆ. ಈಗಾಗಲೇ ಬಿಡುಗಡೆ ಆಗಿರುವ ಟೀಸರ್‌ಗಳು ಧೂಳೆಬ್ಬಿಸಿವೆ. ಯಶ್ ಜೊತೆ ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಮುಂತಾದ ಕಲಾವಿದರು ಅಭಿನಯಿಸಿದ್ದಾರೆ. ಮಾರ್ಚ್ 19ರಂದು ಈ ಸಿನಿಮಾ ರಿಲೀಸ್ ಆಗಲಿದೆ. ಟಾಕ್ಸಿಕ್ ಸಿನಿಮಾದ ಕನ್ನಡ, ಹಿಂದಿ, ಮಲಯಾಳಂ, ತೆಲುಗು, ತಮಿಳು ವರ್ಷನ್‌ಗಳ ಆಡಿಯೋ ಹಕ್ಕುಗಳನ್ನು 'ಜೀ ಮ್ಯೂಸಿಕ್' ಕಂಪನಿ ಪಡೆದುಕೊಂಡಿದೆ. ಈ ಬಗ್ಗೆ ಕಂಪನಿಯ ಸುಜಲ್ ಪರೇಖ್ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಇದು ಕೆವಿಎನ್ ಮತ್ತು ಜೀ ಮ್ಯೂಸಿಕ್ ನಡುವಿನ ದೀರ್ಘಾವಧಿ ಸಂಬಂಧದ ಆರಂಭ' ಎಂದು ನಿರ್ಮಾಪಕ ವೆಂಕಟ್ ಕೆ. ನಾರಾಯಣ ಅವರು ಹೇಳಿದ್ದಾರೆ.

## ಚಪ್ಪಲಿ ಎಸೆದಿದ್ದು ಓರಗಿತ್ತಿ ಪ್ರೇಮಾ ಸಾಕ್ಷ್ಯ ಬಯಲು ಮಾಡಿದ ನಟಿ ಕಾವ್ಯ ಗೌಡ



ರಾಧಾ ರಮಣ', 'ಗಾಂಧಾರಿ' ಸೀರಿಯಲ್ ಖ್ಯಾತಿಯ ನಟಿ ಕಾವ್ಯ ಗೌಡ ಮತ್ತು ಓರಗಿತ್ತಿ ಕಲಹ ಮತ್ತೆ ಮುನ್ನೆಲೆಗೆ ಬಂದಿದೆ. ಓರಗಿತ್ತಿ ಪ್ರೇಮಾ ಮಧ್ಯೆ ನಡೆದಿದ್ದ ಗಲಾಟೆಯ ಸಿಸಿಟಿವಿ ಸಾಕ್ಷ್ಯವನ್ನ ನಟಿ ಬಯಲು ಮಾಡಿದ್ದಾರೆ.ನಟಿ ಕಾವ್ಯ ಗೌಡ ಓರಗಿತ್ತಿ ಪ್ರೇಮಾ ಮಧ್ಯೆ ಗಲಾಟೆ ನಡೆದಿತ್ತು. ಸಹೋದರರಾಗಿ ಸೋಮಶೇಖರ್ ನಂದೀಶ್ ಕೈ ಕೈ ಮಿಲಾಯಿಸಿದ್ದರು. ಪ್ರಕರಣ ಪೊಲೀಸ್ ಸ್ಟೇಷನ್ ಮೆಟ್ಟಿಲೇರಿತ್ತು. ಪ್ರೇಮಾ ವಿರುದ್ಧ ಕಾವ್ಯ ಗೌಡ ದೂರು ದಾಖಲಿಸಿದ್ದರು. ಕಾವ್ಯ ಗೌಡ ಮೇಲೆ ಪ್ರೇಮಾ ಸಹ ಪ್ರತಿ ದೂರು ನೀಡಿದ್ದರು. ಈಗ ನೋಡಿದ್ರೆ, ತಮ್ಮ ಮೇಲೆ ಚಪ್ಪಲಿ ಎಸೆದಿದ್ದು, ಹಲ್ಲೆ ಮಾಡಿದ್ದು ಓರಗಿತ್ತಿ ಪ್ರೇಮಾ ಎಂಬುದಕ್ಕೆ ಸಿಸಿಟಿವಿ ಸಾಕ್ಷ್ಯ ಒದಗಿಸಿದ್ದಾರೆ ನಟಿ ಕಾವ್ಯ ಗೌಡ.

ಪ್ಯಾಲೇಸ್‌ನಂತಿರುವ ಮನೆಗಾಗಿ ಆಸೆಪಟ್ಟು ಕಾವ್ಯ ಗೌಡ ಕಿರಿಕ್ ಮಾಡುತ್ತಿದ್ದಾರೆ ಅಂತ ಪ್ರೇಮಾ ದೂರಿದ್ದರು. ನನ್ನ ತಂಗಿಗೆ ಹೊಡೆದಿದ್ದಕ್ಕೆ ನನ್ನ ತಂದೆ ಮನೆ ತನಕ ಬಂದಿದ್ದಾರೆ. ನನ್ನ ತಂದೆಯನ್ನೇ ಕಾವ್ಯ ಗೌಡ ಪತಿ ಸೋಮಶೇಖರ್ ಹೊಡೆದಿದ್ದಾರೆ. ಸೋಮಶೇಖರ್ ಪ್ಯಾಂಟ್ ರಿಮೂವ್ ಮಾಡಿ ಮಿಸ್ ಬಿಹೇವ್ ಮಾಡಿದ್ದಾರೆ. ಕಾವ್ಯ ಅಕ್ಕ ಭವ್ಯಾ ಗೌಡ ನಮ್ಮ ಮೇಲೆ ಅಟ್ಯಾಕ್ ಮಾಡಿದ್ದಾರೆ. ನನ್ನ ತಂಗಿ ಮೇಲೆ ಸೋಮಶೇಖರ್ ಹಲ್ಲೆ ಮಾಡಿ, ಡ್ರೆಸ್ ಹರಿದು ಹಾಕಿ, ರೇಪ್ ಮಾಡ್ತೀನಿ ಅಂತ ಬೆದರಿಕೆ ಹಾಕಿದ್ದಾರೆ. ನಮ್ಮನ್ನ ಮನೆಯಿಂದ ಆಚೆ ಹಾಕೋಕೆ ಕಿರಿಕ್ ಮಾಡುತ್ತಿದ್ದಾರೆ ಎಂದು ಪ್ರೇಮಾ ಮಾಧ್ಯಮಗಳ ಮುಂದೆ ಆರೋಪ ಮಾಡಿದ್ದರು. ಈಗ ಕಾವ್ಯ ಗೌಡ ಕೆಲ ಸಿಸಿಟಿವಿ ದೃಶ್ಯಾವಳಿಗಳನ್ನ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಸಿಸಿಟಿವಿ ವಿಡಿಯೋಗಳಲ್ಲಿ ಕಾವ್ಯ ಗೌಡ ಮೇಲೆ ಪ್ರೇಮಾ ತಂಗಿ ಹಲ್ಲೆ ಮಾಡುತ್ತಿರುವುದು, ಕಾವ್ಯ ಗೌಡ ಮೇಲೆ ಪ್ರೇಮಾ ಚಪ್ಪಲಿ ಎಸೆದಿರುವುದು ಸ್ಪಷ್ಟವಾಗಿದೆ. ನೀವು ಬರೀ ಒನ್ ಸೈಡ್ ಕಥೆ ಮತ್ತು ಸುಳ್ಳು ಆರೋಪಗಳನ್ನ ಮಾತ್ರ ಕೇಳಿದ್ದೀರಿ. ಇದೀಗ ನಾನು ಸತ್ಯವನ್ನ ಹೊರಗೆ ಹಾಕಬೇಕು. ಇದರ ಹಿಂದಿರುವ ಕ್ರೂರ ಮುಖಗಳನ್ನ ನಾನು ಹೊರಗೆ ತರಬೇಕು ಎಂದು ಇನ್ಸ್ಟಾಗ್ರಾಮ್ ಸ್ಟೋರಿಯಲ್ಲಿ ಬರೆದುಕೊಂಡಿದ್ದಾರೆ. ಹಾಗೇ, ''ನಮಸ್ತೆ ಎಲ್ಲರಿಗೂ.. ನಾಲಿಗೆಗೆ ಎಲುಬಿಲ್ಲ ಎಂದುಕೊಂಡು, ಯಾರ ಜೀವನದ ಬಗ್ಗೆ ಏನು ಬೇಕಾದರೂ ಮಾತನಾಡೋದು ನ್ಯಾಯ ಅಲ್ಲ. ಮಾತುಗಳಿಗೂ ಜವಾಬ್ದಾರಿ ಇರಬೇಕು. ನಾನು ಯಾವತ್ತೂ ಮಾಧ್ಯಮದ ಮುಂದೆ ಮಾತನಾಡುವವಳಲ್ಲ. ಮೌನವೇ ನನ್ನ ಉತ್ತರ ಎಂದು ನಂಬಿ ಬದುಕಿದವಳು ನಾನು. ಆದರೆ ಇವತ್ತು ಮಾತನಾಡಬೇಕಾದ ಪರಿಸ್ಥಿತಿ ಬಂದಿದೆ.

## ದೈವನಿಂದನೆ ಕೇಸಲ್ಲಿ ನಟ ರಣವೀರ್ ಸಿಂಗ್‌ಗೆ ನೋಟಿಸ್



ದೈವನಿಂದನೆ ಪ್ರಕರಣದಲ್ಲಿ ಬಾಲಿವುಡ್ ನಟ ರಣವೀರ್ ಸಿಂಗ್‌ಗೆ ನೋಟಿಸ್ ನೀಡಲಾಗಿದೆ. ನೋಟಿಸ್ ನೀಡಿದರೂ ನಟನಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ. ಬಾಲಿವುಡ್ ನಟನಿಗೆ ಈಗಾಗಲೇ ಪೊಲೀಸರು ಎರಡು ನೋಟಿಸ್ ನೀಡಿದ್ದಾರೆ. ಆದರೆ, ಯಾವುದಕ್ಕೂ ಉತ್ತರ ಸಿಕ್ಕಿಲ್ಲ. ಹೀಗಾಗಿ, ಹೈಗ್ರೌಂಡ್ ಪೊಲೀಸರು ಕಾನೂನು ಮೊರೆ ಹೋಗಲು ಮುಂದಾಗಿದ್ದಾರೆ. ರಿಷಬ್ ಶೆಟ್ಟಿ ನಟನೆಯ ಕಾಂತಾರ 2 ಸಿನಿಮಾದ ವಿಚಾರವಾಗಿ ಗೋವಾ ಫಿಲ್ಮ್‌ಫೇರ್ ಕಾರ್ಯಕ್ರಮದಲ್ಲಿ ರಣವೀರ್ ಮಾತನಾಡುವಾಗ ಯಡವಟ್ಟು ಮಾಡಿಕೊಂಡಿದ್ದರು. ದೈವದ ವಿಚಾರವಾಗಿ ಅವಹೇಳನ ಮಾಡಿದ ಬಳಿಕ ಎಂದು ಎಫ್‌ಐಆರ್ ದಾಖಲು ಮಾಡಲಾಗಿತ್ತು. ವಕೀಲ ಪ್ರಶಾಂತ್ ನೀಡಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಕೇಸ್ ದಾಖಲಾಗಿತ್ತು. ಕೇಸ್ ದಾಖಲಾಗಿ 20ಕ್ಕೂ ಹೆಚ್ಚು ದಿನಗಳೇ ಕಳೆದಿದೆ.

ಪೊಲೀಸರು ಎರಡು ಬಾರಿ ನೋಟಿಸ್ ನೀಡಿದ್ದಾರೆ. ನೋಟಿಸ್‌ಗೆ ನಟ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ನಟ ನೀಡಿಲ್ಲ. ಮುಂಬೈನಲ್ಲಿರುವ ರಣವೀರ್ ನಿವಾಸಕ್ಕೆ ಎರಡು ನೋಟಿಸ್ ನೀಡಿರುವ ಪೊಲೀಸರು. ನಟನ ವಾಟ್ಸಪ್ ಗು ನೋಟಿಸ್ ಕಳುಹಿಸಿರುವ ಪೊಲೀಸರು. ಆದ್ರೆ ಯಾವ ನೋಟೀಸ್ ಗು ನಟನಿಂದ ಡೋಂಟ್ ಕೇರ್. ಹೀಗಾಗಿ ಮತ್ತೊಮ್ಮೆ ನೋಟಿಸ್ ನೀಡಲು ಪೊಲೀಸರು ಮುಂದಾಗಿದ್ದಾರೆ.


## ಮದುವೆಗೂ ಮುನ್ನ ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ ಗಡಿಬಿಡಿ; ವಿಡಿಯೋ ವೈರಲ್

ನಟಿ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರ ಮದುವೆ ವಿಷಯ ಈಗ ಗುಟ್ಟಾಗಿ ಉಳಿದಿಲ್ಲ. ಹಲವು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿರುವ ಅವರು ಶೀಘ್ರದಲ್ಲೇ ಹಸೆಮಣೆ ಏರಲಿದ್ದಾರೆ. ಅದಕ್ಕಾಗಿ ಸಕಲ ಸಿದ್ಧತೆ ನಡೆದಿದೆ. ಈಗಾಗಲೇ ಸಿನಿಮಾ ಕೆಲಸಗಳನ್ನು ಬದಿಗಿಟ್ಟು, ಮದುವೆ ತಯಾರಿಯಲ್ಲಿ ಅವರಿಬ್ಬರು ತೊಡಗಿಕೊಂಡಿದ್ದಾರೆ. ಸದ್ಯಕ್ಕಂತೂ ಸಖತ್ ಗಡಿಬಿಡಿ ಮಾಡುತ್ತಿದ್ದಾರೆ.

ಅದಕ್ಕೆ ಸಾಕ್ಷಿ ಎಂಬಂತೆ ಒಂದು ವಿಡಿಯೋ ವೈರಲ್ ಆಗಿದೆ. ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಅವರು ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡಿದ್ದಾರೆ. ರಾಜಸ್ಥಾನದ ಉದಯಪುರದಲ್ಲಿ ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಅವರ ವಿವಾಹ ನಡೆಯಲಿದೆ. ಮದುವೆ ಆಮಂತ್ರಣ ಪತ್ರಿಕೆ ವೈರಲ್ ಆಗಿದೆ.

ಹಾಗಿದ್ದರೂ ಕೂಡ ಅವರು ಸಾರ್ವಜನಿಕವಾಗಿ ಈ ಬಗ್ಗೆ ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ. ಕೇವಲ ಕುಟುಂಬದವರು ಮತ್ತು ಆಪ್ತರ ಸಮ್ಮುಖದಲ್ಲಿ ಮದುವೆ ನಡೆಯಲಿದೆ. ಹಲವು ಸಿನಿಮಾಗಳನ್ನು ಒಪ್ಪಿಕೊಂಡಿರುವ ರಶ್ಮಿಕಾ ಮಂದಣ್ಣ ಅವರು ಈಗ ಬ್ರೇಕ್ ತೆಗೆದುಕೊಂಡಿದ್ದಾರೆ. ವಿಜಯ್ ದೇವರಕೊಂಡ ಕೂಡ ಮದುವೆ ಸಲುವಾಗಿ ಬಿಡುವು ಮಾಡಿಕೊಂಡಿದ್ದಾರೆ. ಅವರಿಬ್ಬರು ಈಗ ಹೈದರಾಬಾದ್‌ನಿಂದ ಬೇರೆ ಕಡೆಗೆ ಹಾರಿದ್ದಾರೆ.

ವಿಮಾನ ನಿಲ್ದಾಣಕ್ಕೆ ಪ್ರತ್ಯೇಕವಾಗಿ ಬಂದ ಅವರು ಪಾಪರಾಜಿಗಳ ಕ್ಯಾಮೆರಾದಲ್ಲಿ ಸೆರೆ ಆಗಿದ್ದಾರೆ. ಸಾಮಾನ್ಯವಾಗಿ ವಿಮಾನ ನಿಲ್ದಾಣದಲ್ಲಿ ಪಾಪರಾಜಿಗಳನ್ನು ನೋಡಿದಾಗ ರಶ್ಮಿಕಾ ಮಂದಣ್ಣ ಅವರು ಪೋಸ್ ನೀಡುತ್ತಾರೆ. ಸಾಧ್ಯವಾದರೆ ಒಂದೆರಡು ಮಾತನಾಡುತ್ತಾರೆ.



ಆಮಂತ್ರಣ ಪತ್ರಿಕೆ ವೈರಲ್

## ಅಂಜನಾದ್ರಿಯಲ್ಲಿ ನಟ ರಿಷಬ್ ಅಭಿನಯದ ಜೈ ಹನುಮಾನ್ ಚಿತ್ರಕ್ಕೆ ಕ್ಲಾಪ್



ಧಾರ್ಮಿಕ ನಂಬಿಕೆಯ ಕಥಾ ಹಂದರವುಳ್ಳ ಕಾಂತಾರ ಮತ್ತು ಕಾಂತಾರ-1 ಚಿತ್ರದ ಬಳಿಕ ಚಂದನವನದ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಯಶಸ್ಸಿನ ಉತ್ತುಂಗದಲ್ಲಿದ್ದಾರೆ. ಇದೀಗ ರಿಷಬ್ ಅಭಿನಯದ ಜೈ ಹನುಮಾನ್ ಚಿತ್ರಕ್ಕೆ ತಾಲ್ಲೂಕಿನ ಚಿಕ್ಕರಾಂಪೂರದ ಬಳಿ ಇರುವ ಅಂಜನಾದ್ರಿ ಬೆಟ್ಟದಲ್ಲಿ ಭಾನುವಾರ ಚಾಲನೆ ಸಿಕ್ಕಿತು.

ಕಾಂತಾರ-1ರ ಚಿತ್ರ ಬಿಡುಗಡೆಯಾಗಿ ಉತ್ತಮ ಸ್ಪಂದನೆ ಸಿಕ್ಕ ಬಳಿಕ ಕಳೆದ ಮೂರು ತಿಂಗಳ ಹಿಂದಷ್ಟೇ ರಿಷಬ್ ಪತ್ನಿ ಪ್ರಗತಿ ಹಾಗೂ ಕುಟುಂಬದ ಜೊತೆ ಅಂಜನಾದ್ರಿಗೆ ಭೇಟಿ ನೀಡಿ, ಪವನಸುತನ ದರ್ಶನ ಪಡೆದು ತೆರಳಿದ್ದರು.

ಇದೇ ಸಂದರ್ಭದಲ್ಲಿ ಆಂಜನೇಯನ ಸನ್ನಿಧಾನದಲ್ಲಿ ಜೈ ಹನುಮಾನ್' ಚಿತ್ರದ ಬಗ್ಗೆ ಸಂಕಲ್ಪ ಮಾಡಿಕೊಂಡಿದ್ದರು. ಇದೀಗ ರಿಷಬ್, ತಾವು ಮಾಡಿಕೊಂಡಿದ್ದ ಸಂಕಲ್ಪದಂತೆ 2024ರಲ್ಲಿ ತೆರೆ ಕಂಡಿದ್ದ 'ಹನುಮಾನ್' ಚಿತ್ರದ ಮುಂದುವರೆದ ಭಾಗವಾಗಿ ಜೈ ಹನುಮಾನ್ ಚಿತ್ರಕ್ಕೆ ಅಂಜನಾದ್ರಿಯಲ್ಲಿ ಕ್ಲಾಪ್ ಮಾಡಿಸಿದ್ದಾರೆ.

ದೇವಸ್ಥಾನದ ಆಡಳಿತಾಧಿಕಾರಿ ಹಾಗೂ ಗಂಗಾವತಿ ತಹಶೀಲ್ದಾರ್ ವಿಶ್ವನಾಥ ಮುರುಡಿ ಚಿತ್ರಕ್ಕೆ ಕ್ಲಾಪ್ ಮಾಡಿದರು. ಬಳಿಕ ನಿರ್ದೇಶಕ ಪ್ರಶಾಂತ್ ವರ್ಮಾ, ಅಂಜನಾದ್ರಿಯ ಬೆಟ್ಟದ ಮೇಲೆಯೇ ಕ್ಯಾಮರಾದ ಸ್ವಿಚ್ ಆನ್ ಮಾಡುವ ಮೂಲಕ ಚಾಲನೆ ನೀಡಿದರು. ಚಿತ್ರ ನಿರ್ಮಾಣದ ಜವಾಬ್ದಾರಿಯನ್ನು ಮೈತ್ರಿ ಮೂವಿ ಮೇಕರ್ಸ್ ಪಡೆದುಕೊಂಡಿದೆ.

ಜೈ ಹನುಮಾನ್ ಚಿತ್ರದ ಕ್ಲಾಪ್ ಕಾರ್ಯಕ್ರಮದ ಹಿನ್ನೆಲೆ ಜಿಲ್ಲಾಧಿಕಾರಿ ಮೂಲಕ ಬೆಟ್ಟದ ಮೇಲೆ ಸಾಂಕೇತಿಕ ಚಿತ್ರೀಕರಣಕ್ಕೆ ಅನುಮತಿ ಪಡದುಕೊಂಡ ಚಿತ್ರದ ತಂಡ, ಮಹೂರ್ತದ ಹಿನ್ನೆಲೆ ಇಡೀ ದೇಗುಲದ ಆವರಣದಲ್ಲಿ ವಿಶೇಷ ಅಲಂಕಾರ ಮಾಡಿಸಿತ್ತು.

ಹನುಮಂತ ದೇವರ ಮೂಲ ವಿಗ್ರಹ ಇರುವ ಗರ್ಭಗುಡಿಯಿಂದ ಹಿಡಿದು ಪ್ರಾಂಗಣ, ಆವರಣ ಸೇರಿದಂತೆ ದೇಗುಲದ ಸುತ್ತಲೂ ನಾನಾ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

## ಭಾರತ ದಕ್ಷಿಣ ಆಫ್ರಿಕಾ ವಿರುದ್ಧ ಹೀನಾಯ ಸೋಲು



ಕಳಪೆ ಬೌಲಿಂಗ್, ಅಗ್ರ ಬ್ಯಾಟರ್‌ಗಳ ಹೀನಾಯ ಪ್ರದರ್ಶನಕ್ಕೆ ಭಾರತ ಬೆಲೆತೆತ್ತಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಇಂದು ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡ 76 ರನ್‌ಗಳ ಹೀನಾಯ ಸೋಲು ಕಂಡಿದೆ. 20 ರ ಗಡಿ **ದಾಟಿದ ಏಕೈಕ ಬ್ಯಾಟರ್ ದುಬೆ:** ಗೆಲ್ಲುವ ವಿಶ್ವಾಸದಲ್ಲಿ ಚೇಸಿಂಗ್ ಆರಂಭಿಸಿದ ಭಾರತ ಮೊದಲ ಓವರ್‌ನಿಂದಲೇ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಾ ಪೆವಿಲಿಯನ್ ಪರೇಡ್ ನಡೆಸಿತು. ಮೊದಲ ಓವರ್‌ನ 4ನೇ ಎಸೆತದಲ್ಲೇ ಇಶಾನ್ ಕಿಶನ್ ಏಡನ್ ಮಾರ್ಕ್ರಂ ಬೌಲಿಂಗ್‌ಗೆ ವಿಕೆಟ್ ಒಪ್ಪಿಸಿದರು. ಪವರ್ ಪ್ಲೇ ಮುಗಿಯುವ ಹೊತ್ತಿಗೆ 31 ರನ್‌ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡಿತ್ತು.

ಪವರ್ ಪ್ಲೇ ಮುಗಿದ ಬಳಿಕವೂ ಬ್ಯಾಟರ್‌ಗಳು ರನ್ ವೇಗ ಹೆಚ್ಚಿಸುವ ಬಗ್ಗೆ ಆಸಕ್ತಿ ತೋರದ ಕಾರಣ ಟೀಂ ಇಂಡಿಯಾ ಅಲ್ಪಮೊತ್ತಕ್ಕೆ ಆಲೌಟ್ ಆಯಿತು. ಭಾರತದ ಪರ ಆಲ್‌ರೌಂಡರ್ ಶಿವಂ ದುಬೆ ಹೊರತುಪಡಿಸಿದ್ರೆ, ಉಳಿದ ಯಾವೊಬ್ಬ ಬ್ಯಾಟರ್ ಕೂಡ 20 ರನ್‌ಗಳ ಗಡಿ ದಾಟಲಿಲ್ಲ. ದುಬೆ 37 ಎಸೆತಗಳಲ್ಲಿ 42 ರನ್ (3 ಸಿಕ್ಸರ್, 1 ಬೌಂಡರಿ) ಚಚ್ಚಿದ್ರೆ, ಉಳಿದವರು ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿದ್ರು. ಇನ್ನು ಟೀಂ ಇಂಡಿಯಾ ವಿರುದ್ಧ ಬಿಗಿ ಹಿಡಿತ ಸಾಧಿಸಿದ ದಕ್ಷಿಣ ಆಫ್ರಿಕಾ ಪರ ಮಾರ್ಕೋ ಯಾನ್ಸನ್ 3.5 ಓವರ್‌ಗಳಲ್ಲಿ 22 ರನ್ ಬಿಟ್ಟುಕೊಟ್ಟು 4 ವಿಕೆಟ್ ಕಿತ್ತರೆ, ಕೇಶವ್ ಮಹಾರಾಜ್ 3 ವಿಕೆಟ್, ಕಾರ್ಬಿನ್ ಬೋಷ್ 2 ವಿಕೆಟ್ ಹಾಗೂ ಏಡನ್ ಮಾರ್ಕ್ರಂ 1 ವಿಕೆಟ್ ಪಡೆದು ಮಿಂಚಿದರು.

**ಕಿಲ್ಲರ್ ಆದ ಮಿಲ್ಲರ್:** ಇದಕ್ಕೂ ಮುನ್ನ ಬ್ಯಾಟ್ ಮಾಡಿದ್ದ ದಕ್ಷಿಣ ಆಫ್ರಿಕಾ ತಂಡ ನೊದಲ 4 ಓವರ್‌ಗಳಲ್ಲೇ ಕೇವಲ 20 ರನ್‌ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಜೊತೆಗೂಡಿದ ಡೇವಿಡ್ ಮಿಲ್ಲರ್ ಹಾಗೂ ಡೇವಾಲ್ಡ್ ಬ್ರೇವಿಸ್ ಭರ್ಜರಿ ಜೊತೆಯಾಟದ ಮೂಲಕ ಉತ್ತಮ ಇನ್ನಿಂಗ್ಸ್ ಕಟ್ಟಿದರು.

ಭಾರತೀಯ ಬೌಲರ್‌ಗಳನ್ನ ಹಿಗ್ಗಾಮುಗ್ಗಾ ಚಚ್ಚಿದ ಈ ಜೋಡಿ 51 ಎಸೆತಗಳಲ್ಲಿ 97 ರನ್‌ಗಳ ಭರ್ಜರಿ ಜೊತೆಯಾಟ ನೀಡಿತು. ಸ್ಫೋಟಕ ಅರ್ಧಶತಕ ಗಳಿಸಿದ ಡೇವಿಡ್ ಮಿಲ್ಲರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.

## ನಾ ಬದಲಾಗಲ್ಲ ಅಭಿಷೇಕ್ ತಿರುಗೇಟು



ಮೂರು ಬಾರಿ ಶೂನ್ಯಕ್ಕೆ ಔಟ್

ಟೀಮ್ ಇಂಡಿಯಾ ಆರಂಭಿಕ ದಾಂಡಿಗ ಅಭಿಷೇಕ್ ಶರ್ಮಾ ಫಾರ್ಮ್‌ನಲ್ಲಿದ್ದಾರಾ ಈ ಪ್ರಶ್ನೆಗೆ ಉತ್ತರ ಹುಡುಕುವುದೇ ದೊಡ್ಡ ಸವಾಲು. ಒಬ್ಬ ಆಟಗಾರ ಫಾರ್ಮ್‌ನಲ್ಲಿ ಇಲ್ಲ ಎನ್ನಲು ಆತನ ಕೆಲ ಇನಿಂಗ್ಸ್ ಗಳನ್ನು ನೋಡಬೇಕಾಗುತ್ತದೆ. ಇನ್ನು ಫಾರ್ಮ್‌ನಲ್ಲಿದ್ದಾರೆ ಎಂದು ಗೊತ್ತಾಗಲು ಒಂದೆರಡು ಇನಿಂಗ್ಸ್ ನೋಡಿದ್ರೂ ಸಾಕಾಗುತ್ತದೆ. ಆದರೆ ಅಭಿಷೇಕ್ ವಿಷಯದಲ್ಲಿ ಅವರು ಫಾರ್ಮ್ ನಲ್ಲಿದ್ದಾರಾ ಅಥವಾ ಇಲ್ಲವಾ ಎಂದೇಳುವುದೇ ಕಷ್ಟಕರ. ಏಕೆಂದರೆ ಅಭಿಷೇಕ್ ಅಬ್ಬರಿಸಿದರೆ ಅದು ಸಿಡಿಲಬ್ಬರ. ಇಲ್ಲದಿದ್ದರೆ ಶೂನ್ಯ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಸಾಕ್ಷಿ ಅವರು ಟಿ20 ವಿಶ್ವಕಪ್‌ಗೂ ಮುನ್ನ ಎರಡು ಸಿಡಿಲಬ್ಬರದ ಅರ್ಧಶತಕ ಬಾರಿಸಿರುವುದು. ಆದರೆ ಟಿ20 ವಿಶ್ವಕಪ್‌ನಲ್ಲಿ ಬ್ಯಾಕ್ ಟು ಬ್ಯಾಕ್ ಮೂರು ಬಾರಿ ಶೂನ್ಯಕ್ಕೆ ಔಟಾಗಿದ್ದಾರೆ. ಮೊದಲೇ ಹೇಳಿದಂತೆ ಒಂದೆರಡು ಎಸೆತಗಳಲ್ಲಿ ಬಿರುಸಿನ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸುತ್ತಿರುವುದರಿಂದ ಅವರ ಫಾರ್ಮ್‌ನಲ್ಲಿದ್ದಾರಾ ಅಥವಾ ಇಲ್ಲವಾ ಎಂದೇಳಲು ಸಾಧ್ಯವಾಗುತ್ತಿಲ್ಲ. ಬದಲಾಗಿ ಅವರ ಇಂಟೆಟ್ ಮಾತ್ರ ಇಲ್ಲಿ ಎದ್ದು ಕಾಣುತ್ತಿದೆ. ಹೀಗಾಗಿಯೇ ಸೌತ್ ಆಫ್ರಿಕಾ ವಿರುದ್ಧದ ಸೂಪರ್-8 ಪಂದ್ಯದಲ್ಲೂ ಅಭಿಷೇಕ್ ಶರ್ಮಾ ಟೀಮ್ ಇಂಡಿಯಾ ಪರ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ. ಈ ಸಾಧ್ಯತೆಗಳ ನಡುವೆ ಅಭಿ ನೀಡಿರುವ ಹೇಳಿಕೆ ಕೂಡ ಭಾರೀ ವೈರಲ್ ಆಗಿದೆ. ಖಾಸಗಿ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅಭಿಷೇಕ್ ಶರ್ಮಾ, ನನ್ನ ಆಟದ ಶೈಲಿ ಬದಲಾಯಿಸಲ್ಲ. ಸತತ ವೈಫಲ್ಯಗಳ ನಡುವೆಯೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿ ಅಥವಾ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ತಾನು ಕಳೆದ ಎರಡು ವರ್ಷಗಳಿಂದ ಒತ್ತಡ ತೆಗೆದುಕೊಳ್ಳುವುದನ್ನು ಬಿಟ್ಟಿದ್ದೇನೆ. ಕೇವಲ ತನ್ನ ಸಿದ್ಧತೆ ಹಾಗೂ ತರಬೇತಿಯ ಮೇಲೆ ಮಾತ್ರ ಗಮನ ಹರಿಸುತ್ತಿದ್ದೇನೆ ಎಂದು ಅಭಿಷೇಕ್ ಶರ್ಮಾ ಹೇಳಿದ್ದಾರೆ. ನನ್ನ ಬ್ಯಾಟಿಂಗ್ ಅನ್ನು ನಾನು ಆನಂದಿಸುತ್ತೇನೆ. ಅಭ್ಯಾಸ ಮತ್ತು ತರಬೇತಿ ಮಾತ್ರ ನಾನು ನಿಯಂತ್ರಿಸಿಕೊಳ್ಳಬಹುದು. ಹೊರತಾಗಿ ಆಕ್ರಮಣಕಾರಿ ಆಟದ ಮೇಲೆ ಗಮನವನ್ನು ಕೇಂದ್ರೀಕರಿಸುತ್ತೇನೆ. ಸಿದ್ಧತೆ , ತರಬೇತಿಯ ಅದನ್ನು ಆನಂದಿಸುತ್ತಿದ್ದೇನೆ. ಬ್ಯಾಟರ್‌ಗಳಲ್ಲಿ ಯಾವಾಗಲೂ ಏರಿಳಿತಗಳಿರುತ್ತವೆ. ಕೆಲವೊಮ್ಮೆ ರನ್‌ಗಳು ಬರುತ್ತವೆ, ಕೆಲವೊಮ್ಮೆ ರನ್ ಬರುವುದಿಲ್ಲ. ಆದರೆ ನಾನು ಒಂದು ನಿರ್ದಿಷ್ಟ ಉದ್ದೇಶದಿಂದ, ಒಂದು ನಿರ್ದಿಷ್ಟ ರೀತಿಯಲ್ಲಿ ಆಡುತ್ತೇನೆ ಎಂದು ನಿರ್ಧರಿಸಿದ್ದೇನೆ. ನಾನು ಯಶಸ್ವಿಯಾಗಬಹುದು ಅಥವಾ ಯಶಸ್ವಿಯಾಗದಿರಬಹುದು, ನಾನು ನನ್ನ ಪ್ರಕ್ರಿಯೆ ಅಥವಾ ಮನಸ್ಥಿತಿಯನ್ನು ಬದಲಾಯಿಸುವುದಿಲ್ಲ ಎಂದು ಅಭಿಷೇಕ್ ಶರ್ಮಾ ಹೇಳಿದ್ದಾರೆ.

## ಗರ್ಲ್‌ಫ್ರೆಂಡ್ ಸೋಫಿ ಶೈನ್ ಜೊತೆ ಶಿಖರ್ ಧವನ್ ವಿವಾಹ

ಭಾರತೀಯ ಕ್ರಿಕೆಟ್ ತಂಡದ ಮಾಜಿ ಬ್ಯಾಟ್ಸ್‌ಮನ್ ಶಿಖರ್ ಧವನ್ ದೆಹಲಿ ಒಎಖ ನಲ್ಲಿ ತಮ್ಮ ದೀರ್ಘಕಾಲದ ಗೆಳತಿ ಸೋಫಿ ಶೈನ್ ಅವರನ್ನು ವಿವಾಹವಾದರು. ಈ ಜೋಡಿ ಕೆಲವು ವರ್ಷಗಳ ಕಾಲ ಡೇಟಿಂಗ್ ಮಾಡುತ್ತಿದ್ದರು. 2025 ರಲ್ಲಿ ತಮ್ಮ ಸಂಬಂಧವನ್ನು ಬಹಿರಂಗಪಡಿಸಿದ್ದರು. ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ 2025 ಪಂದ್ಯದ ಸಮಯದಲ್ಲಿ ಧವನ್ ಮತ್ತು ಶೈನ್ ಮೊದಲು ಒಟ್ಟಿಗೆ ಕಾಣಿಸಿಕೊಂಡಿದ್ದರು. ಇದಕ್ಕೂ ಮೊದಲು, ಧವನ್ ತಮ್ಮ ನಿಶ್ಚಿತ ವಧು ಸೋಫಿ ಶೈನ್ ಜೊತೆಗಿನ ಸಂಗೀತ ರಾತ್ರಿಯ ಫೋಟೋಗಳನ್ನು ಪೋಸ್ಟ್ ಮಾಡಿದ್ದರು. ಜನವರಿಯಲ್ಲಿ ಧವನ್ ಮತ್ತು ಶೈನ್ ನಿಶ್ಚಿತಾರ್ಥ ಆಗುವುದಾಗಿ ಘೋಷಿಸಿದ್ದರು. 'ಹಂಚಿಕೊಂಡ ನಗುಗಳಿಂದ ಹಂಗಿಸಿದ ಕನಸುಗಳವರೆಗೆ. ನಾವು ಶಾಶ್ವತವಾಗಿ ಒಟ್ಟಿಗೆ ಇರುವುದನ್ನು ಆರಿಸಿಕೊಳ್ಳುತ್ತಿರುವಾಗ ನಮ್ಮ ನಿಶ್ಚಿತಾರ್ಥಕ್ಕಾಗಿ ಪ್ರೀತಿ, ಆಶೀರ್ವಾದಗಳು ಮತ್ತು ಪ್ರತಿಯೊಂದು ಶುಭ ಹಾರೈಕೆಗೆ

ಕೃತಜ್ಞರಾಗಿರುತ್ತೇವೆ ಅಂತ ಇನ್‌ಸ್ಟಾಗ್ರಾಮ್‌ನಲ್ಲಿಬರೆದುಕೊಂಡಿದ್ದರು. ಸೋಫಿ ಪ್ರಾಡಕ್ಟ್ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.

ಲಿಮೆರಿಕ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಮಾರ್ಕೆಟಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದಿದ್ದಾರೆ.

ಕ್ರಿಕೆಟ್ ಸೆಲೆಬ್ರಿಟಿಗಳು ಹೆಚ್ಚಾಗಿ ಸೋಷಿಯಲ್ ಮೀಡಿಯಾ ಮತ್ತು ಸಿನಿಮಾ ರಂಗದವರೊಂದಿಗೆ ಸಂಬಂಧ ಹೊಂದುವುದು ಸಾಮಾನ್ಯ. ಆದರೆ, ಸೋಫಿಯ ಪ್ರಕರಣವು ಇದಕ್ಕೆ ಭಿನ್ನವಾಗಿದೆ.



## ತವರಿನಲ್ಲೇ ಲಂಕಾ ದಹನ ಇಂಗ್ಲೆಂಡ್‌ಗೆ ವಿಲ್ ಪವರ್, 51 ರನ್‌ಗಳ ಭರ್ಜರಿ ಜಯ



ಬ್ಯಾಟರ್‌ಗಳ ವೈಫಲ್ಯದಿಂದ ತಂಡ ಸೋಲು

ಟಿ 20 ವಿಶ್ವಕಪ್ ಲೀಗ್ ಕೊನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಸೋತಿದ್ದ ಶ್ರೀ ಲಂಕಾ ತಂಡ, ಸೂಪರ್-8 ನ ಆರಂಭಿಕ ಪಂದ್ಯದಲ್ಲೇ ಇಂಗ್ಲೆಂಡ್ ವಿರುದ್ಧ ಹೀನಾಯ ಸೋಲಿಗೆ ತುತ್ತಾಗಿದೆ. ಕರಾರುವಕ್ಕಾದ ಬೌಲಿಂಗ್ ದಾಳಿಯಿಂದ 146 ರನ್‌ಗಳಿಗೆ ಆಂಗ್ಲ ಪಡೆಯನ್ನ ಲಂಕಾ ಬೌಲರ್‌ಗಳು ಕಟ್ಟಿಹಾಕಿದ್ದರು. ಆದ್ರೆ ಅಗ್ರ ಬ್ಯಾಟರ್‌ಗಳ ವೈಫಲ್ಯದಿಂದ ತಂಡ ಸೋಲು ಕಂಡಿತು. ಇಂಗ್ಲೆಂಡ್ ವಿರುದ್ಧ ಗೆಲುವಿಗೆ 147 ರನ್‌ಗಳ ಗುರಿ ಪಡೆದ ಶ್ರೀಲಂಕಾ ತಂಡ 16.4 ಓವರ್‌ಗಳಲ್ಲೇ 95 ರನ್‌ಗಳಿಗೆ ಸರ್ವಪತನ ಕಂಡಿತು. ಇದರಿಂದ ಇಂಗ್ಲೆಂಡ್ 51 ರನ್‌ಗಳ ಭರ್ಜರಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಯಿತು. ಹೀನಾಯ ಸೋಲು ಕಂಡ ಲಂಕಾ ಈಗ ಸೆಮಿಸ್ ತಲುಪುವ ಹಾದಿಯನ್ನ ಇನ್ನಷ್ಟು ಕಠಿಣವಾಗಿಸಿಕೊಂಡಿದೆ. ಪಲ್ಲೆಕೆಲೆ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಗಳದಲ್ಲಿ ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ದುಕೊಂಡ ಶ್ರೀಲಂಕಾ ತಂಡ ಇಂಗ್ಲೆಂಡ್ ವಿರುದ್ಧ ಬೌಲಿಂಗ್‌ನಲ್ಲಿ ಬಿಗಿ ಹಿಡಿತ ಸಾಧಿಸಿತು. ಡುನಿತ್ ವೆಲ್ಲಾಲಗೆ, ದಿಲ್ಯಾನ್ ಮಧುಸಂಕ, ಮಹೀಶ್ ತೀಕ್ಷಣ ಬೌಲಿಂಗ್ ದಾಳಿಗೆ ಆಂಗ್ಲ ಬ್ಯಾಟರ್‌ಗಳು ತರಗೆಲೆಗಳಂತೆ ಉದುರಿದ್ರು. ಆರಂಭಿಕ ಆಟಗಾರ ಫಿಲ್ ಸಾಲ್ಟ್ 62 ರನ್ (2 ಸಿಕ್ಸರ್, 6 ಬೌಂಡರಿ), ವಿಲ್ ಜಾಕ್ಸ್ 21 ರನ್ ಗಳಿಸಿದ್ದು ಬಿಟ್ಟರೆ ಉಳಿದೆಲ್ಲರೂ, ನೆಲಕಚ್ಚಿದರು. ಅಂತಿಮವಾಗಿ ಇಂಗ್ಲೆಂಡ್ 9 ವಿಕೆಟ್ ನಷ್ಟಕ್ಕೆ 20 ಓವರ್‌ಗಳಲ್ಲಿ 146 ರನ್ ಗಳಿಸಿತು. ಸುಲಭ ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡ ಗೆಲುವಿನ ವಿಶ್ವಾಸದದಲ್ಲಿ ಕಣಕ್ಕಿಳಿದಿತ್ತು. ಆದ್ರೆ ಪವರ್ ಪ್ಲೇ ನಲ್ಲಿ ಅಂದ್ರೆ 5.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಮಧ್ಯಮ ಕ್ರಮಾಂಕದಲ್ಲಿ ನಾಯಕ ದಸುನ್ ಶನಾಕ 30 ರನ್ ಗಳಿಸಿ ತಂಡಕ್ಕೆ ಚೇತರಿಕೆ ನೀಡಿದ್ರು. ಶನಾಕ ವಿಕೆಟ್ ಕಸಿಯುತ್ತಿದ್ದಂತೆ ಗೆಲುವಿನ ಕನಸು ಭಗ್ನಗೊಂಡಿತು. ಅಂತಿಮವಾಗಿ ಲಂಕಾ 95 ರನ್‌ಗಳಿಗೆ ಸರ್ವಪತನಗೊಂಡಿತು.

## ಪವರ್' ಇಲ್ಲ ಬಾಬರ್ ಆಝಂ ಮಾನ ಕಳೆದ ಪಾಕ್ ಕೋಚ್



ಪಾಕಿಸ್ತಾನ್ ತಂಡದಲ್ಲಿ ಬಾಬರ್ ಆಝಂ ಅವರ ರೋಲ್ ಏನು? ಈ ಪ್ರಶ್ನೆಗೆ ಪಾಕ್ ತಂಡ ಕೋಚ್ ಮೈಕ್ ಹೆಸ್ಸನ್ ಬಳಿಯೇ ಸ್ಪಷ್ಟ ಉತ್ತರವಿಲ್ಲ. ಇದಕ್ಕೆ ಸಾಕ್ಷಿ ಸುದ್ದಿಗೋಷ್ಠಿಯಲ್ಲಿ ಅವರು ನೀಡಿರುವ ಹೇಳಿಕೆ. ನಮೀಬಿಯ ವಿರುದ್ಧದ ಪಂದ್ಯದಲ್ಲಿ ಬಾಬರ್ ಆಝಂ ಅವರನ್ನು ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿಸದೇ ಇರುವ ಕಾರಣವೇನು ಎಂಬ ಪ್ರಶ್ನೆಯನ್ನು ಹೆಸ್ಸನ್ ಮುಂದಿಡಲಾಗಿತ್ತು. ಈ ಪ್ರಶ್ನೆಗೆ ಅವರಿಂದ ಬಂದ ಉತ್ತರ ಪವರ್ ಇಲ್ಲ. ಅಂದರೆ ಪಾಕ್ ತಂಡದ ಮೂರನೇ ವಿಕೆಟ್ ಪತನವಾದ್ದು 12ನೇ ಓವರ್‌ನಲ್ಲಿ. ಈ ವೇಳೆ ಬಿರುಸಿನ ಬ್ಯಾಟಿಂಗ್ ಮಾಡುವುದು ಅಗತ್ಯವಿತ್ತು. ಆದರೆ ಬಾಬರ್ ಆಝಂಗೆ ಆಕ್ರಮಣಕಾರಿ ಬ್ಯಾಟಿಂಗ್ ಬರುವುದಿಲ್ಲ. ಹೀಗಾಗಿ ಖ್ವಾಜಾ ನಫಾಯ್ ಹಾಗೂ ಶಾದಾಬ್ ಖಾನ್‌ಗೆ ಮುಂಬಡ್ತಿ ನೀಡಲಾಯಿತು ಎಂದಿದ್ದಾರೆ.

ಇದೇ ವೇಳೆ ಬಾಬರ್ ಆಝಂ ಈ ಹಿಂದೆ ಪಾಕಿಸ್ತಾನ್ ಪರ ಆರಂಭಿಕನಾಗಿ ಕಣಕ್ಕಿಳಿದಿದ್ದರು ಎಂಬುದನ್ನು ಪತ್ರಕರ್ತರು ಜ್ಞಾಪಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಮೈಕ್ ಹೆಸ್ಸನ್, ಬಾಬರ್ ಅವರ ಪವರ್‌ಪ್ಲೇ ಸ್ಟ್ರೈಕ್ ರೇಟ್ 100 ಕ್ಕಿಂತ ಕಡಿಮೆ ಇರುವುದರಿಂದ, ಅವರನ್ನು ಆರಂಭಿಕ ಆಟಗಾರನ ಸ್ಥಾನದಿಂದ ಕೆಳಗಿಳಿಸಿದ್ದೇವೆ. ಹೀಗಾಗಿ ಅವರು ನಾಲ್ಕನೇ ಕ್ರಮಾಂಕದಲ್ಲಿ ಆಡುತ್ತಿದ್ದಾರೆ. ಮಧ್ಯಮ ಓವರ್‌ಗಳಲ್ಲಿ ತಂಡವು ಸಂಕಷ್ಟದಲ್ಲಿದ್ದಾಗ ಇನ್ನಿಂಗ್ಸ್‌ಗೆ ಸ್ಥಿರತೆ ನೀಡಲು ಬಾಬರ್ ಆಝಂ ಸೂಕ್ತ ಆಟಗಾರ. ಆದರೆ ಅವರು ಪವರ್ ಹಿಟ್ಟರ್ ಅಲ್ಲ ಎಂಬುದೇ ಸತ್ಯ..ಪಂದ್ಯದ 12ನೇ ಓವರ್ ನಂತರ ಬಾಬರ್ ಆಝಂ ಕ್ರೀಸ್‌ಗೆ ಬರುವುದು ತಂಡಕ್ಕೆ ಅಷ್ಟೊಂದು ಲಾಭದಾಯಕವಲ್ಲ.

ಆ ಸಮಯದಲ್ಲಿ ಅವರಿಗಿಂತ ವೇಗವಾಗಿ ರನ್ ಗಳಿಸುವ ''ಪವರ್ ಹಿಟ್ಟರ್‌ಗಳು ತಂಡಕ್ಕೆ ಅಗತ್ಯ ಎಂದು ಹೆಸ್ಸನ್ ಅಭಿಪ್ರಾಯಪಟ್ಟಿದ್ದಾರೆ. ಇದೇ ಕಾರಣದಿಂದಾಗಿ ನಾವು ನಮೀಬಿಯ ವಿರುದ್ಧದ ಪಂದ್ಯದಲ್ಲಿ ಬಾಬರ್ ಆಝಂ ಅವರನ್ನು ಬ್ಯಾಟಿಂಗ್‌ಗೆ ಇಳಿಸಿರಲಿಲ್ಲ. ಅವರ ಬದಲಿಗೆ ಖ್ವಾಜಾ ,ಶಾದಾಬ್ ಖಾನಗೆ ಮುಂಬಡ್ತಿ ನೀಡಲಾದೆ ಎಂದು ಹೆಸ್ಸನ್ ತಿಳಿಸಿದ್ದಾರೆ. ಇನ್ನು ಬಾಬರ್ ಆಝಂ ತಮ್ಮ ಸ್ಟ್ರೈಕ್ ರೇಟ್ ಹೆಚ್ಚಿಸಿಕೊಳ್ಳುವತ್ತ ಮತ್ತು ವಿಶೇಷವಾಗಿ ಸ್ಪಿನ್ ಬೌಲಿಂಗ್ ವಿರುದ್ಧ ಉತ್ತಮವಾಗಿ ಆಡುವತ್ತ ಗಮನಹರಿಸಬೇಕು ಎಂದು ಮೈಕ್ ಹೆಸ್ಸನ್ ಸೂಚಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966